now peaceful. ಇನ್ನು ಮೆಜಾರಿಟಿ ಇಲ್ಲದೆ, ಕಾನೂನಿಗೆ ವಿರುದ್ಧವಾಗಿ ಅವರು ಏನಾದರೂ ರೆಜಲ್ಯೂಷನ್ ಪಾಸ್ ಮಾಡಿದ್ದಾರೆಯೋ ಎನ್ನುವುದನ್ನು ನೋಡುವುದಕ್ಕೆ th Municipal Act is there and I will ask the Deputy Commissioner or whoever is the authority to go into the question separately.

ಶ್ರೀಮತಿ ರೇಣುಕಾ ರಾಜೇಂದ್ರನ್.—ಆ ಮೇಲೆ ಶ್ರೀ ಎಸ್. ಐ. ಮರಿಯಪ್ಪ ಮತ್ತು ಶ್ರೀ ಹನುಮಂತರಾಯಪ್ಪ ಎನ್ನುವವರು ಕನ್‌ಟಿನ್ಯೂಯಸ್ ಆಗಿ ೬ ಮೀಟಿಂಗ್‌ಗಳಿಗೆ ಹಾಜರಾಗಿಲ್ಲ ಅದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಅದರ ಬಗ್ಗೆ ನಮ್ಮ ಪಕ್ಷದವರು ನನಗೆ ಫೋಟೋ ಸ್ಟ್ಯಾಟ್ ಕಾಪೀಸ್ ತಂದು ಕೊಟ್ಟಿದ್ದಾರೆ. ಅದನ್ನು ಬೇಕಾದರೆ ನಿಮಗೆ ಕಳುಹಿಸಿಕೊಡುತ್ತೇನೆ. ಆ ಮೇಲೆ ಜನತಾ ಪಕ್ಷದವರು ನಮಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಮೊನ್ನೆ ನಡೆದ ಟಿ.ಡಿ.ಬಿ. ಎಲೆಕ್ಷನ್‌ನಲ್ಲೂ ಮತ್ತು ಅಸೆಂಬ್ಲಿ ಚುನಾವಣೆಯಲ್ಲೂ ಸಹ ನನಗೆ ಬಹಳ ತೊಂದರೆ ಕೊಟ್ಟಿದ್ದಾರೆ. ಚುನಾವಣೆ ಕ್ಯಾನ್‌ವಾಸ್ ಮಾಡುವುದಕ್ಕೆ ಹೋದಾಗ ಹಳ್ಳಿಹಳ್ಳಿಗೂ ನಮ್ಮ ಜೊತೆಯಲ್ಲಿ ಕಾರಿನಲ್ಲಿ ಫಾಲೋ ಮಾಡಿ ಖಾರದಪುಡಿ ಮತ್ತು ಆಸಿಡ್ ಎಸೆದಿದ್ದಾರೆ, ಇಂಥಾದ್ದು ಒಂದಲ್ಲ ಎರಡಲ್ಲಾ.

ಅಧ್ಯಕ್ಷರು.—ತಮಗೆ ಏನು ಮಾಹಿತಿ ಬೇಕೋ ಅದನ್ನು ಕೇಳಿ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಿ ಮತ್ತು ನಾನು ಆಗಲೇ ಹೇಳಿದ ಇಬ್ಬರು ಸದಸ್ಯರನ್ನು ಕೂಡಲೇ ಡಿಸ್‌ಕ್ವಾಲಿಫೈ ಮಾಡಿ, ಎಂದು ಹೇಳುತ್ತೇನೆ. ಶ್ರೀ ಕೆ. ಎಂ. ಶ್ರೀನಿವಾಸ್‌ರವರು ಗಲಾಟೆಯಾದಾಗ ಸಭೆಯ ಒಳಗಡೆಯೇ ಇದ್ದರು, ಗಲಾಟೆಗೂ ಅವರಿಗೂ ಏನೂ ಸಂಬಂಧವಿಲ್ಲ ಆದುದರಿಂದ ತಾವು ಇನ್ನೊಂದು ಸಾರಿ ತನಿಖೆ ಮಾಡಿ ವರದಿಯನ್ನು ತರಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಸ್ವಾಮಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯಣೀಯವರು ಜನತಾ ಪಕ್ಷದಿಂದ ತೊಂದರೆ ಯಾಗುತ್ತಿದೆಂದು ಹೇಳುತ್ತಿದ್ದಾರೆ. ಅವರೂ ಸಹ ಚುನಾಯಿತರಾಗಿ ಬಂದಿದ್ದಾರೆ, ಯಾರೋ ಒಬ್ಬಿಬ್ಬರಿಂದ ಅವರಿಗೆ ತೊಂದರೆಯಾಗಿರಬಹುದು ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳವರು ಪೋಲಿಸ ರಿಂದ ಸರಿಯಾದ ರಕ್ಷಣೆ ಕೊಡಿಸಬೇಕು. ಹಾಗೂ ಮಾನ್ಯ ಮುಖ್ಯಮಂತ್ರಿಗಳವರು ಮಾನ್ಯ ಸದಸ್ಯಣೀ ಯವರನ್ನು ಮಂತ್ರಿಗಳನ್ನಾಗಿ ಮಾಡಿ ಬಿಟ್ಟರೆ ಆಗ ಅವರ ತಂಟೆಗೂ ಯಾರೂ ಹೋಗುವುದಿಲ್ಲ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಖಾರದ ಪುಡಿ ಹಾಕುವುದು, ಆಸಿಡ್ ಹಾಕುವುದು ಮತ್ತು ನಮ್ಮ ಕಾರ್ಯಕರ್ತರಿಗೆ ಕಾಲು ಕೈ ಸಹ ಮುರಿಯುವುದು ಆ ರೀತಿ ಮಾಡಿದರೆ ನಾವು ಸಹ ಮಾಡ ಬೇಕಾಗುತ್ತದೆ. ಆದುದರಿಂದ ದಯವಿಟ್ಟು ನಿಮ್ಮ ಕಾರ್ಯಕರ್ತರಿಗೆ ಆ ರೀತಿ ಮಾಡಕೂಡದೆಂದು ತಾವು ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ರೀತಿ ಆಗುವುದು ಬೇಡ. ನಮ್ಮ ಕಾರ್ಯಕರ್ತರೇ ಆಗಲೀ ನಿಮ್ಮ ಕಡೆಯವರಿಂದಲೇ ಆಗಲಿ ಆ ರೀತಿ ಆಗಬಾರದು. ಅದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ರಕ್ಷಣೆ ಕೊಡಬೇಕೆಂದು ಹೇಳುತ್ತೇನೆ. ನಮ್ಮ ಕಾರ್ಯಕರ್ತರು ಆ ರೀತಿ ಮಾಡುವುದಿಲ್ಲ.....

ಅಧ್ಯಕ್ಷರು.—ಇಲ್ಲಿಗೆ ಆ ವಿಷಯ ಮುಕ್ತಾಯ ಮಾಡೋಣ.

Budget Estimets for 1978–79
Demands for Grants

Demand No. 1, 3, 33. 35 (Debate Continued)

† ಶ್ರೀ ಕೆ. ಎಚ್. ರಂಗನಾಥ್ (ವ್ಯವಸಾಯ ಮತ್ತು ಸಂಸದೀಯ ಇಲಾಖೆ ಸಚಿವರು) — ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಈ ಸಭೆಯ ಮುಂದೆ ಮಂಡಿಸಿರುವ ವ್ಯವಸಾಯ ಇಲಾಖೆ ಬೇಡಿಕೆಗಳ ಮೇಲೆ ಲೆಜಿಸ್ಲೇಚರ್ ಮತ್ತು ಎಲೆಕ್ಷನ್ ಡಿಮಾಂಡ್ ನಂ. ೩೩, ೩೫, ೩, ಮತ್ತು ೧ ಈ ಬೇಡಿಕೆಗಳ ಮೇಲೆ ಅನೇಕ ಸದಸ್ಯರು ಮಾತನಾಡಿ ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ ಇನ್ನು ಕೆಲವರು ಟೀಕೆಗಳನ್ನು ಮಾಡಿದ್ದಾರೆ. ಅದರಲ್ಲಿ ಹೆಚ್ಚು ಸದಸ್ಯರು ವ್ಯವಸಾಯ ಇಲಾಖೆಗೆ ಸಂಬಂಧಪಟ್ಟಂತೆ ಮಾತನಾಡಿದ್ದಾರೆ.

ಈಗ ಸ್ವಾಮಿ, ಮಾನ್ಯ ಶಾಮಣ್ಣನವರು ಮಾತ್ರ ಈ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ಕಟ್‌ಮೋಷನ್ಸ್ ಕಳುಹಿಸಿದ್ದಾರೆ ಹಾಗೂ ಇನ್ನು ಕೆಲವಾರು ವಿಚಾರಗಳನ್ನು ಹೇಳಿದ್ದಾರೆ. ಇನ್ನು ಮೂರನೆಯದಾಗಿ ಕೆಲವರು ವ್ಯವಸಾಯ ಇಲಾಖೆಯ ನೀತಿಗೆ ಸಂಬಂದಪಟ್ಟಂತೆ ಕೂಡ ಮಾತನಾಡಿದ್ದಾರೆ. ಅವರ ಕಟ್‌ಮೊಷನ್ಸ್ ನೋಡಿದರೆ ಅವರು ಮಾತನಾಡತಕ್ಕ ಅವಕಾಶ ದೊರೆಯಲಿಲ್ಲವೋ ಅಥವಾ ಅವರ ಹೆಸರನ್ನು ಕೊಡಲಿಲ್ಲವೋ ಏನೋ ಎಂದು ಗೊತ್ತಾಗಲಿಲ್ಲ. ಆದ್ದರಿಂದ ಈ ಬೇಡಿಕೆ ಮೇಲೆ ಚರ್ಚೆ ಪ್ರಾರಂಭ ಮಾಡುತ್ತಾ, ಶ್ರೀಮಾನ್ ರಾಜಶೇಖರ್‌ರವರು ಹೆಚ್ಚು ಕಾಲ ವ್ಯವಸಾಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಒಟ್ಟು ೧೮ ಜನ ಸದಸ್ಯರು ಆ ಕಡೆ ಮತ್ತು ಈ ಕಡೆಯಿಂದ ಕೂಡಿ ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹೆಚ್ಚು ಭಿನ್ನಾಭಿಪ್ರಾಯವಿಲ್ಲದೆ ಒಳ್ಳೆಯ ಅಭಿಪ್ರಾಯಗಳು ಇದರಿಂದ ವ್ಯಕ್ತವಾಗಿವೆಯೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಇದರಲ್ಲಿ ಹೆಚ್ಚು ರೈತರಿಗೆ ಲಾಭದಾಯಕವಾಗುವ ರೀತಿಯಲ್ಲಿ ಅವರು ಬೆಳೆದ ಫಸಲಿಗೆ ಸರಿಯಾದ ಬೆಲೆ ಸಿಕ್ಕುವಂತೆ ಮಾಡಬೇಕು ಹಾಗೂ ರೈತರ ಶೋಷಣೆಯನ್ನು ತಪ್ಪಿಸಬೇಕೆಂದು ಹಾಗೂ ಈ ಇಲಾಖೆಗೆ ಇಟ್ಟಿರುವ ಹಣ ಸಾಲದು ಎನ್ನುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೆಲವರು ಟೀಕೆಗಳನ್ನು ಮಾಡಿದ್ದಾರೆ ಆದರೆ ಹೆಚ್ಚು ಜನ ಸದಸ್ಯರಿಂದ ಟೀಕೆಗಳು ಬರಲಿಲ್ಲ. ಒಬ್ಬಿಬ್ಬರು ನಮ್ಮ ವಿಸ್ತರಣಾಧಿಕಾರಿಗಳು ಆಗಾಗ ಕ್ಷೇತ್ರ ಪ್ರದೇಶಗಳಿಗೆ ಹೋಗುತ್ತಾ ಇಲ್ಲವೆಂದು ಹೇಳಿದ್ದಾರೆ. ನಾನು ಅವರ ಬಗ್ಗೆ ನನ್ನ ಗಮನಕ್ಕೆ ತೆಗೆದುಕೊಂಡಿದ್ದೇನೆ. ಇನ್ನು ಸೂಕ್ತವಾದ ಕ್ರಮ ತೆಗೆದುಕೊಂಡು ರೈತರಿಗೆ ಹೆಚ್ಚಿನ ಅನುಕೂಲವಾಗುವಂತೆ ಕೆಲಸ ಮಾಡುತ್ತೇನೆಂದು ಹೇಳಬಯಸುತ್ತೇನೆ. ಇನ್ನು ಮಾನ್ಯ ಶಾಮಣ್ಣನವರು ಕಟ್‌ಮೋಷನ್ಸ್ ಏನು ಕಳುಹಿಸಿದ್ದಾರೆ ಅದರ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪ ಮಾಡತಕ್ಕಂಥಾದ್ದು ಉಚಿತವೆಂದು ಭಾವಿಸುತ್ತೇನೆ. ಮಾನ್ಯ ಶಾಮಣ್ಣನವರು failure of the Government in bringing all valuable lands under cultivation......ಎಂದು ಹೇಳಿ ರಾಜ್ಯದ ಎಲ್ಲಾ ಭೂಮಿಯನ್ನು ವ್ಯವಸಾಯ ಇಲಾಖೆಗೆ ಅಳವಡಿಸಿಲ್ಲ, ಅಳವಡಿಸುವಲ್ಲಿ ಸರ್ಕಾರ ವಿಫಲವಾಗಿದೆ, ವ್ಯವಸಾಯದ ಬಾಬನ್ನು ಲಾಭದಾಯಕವಾದ ಉದ್ಯಮವನ್ನಾಗಿ ಮಾಡುವುದರಲ್ಲಿ ವಿಫಲವಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಹಸುವಿನ ಗೊಬ್ಬರ ಕೊಟ್ಟಿಗೆ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರ ಇವುಗಳಲ್ಲಿ ಕೊಟ್ಟಿಗೆ ಗೊಬ್ಬರಕ್ಕೆ ಹೆಚ್ಚು ಸಹಾಯ ಮಾಡಬೇಕು ಎಂದು ಹೇಳಿದ್ದಾರೆ. ಸಬ್ಸಿಡೈಸ್ಡ್ ರೇಟಿನಲ್ಲಿ ಗೊಬ್ಬರವನ್ನು ರೈತನಿಗೆ ಸಿಕ್ಕುವಂತೆ ಮಾಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಇನ್ನು ಕೇ ವರು ಸಣ್ಣ ವ್ಯವಸಾಯಗಾರರು ಹಾಗೂ ಹರಿಜನ ಗಿರಿಜನರಿಗೆ ಸಹಾಯ ಮಾಡಬೇಕು ಎಂದು ಪ್ರಸ್ತಾಪ ಮಾಡಿದ್ದಾರೆ. ನಾನು ಈಗ ಹೇಳಬೇಕೆಂದರೆ ಮಾನ್ಯ ಸದಸ್ಯರು ಸ್ವಲ್ಪ ಅಂಕಿಅಂಶಗಳನ್ನು ಇದರ ಬಗ್ಗೆ ಗಮನಿಸಿದರೆ ಬಹಳ ಮಟ್ಟಿಗೆ ಸರ್ಕಾರ ಹೆಚ್ಚು ಕೆಲಸ ಮಾಡಿದೆಯೆಂದು ಸ್ಪಷ್ಟವಾಗುತ್ತದೆ. ಇನ್ನು ಹೆಚ್ಚು ಹೇಳತಕ್ಕಂಥಾದ್ದು ಅವಶ್ಯಕತೆಯಿಲ್ಲವೆಂದು ಭಾವಿಸುತ್ತೇನೆ. ಇವತ್ತು ಮಾನ್ಯ ಶಾಮಣ್ಣನವರು ಕೊಟ್ಟಿರತಕ್ಕಂಥ ಕಟ್‌ಮೋಷನ್ಸ್‌ನಲ್ಲಿ ರಾಜ್ಯದ ಎಲ್ಲಾ ಭೂಮಿಯನ್ನು ವ್ಯವಸಾಯಕ್ಕೆ ಅಳವಡಿಸಿಲ್ಲ ಎನ್ನುವುದನ್ನೇ ಮುಖ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಟೋಟಲ್ ಭೂಮಿ ಜಾಗ್ರಫಿಕಲ್ ಆಗಿ. ಒಟ್ಟು ಏರಿಯಾ 191.16 lakhs hectares, ಇದೆ. ಅದರಲ್ಲಿ sown area 103.6 lakhs hectares, fallow land–15.67 lakhs hectares, uncultivable lands–24.22 lakhs hectares, forests–29.01 lakhs hectares ಇದೆ. ೨೪.೨೨ ಹೆಕ್ಟೇರ್ಸ್ ಅನ್‌ಕಲ್ಟಿವಬಲ್, ಬೆಟ್ಟ ಗುಡ್ಡ ಕಾಡು, ಇವುಗಳನ್ನು ಬಿಟ್ಟರೆ ಉಳಿದ ಭೂಮಿಯನ್ನು ಬೇರೆ ವ್ಯವಸಾಯ ಕೆಲಸಕ್ಕೆ ಹಾಗೂ ಜನಶಕ್ತಿಗೆ ಅನುಕೂಲವಾಗುವಂತೆ ಈ ಒಂದು ರಂಗದಲ್ಲಿ ವ್ಯವಸ್ಥೆ ಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಜೆ. ಎಚ್. ಪಟೇಲ್‌ರವರು ಒಂದು ಮಾತನ್ನು ಹೇಳಿದರು ಕೃಷಿಯನ್ನು ವೈಜ್ಞಾನಿಕ ರೀತಿಯಲ್ಲಿ ಹಾಗೂ ಲಾಭದಾಯಕ ಮಾಡಬೇಕಾದರೆ ಹೆಚ್ಚು ಶ್ರಮಪಡಬೇಕು ಎಂದು. ಅದಕ್ಕೆಲ್ಲಾ ಆದ್ಯತೆ ಅವಶ್ಯಕವಾಗುತ್ತದೆ. ಇನ್ನು ಮಾನ್ಯ ರಾಜಶೇಖರ್‌ರವರು ಮಾತನಾಡುತ್ತಾ ವ್ಯವಸಾಯ ಕೈಗಾರಿಕೆ ಬಗ್ಗೆ ಸರ್ಕಾರ ಮರೆತುಹೋಗಿದೆ ಮಂತ್ರಿಗಳು ಅದಕ್ಕೆ ಎಷ್ಟು ಪ್ರಾಶಸ್ತ್ಯ ಕೊಡಬೇಕಿತ್ತೋ ಅಷ್ಟು ಕೊಟ್ಟಿಲ್ಲ ಎಂದು ಹೇಳಿದರು. ಹಾಗೆಯೇ ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಮ್ಯಾನಿಫೆಸ್ಟೋವನ್ನು ಓದುವುದಕ್ಕೆ ಪ್ರಯತ್ನಪಟ್ಟರು. ಈ ಕೃಷಿ ಕೈಗಾರಿಕೆ ವಿಚಾರವಾಗಿ ೭೭ರ ಫೆಬ್ರುವರಿಯಿಂದ ಈಚೆಗೆ ಏನಾದರೂ ಸಣ್ಣ ಕೆಲಸ ನಡೆದಿದ್ದರೆ ಅದು ಬೆಳಿಗ್ಗೆ ಮಧ್ಯಾಹ್ನ ಹಾಗೂ ಸಂಜೆ ಆಲ್ ಇಂಡಿಯಾ ರೇಡಿಯೋದಲ್ಲಿ ಬರುತ್ತದೆ. ಹಿಂದೆ ಆಲ್ ಇಂಡಿಯಾ ರೇಡಿಯೋದಲ್ಲಿ ಯಾವುದೇ

ವಿಚಾರ ಬಂದರೂ ಅದನ್ನು ಆಲ್ ಇಂಡಿಯಾ ರೇಡಿಯೋ ಅಥವಾ ಆಲ್ ಇಂದಿರಾ ರೇಡಿಯೋ ಎಂದು ಹೇಳುತ್ತಿದ್ದರು. ಈಗ ಅದು ಆಲ್ ಇಂಡಿಯಾ ರೇಡಿಯೋ ಅಥವಾ ಆಲ್ ಅದ್ವಾನಿ ರೇಡಿಯೋ ಎಂದು ಹೇಳಬಹುದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳಿದ್ದು ಕೇಂದ್ರದ ಬಡ್ಜೆಟ್‌ನಲ್ಲಿ ನೀರಾವರಿಗೆ ಶೇಕಡ ೪೦ ರಷ್ಟು ಹಣ ಕೊಟ್ಟಿದ್ದಾರೆಂದು ಹೇಳಲಿಲ್ಲ ಅಥವಾ ಬರೀ ಅಗ್ರಿಕಲ್ಚರ್‌ಗೆ ಎಂದೂ ಹೇಳಲಿಲ್ಲ, ಒಟ್ಟಿನಲ್ಲಿ ರೂರಲ್ ಏರಿಯಾಕ್ಕೆ ಎಲ್ಲಾ ಡೆವಲಪ್‌ಮೆಂಟ್ಸ್‌ಗೆ ಕೊಟ್ಟಿದ್ದಾರೆಂದು ಹೇಳಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ತಾವು ಅಗ್ರಿಕಲ್ಚರ್‌ಗೆ ಎಂದು ಹೇಳಿದಿರಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ರೇಡಿಯೋದಲ್ಲಿ ವ್ಯಕ್ತಿಯ ಹೆಸರು ಈಗ ಬರುವುದಿಲ್ಲ. ಸರ್ಕಾರದವರು ಮಾಡಿರುವ ಕೆಲಸದ ಬಗ್ಗೆ ಬರುತ್ತಾ ಇದೆ.

ಶ್ರೀ ಕೆ. ಎಚ್. ರಂಗನಾಥ್.—ನಾನೂ ಕೂಡ ಈ ಬೇಡಿಕೆ ಬರುವುದಕ್ಕೆ ಮುಂಚಿತವಾಗಿ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡುತ್ತಿದ್ದೆ. ಕೇಂದ್ರ ಸರ್ಕಾರದಿಂದ ೧೦೦ಕ್ಕೆ ೪೦ ಭಾಗ ಹಣ ಬರುತ್ತದೆ ಎಂಬುದಾಗಿ ಹೇಳುತ್ತಿದ್ದಾರಲ್ಲಾ ಅದರಂತೆ ಏನಾದರೂ ಬಂದಿದೆಯೋ ಎಂಬುದಾಗಿ ನಮ್ಮ ಅಧಿಕಾರಿಗಳನ್ನು ಕೇಳುತ್ತಿದ್ದೆ. ಪ್ಲಾನ್ ರೋಲಾಗುತ್ತಿರುತ್ತದೆ. We call it as Rolling Plan. ಕೇಂದ್ರ ಸರ್ಕಾರದವರು ೧೦೦ಕ್ಕೆ ೪೦ ಭಾಗ ವ್ಯವಸಾಯಕ್ಕೆ ಖರ್ಚು ಮಾಡಬೇಕೆಂದು ಏನು ಹೇಳಿದ್ದಾರೆ, ಆ ಬಗ್ಗೆ ನಮಗೆ ಇನ್ನೂ ಸ್ಪಷ್ಟವಾಗಿ ಎಷ್ಟು ಹಣವನ್ನು ಕೊಡುತ್ತಾರೆನ್ನುವುದರ ಚಿತ್ರ ನಮಗಿನ್ನೂ ಬಂದಿಲ್ಲ. ಬಹಳ ಮಟ್ಟಿಗೆ ಬಂದರೆ ಈ ೪೦ ಪರ್ಸೆಂಟ್ ಎಂಬುದಾಗಿ ಏನು ಹೇಳುತ್ತಿದ್ದಾರೆ ಅದರಲ್ಲಿ ೧೦ ಭಾಗ ಗ್ರ್ಯಾಂಟ್ ರೂಪದಲ್ಲಿ ಬಂದರೆ ಅದು ನಮಗೆ ಪುಣ್ಯ. ಇಂತಹ ಪರಿಸ್ಥಿತಿಯಲ್ಲಿದ್ದೇವೆ. ಆದ್ದರಿಂದ ತಾವೂ ಕೂಡ ಇದರ ಬಗ್ಗೆ ಹೆಚ್ಚಿಗೆ ಕೆದಕಿ ನೋಡಬೇಕಾಗಿದೆ. ವಿಚಾರ ಮಾಡಿ ನೋಡಬೇಕಾಗಿದೆ. ಒಂದು ಅಂಶವನ್ನು ತಮಗೆ ತಿಳಿಸುತ್ತಿದ್ದೇನೆ. ನಮ್ಮ ರಾಜ್ಯ ಸರ್ಕಾರದವರು ೧೯ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ನನ್ನ ಬೇಡಿಕೆಯಲ್ಲಿ ಏನು ಹೇಳಿದ್ದೇನೆ, ಅದು ವ್ಯವಸಾಯದ ಅಭಿವೃದ್ಧಿಗೆ ಮತ್ತು ಸಾಯಿಲ್ ಕನ್‌ಸರ್ವೇಷನ್‌ಗಾಗಿ. ಇಷ್ಟು ಹಣವನ್ನು ಮಾತ್ರ ನಾವು ಒದಗಿಸಿರತಕ್ಕಂಥಾದ್ದು. ಮೇಜರ್ ಇರಿಗೇಷನ್ ಮೈನರ್ ಇರಿಗೇಷನ್ ವಗೈರೆ ಅವುಗಳಿಗೆ ಖರ್ಚುಮಾಡಿರುವುದನ್ನು ತಾವು ಗಣನೆಗೆ ತೆಗೆದುಕೊಳ್ಳುವುದಾದರೆ, ಎಷ್ಟು ಹಣವನ್ನು ನಾವು ಒದಗಿಸಿದ್ದೇವೆ ಎನ್ನತಕ್ಕಂಥಾದರ ಅಂಕಿ ಅಂಶ ನಿಮಗೆ ದೊರೆಯುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ರಾಜಶೇಖರನ್‌ರವರು ಒಂದು ಮಾತನ್ನು ಹೇಳಿದರು. ಇವತ್ತು ವ್ಯವಸಾಯ ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ಪ್ರಮುಖವಾಗಿ ನೀರು ಬೇಕಾಗುತ್ತದೆ. ತದನಂತರ ಮೇಜರ್ ಇನ್‌ಪುಟ್ಸ್ ಎಂಬುದಾಗಿ ನಾವು ಏನು ಹೇಳುತ್ತೇವೆ ಅದರಂತೆ ಗೊಬ್ಬರ, ಕ್ರಿಮಿನಾಶಕ ಇದಕ್ಕೆ ಬೇಕಾಗಿರತಕ್ಕಂಥ ಹಣದ ಸವಲತ್ತು. ಇವತ್ತು ನೀರಾವರಿಗೆ ಅನುಕೂಲವಾಗಿದೆ ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ, ಇವತ್ತು ನಾವು ೯೦ ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿಯ ಅನುಕೂಲವನ್ನು ಒದಗಿಸಿಕೊಡುವುದಕ್ಕೆ ಖರ್ಚುಮಾಡಿರತಕ್ಕಂಥ ಹಣವನ್ನು ತಾವು ಗಣನೆಗೆ ತೆಗೆದುಕೊಳ್ಳುವುದಿಲ್ಲವೇ ? ಇದು ವ್ಯವಸಾಯದ ಅಭಿವೃದ್ಧಿಗಾಗಿ ಖರ್ಚುಮಾಡಿರತಕ್ಕಂಥ ಹಣ ಅಲ್ಲವೇ ? ಇದರ ಜೊತೆಗೆ ಇನ್ಸಿಟ್ಯೂಷನಲ್ ಫೈನಾನ್ಸ್ ಅಂದರೆ ಕ್ರಾಪ್ ಲೋನ್‌ಗೆ ವಗೈರೆಗೆ ನಾವು ಖರ್ಚು ಮಾಡಿರತಕ್ಕಂಥಾದ್ದು ಸುಮಾರು ೬೨ ಕೋಟಿ ರೂಪಾಯಿಗಳು ಬರುತ್ತದೆ. ಟರ್ಮ್ ಲೋನ್ ೪.೮೩ ಕೋಟಿ ರೂಪಾಯಿಗಳು ಬರುತ್ತದೆ ಏರಿಯಾ ಡೆವಲಪ್‌ಮೆಂಟ್‌ಗಾಗಿ ಖರ್ಚು ಮಾಡಿರತಕ್ಕಂಥ ಹಣ ೧೭,೯೦ ಕೋಟಿ ರೂಪಾಯಿಗಳಿಗೆ ಬರುತ್ತದೆ, ಇನ್ನು ಮಾರುಕಟ್ಟೆ ವ್ಯವಸ್ಥೆ ಇಲ್ಲ ಎನ್ನುವ ಮಾತನ್ನು ಮಾನ್ಯ ಸದಸ್ಯರೊಬ್ಬರು ಹೇಳಿದರು. ಈ ರಾಜ್ಯದಲ್ಲಿ ಮಾರುಕಟ್ಟೆ ವ್ಯವಸ್ಥೆ ಇದೆ. ಆದರೆ ಅದರಲ್ಲಿ ಏನು ನಡೆಯುತ್ತಿದೆ ? ಎನ್ನುವುದು ಸರಿಯಾಗಿ ನಮ್ಮ ಗಮನಕ್ಕೆ ಬಂದಿಲ್ಲ. ಆದರೂ ಇದರ ವ್ಯವಸ್ಥೆಯನ್ನು ಮಾಡುವುದಕ್ಕಾಗಿ ಸುಮಾರು ೨೫೪ ಕ್ರಮಪಡಿಸಿದ ಮಾರುಕಟ್ಟೆ ಸಮಿತಿಗಳನ್ನು ವ್ಯವಸ್ಥೆ ಮಾಡಿದ್ದೇವೆ. ಇದನ್ನೆಲ್ಲಾ ನಾವು ಗಣನೆಗೆ ತೆಗೆದುಕೊಂಡು ನೋಡುವುದಾದರೆ, ೧೯೭೪—೭೫ನೇ ಇಸವಿಯಲ್ಲಿ ೪೨ ಕೋಟಿ ರೂಪಾಯಿಗಳನ್ನು ಅಲ್ಪಾವಧಿ ಸಾಲವನ್ನಾಗಿ, ಅಂದರೆ ಕ್ರಾಪ್ ಲೋನ್ ಎಂಬುದಾಗಿ ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಹೀಗೆ ೧೯೭೬—೭೭ ಮತ್ತು ೧೯೭೭—೭೮ನೇ ಇಸವಿಯಲ್ಲಿ ಸುಮಾರು ೨೦೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಇದರ ಪೂರ್ಣ ವಿವರವನ್ನು ಮಾನ್ಯ ಸಹಕಾರ ಮಂತ್ರಿಗಳು ತಮ್ಮ ಇಲಾಖೆಯ ಬೇಡಿಕೆಯ ಮೇಲೆ ಉತ್ತರ ಕೊಡುವಾಗ ಹೇಳಿದ್ದಾರೆ. ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡು ನೋಡುವುದಾದರೆ, ವ್ಯವಸಾಯದ ಅಭಿವೃದ್ಧಿಗಾಗಿ ಹಣದ

ವ್ಯವಸ್ಥೆ ಕಡಿಮೆ ಮಾಡಿದ್ದೇವೆ ಎನ್ನುವ ಮಾತು ಅಷ್ಟು ಸಮಂಜಸವಾದ ಮಾತು ಆಗಲಾರದು ಎನ್ನುವುದನ್ನು ತಿಳಿಸುವುದಕ್ಕೆ ಪ್ರಯತ್ನ ಪಡುತ್ತೇನೆ. ಈ ದೃಷ್ಟಿಯಲ್ಲಿ ನೋಡುವಾಗ ತಾವು ಏನು ಕಟ್‌ಮೋಷನ್‌ನಲ್ಲಿ ಎಲ್ಲಾ ಭೂಮಿಯನ್ನು ವ್ಯವಸಾಯದಲ್ಲಿ ಅಳವಡಿಸಿಲ್ಲ ಎಂಬುದಾಗಿ ಏನು ಹೇಳಿದ್ದೀರಿ, ಆ ರೀತಿ ಎಲ್ಲಾ ಭೂಮಿಯನ್ನು ವ್ಯವಸಾಯದಲ್ಲಿ ಅಳವಡಿಸಬೇಕಾದರೆ, ಮಾಡಬೇಕಾದುದು ಬೇಕಾದಷ್ಟು ಇದೆ. ೧೫,೬೭ ಲಕ್ಷ ಹೆಕ್ಟೇರ್ ಬಂಜರು ಇರತಕ್ಕಂಥ ಭೂಮಿಯನ್ನು ವ್ಯವಸಾಯಕ್ಕೆ ಅಳವಡಿಸಬೇಕಾದರೆ ಸುಮಾರು ಹಣ ಬೇಕಾಗುತ್ತದೆ. ಮತ್ತೆ ಸಾಯಿಲ್ ಕನ್‌ಸರ್ವೇಷನ್‌ಗೆ ಹೋದ ವರ್ಷ ಅಂದರೆ. ೧೯೭೭—೭೮ರಲ್ಲಿ ನ್ಯೂ ಬಂಡ್ ವರ್ಕ್ಸ್‌ನಗೆ ಈ ರೀತಿ ಮಾಡಿದ್ದೇವೆ. During 1977-78 new bunding works were takenup in 2.74 lakhs as against a target of 0.95 Lakhs Hectar, and spillover works was completed in 3.33 lakh hectars against a target of 1.41 lakh hectars- The total expenditure was Rs. 651.26 lakhs generating 217 lakh mandays. This has gone a long way in providing relief to affected areas in 118 taluks in the State.

For the year 1978—79, it is targetted to take up new bunding works in 0.60 lakh Hectars and completion of spillover works in 2.00 lakh hectars at a total cost of Rs. 119 lakhs. This is expected to generate 40 lakhs man days. 1977—78 ರಲ್ಲಿ ಪ್ರತಿ ದಿವಸ ೬೫ ಸಾವಿರ ಜನಗಳಿಗೆ ಕೆಲಸವನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಲಾಗಿದೆ. ಇದು ಸಾಧಾರಣ ಕೆಲಸವೇ ? ಇದರ ಬಗ್ಗೆ ನಾನು ಮಾನ್ಯ ಸಭೆಯ ಮುಂದೆ ಅಂಕಿ ಅಂಶಗಳನ್ನು ಇಟ್ಟಿದ್ದೇನೆ. ೧೫.೬೭ ಲಕ್ಷ ಹೆಕ್ಟೇರ್ ಬಂಜರು ಭೂಮಿ ಇರತಕ್ಕಂಥಾದ್ದನ್ನು ವ್ಯವಸ್ಥೆ ಗೊಳಿಸುವುದಾದರೆ ಇದಕ್ಕೆ ಸಾಕಷ್ಟು ಹಣವನ್ನು ದೊರಕಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಯಾವ ಪ್ರಮಾಣದಲ್ಲಿ ಹಣವನ್ನು ಒದಗಿಸಿಕೊಳ್ಳಬೇಕೆಂಬುದನ್ನು ಸರ್ಕಾರ ವಿಚಾರ ಮಾಡುತ್ತದೆ. ಇದೇ ವಿಷಯವನ್ನು ಹೆಚ್ಚು ಪ್ರಸ್ತಾಪ ಮಾಡುವುದಾದರೆ ಎಲ್ಲರೂ ರೈತರು, ರೈತರು ಎಂಬುದಾಗಿ ಹೇಳುವಂತಹ ಒಂದು ಹೊಸ ಮಾರ್ಡನ್ ಟೆಕ್ನಿಕ್ಸ್ ನಮ್ಮಲ್ಲಿದೆ. ನಮಗೆ ಇವತ್ತು ಸಂಶೋದನೆಯಿಂದ ಬರತಕ್ಕ ಫಲ ಸಾಲದು. ವ್ಯವಸಾಯವನ್ನು ಮಾಡುತ್ತಿರತಕ್ಕಂಥ ಆ ವರ್ಗದ ಜನರಿಗೆ ಈ ಒಂದು ಸೌಲಭ್ಯ ತಲುಪಿದೆಯೋ ಎಂಬುದನ್ನು ವಿಶ್ಲೇಷಣೆ ಮಾಡಿ ನೋಡುವುದಾದರೆ ಅಷ್ಟಾಗಿ ಅದು ಕಾಣುತ್ತಿಲ್ಲ. ೨ ಹೆಕ್ಟೇರ್ ಅಥವಾ ಅದಕ್ಕಿಂತ ಕಡಿಮೆ ಇರತಕ್ಕಂಥ ಹಿಡುವಳಿದಾರರು ೧೦.೮ ಲಕ್ಷ ಕುಟುಂಬಗಳು ಇವೆ. ಅವರು ಹೊಂದಿರತಕ್ಕಂಥ ಜಮೀನು ೫,೫ ಲಕ್ಷ ಹೆಕ್ಟೇರ್. ೧ ರಿಂದ ೨ ಹೆಕ್ಟೇರ್ ಭೂಮಿ ಇರತಕ್ಕಂಥ ಕುಟುಂಬಗಳು ೮.೪ ಲಕ್ಷ ಕುಟುಂಬಗಳು ಇವೆ. ಅವರು ಹೊಂದಿರತಕ್ಕಂಥ ಜಮೀನು ೧೨.೨ ಲಕ್ಷ ಹೆಕ್ಟೇರ್. ೨ ಹೆಕ್ಟೇರ್‌ನಿಂದ ೪ ಹೆಕ್ಟೇರವರೆಗೆ ಇರತಕ್ಕಂಥ ವ್ಯವಸಾಯಗಾರರು ೭.೯ ಲಕ್ಷ ಜನರಿದ್ದಾರೆ. ಅವರು ಹೊಂದಿರತಕ್ಕಂಥ ಜಮೀನು ೪.೨೨ ಲಕ್ಷ ಹೆಕ್ಟೇರ್. ಹೀಗೆ ಇದನ್ನು ಕ್ರೋಢೀಕರಿಸಿದರೆ ೨೬ ಲಕ್ಷ ಹಿಡುವಳಿದಾರರು ೩೯.೨ ಲಕ್ಷ ಹೆಕ್ಟೇರ್ ಜಮೀನನ್ನು ಹೊಂದಿದ್ದಾರೆ. ಇನ್ನು ೪ ಹೆಕ್ಟೇರಿನಿಂದ ೧೦ ಹೆಕ್ಟೇರ್ ಇಟ್ಟುಕೊಂಡಿರುವವರು ೬.೨ ಲಕ್ಷ ಜನರಿದ್ದಾರೆ. ಅವರು ಹೊಂದಿರತಕ್ಕಂಥ ಭೂಮಿ ೩೭.೮ ಲಕ್ಷ ಹೆಕ್ಟೇರ್. ಹಾಗೆ ೧೦ ಹೆಕ್ಟೇರ್ ಭೂಮಿಯಿಂದ ೫೦ ಹೆಕ್ಟೇರ್ ಭೂಮಿ ಇರತಕ್ಕಂಥವರ ಸಂಖ್ಯೆ ೨.೭ ಲಕ್ಷ ಕುಟುಂಬಗಳಿವೆ. ಅವರು ಹೊಂದಿರತಕ್ಕಂಥ ಭೂಮಿ ೩೪.೫ ಲಕ್ಷ ಹೆಕ್ಟೇರ್. ಈ ವರ್ಗ ಏನಿದೆ ಇದು. This is most vociferous and vigilant section of the Agricultural Sector. ಮತ್ತೆ ೫೦ ಹೆಕ್ಟೇರ್‌ಗಿಂತ ಮೇಲೆ ಜಮೀನು ಇರತಕ್ಕಂಥವರು ೦.೦೨ ಲಕ್ಷ ಕುಟುಂಬಗಳು ಇವೆ. ಅವರು ಹೊಂದಿರತಕ್ಕಂಥ ಜಮೀನು ೯.೫ ಲಕ್ಷ ಹೆಕ್ಟೇರ್. ಒಟ್ಟು ೩೩.೫ ಲಕ್ಷ ಕುಟುಂಬಗಳು ೧೧೩.೫ ಲಕ್ಷ ಹೆಕ್ಟೇರ್ ಭೂಮಿಯನ್ನು ಹೊಂದಿವೆ. ಇದನ್ನು ನಾವು ನೋಡುವಾಗ ಮೇಲಿರತಕ್ಕಂಥ ಅಂದರೆ ೪ ರಿಂದ ೧೦ ಹೆಕ್ಟೇರ್ ವರೆಗೆ ಜಮೀನು ಇಟ್ಟಕೊಂಡಿರುವವರು ಹಾಗೂ ೧೦ ಹೆಕ್ಟೇರ್‌ನಿಂದ ೫೦ ಹೆಕ್ಟೇರ್ ಇಟ್ಟುಕೊಂಡಿರುವವರು ಸುಮಾರು ೭೧ ಲಕ್ಷ ಹೆಕ್ಟೇರ್ ಭೂಮಿಯನ್ನು ಅವರು ಇಟ್ಟುಕೊಂಡಿದ್ದಾರೆ. ಇಲ್ಲಿ ಹೆಚ್ಚು ಹಣವನ್ನು ಒದಗಿಸಿ ಜನಸಂಖ್ಯೆಯನ್ನು ಬೆಳಸಿಕೊಳ್ಳುವುದಕ್ಕೆ ಶ್ರೀಮಾನ್ ಪಟೇಲ್‌ರವರು ಹೇಳಿದಹಾಗೆ ಸಂಪಾದನೆ ಜಾಸ್ತಿ ಮಾಡುವುದಕ್ಕೆ ಇನ್ನೂ ಸಂದರ್ಭ ಇದೆ. ಆದರೆ ಇರತಕ್ಕ ಹಣದ ಕೊರತೆಯನ್ನೂ ನಾವು ನೋಡಬೇಕಾಗುತ್ತದೆ. ಇವತ್ತು ಇಂತಹ ಒಂದು ಕಷ್ಟ ಪರಿಸ್ಥಿತಿಯಲ್ಲಿದ್ದೇವೆ. ಟಾರ್‌ಗೆಟ್‌ಗಿಂತ ೯೫ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡುತ್ತಿದಾಗ್ಯೂ, ೩.೩೩ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ನಾವು ಸಾಯಿಲ್ ಕನ್‌ಸರ್ವೇಸನ್ ಕೆಲಸ

ವನ್ನು ಏಕೆ ತೆಗೆದುಕೊಂಡಿದ್ದೇವೆ ? ೬ ಕೋಟಿ ರೂಪಾಯಿಗಳನ್ನು ಏಕೆ ಖರ್ಚು ಮಾಡಿದ್ದೇವೆ ? ಇದನ್ನು ತಾವು ವಿಚಾರ ಮಾಡಬೇಕು. ಈ ರೀತಿ ರೈತರ ಅನುಕೂಲಕ್ಕಾಗಿ ಮಾಡಿರುವಂತಹ ಕೆಲಸ ಸಾಧಾರಣವಲ್ಲ. ಇದನ್ನು ವಿಚಾರ ಮಾಡುವಾಗ ಸರ್ಕಾರ ಕಡಿಮೆ ಕೆಲಸಮಾಡಿದೆ ಎಂಬುದಾಗಿ ತಾವು ಭಾವಿಸಬಾರದು ಎಂಬ ಅಂಶವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕೆಂದರೆ, ೧೯ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿಗೆ ವ್ಯವಸ್ಥೆ ಮಾಡಿದ್ದೇವೆ. ಈ ಹಿಂದೆ ನಮ್ಮ ರಾಜ್ಯದಲ್ಲಿ ಎಷ್ಟು ಸಾಧನೆಯಾಗಿತ್ತು. ಈಗ ಎಷ್ಟು ಸಾಧನೆಯಾಗಿದೆ ಎಂಬ ಬಗ್ಗೆ ಕೆಲವು ಅಂಕಿಅಂಶಗಳನ್ನು ಕೊಟ್ಟರೆ ನಿಜವಾಗಿಯೂ ಪ್ರಗತಿ ಸಾಧನೆಯಾಗಿದೆ ಎಂಬುದು ತಮಗೆ ಅರ್ಥವಾಗುತ್ತದೆ.

೧೧–೩೦ ಎ. ಎಂ.

ಶ್ರೀ ಬಿ. ವಿ. ಕಕ್ಕಿಲಾಯ.—ಈಗ ತಾವು ವ್ಯವಸಾಯಕ್ಕೆ ದೊಡ್ಡ ಪ್ರಮಾಣದಲ್ಲಿ ಹಣ ಒದಗಿಸಲಾಗಿದೆ ಎಂದು ಹೇಳಿದಿರಿ. ಆದರೆ ಕೇಂದ್ರಸರ್ಕಾರದವರು ಈಗ ಸೋಷಯಲ್ ಸರ್ವಿಸಸ್ ಮತ್ತು ಟ್ರಾನ್ಸ್‌ಪೋರ್ಟ್ ಈ ಎರಡಕ್ಕೂ ಕಡಿಮೆ ಆದ್ಯತೆ ಕೊಟ್ಟು ವ್ಯವಸಾಯಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿದ್ದಾರೆ, ಈಗ ಇಲ್ಲಿ ನೀವು ಏನು ಕೆಲವು ಸೌಲಭ್ಯಗಳನ್ನು ಒದಗಿಸಿದ್ದೀರಿ, ಅದು ಮೇಲಿನ ಹತ್ತು ಪರ್ಸೆಂಟ್ ಜನರಿಗೇ ಹೋಗುತ್ತಿದೆ. ಕೆಳಗಿನ ಅಂತಸ್ತಿನವರಿಗೆ ಹೋಗುತ್ತಿಲ್ಲ ಈ ಕೆಳಗಿನ ಅಂತಸ್ತಿನವರಿಗೂ ಅನುಕೂಲ ಸಿಗುವಂತಹ ರೀತಿಯಲ್ಲಿ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲವೇ ಎಂದು ಕೇಳುತ್ತೇನೆ ?

ಶ್ರೀ ಕೆ. ಎಚ್. ರಂಗನಾಥ್.—ನಾನು ಇರತಕ್ಕಂಥ ವಾಸ್ತವಾಂಶಗಳನ್ನು ಈ ಸಭೆಯ ಮುಂದಿಡುತ್ತಿದ್ದೇನೆ. ಈ ಕ್ಷೇತ್ರದಲ್ಲಿ ಒಂದು ಸಮಗ್ರವಾದಂಥ ಯೋಜನೆಯನ್ನು ನಿರೂಪಣೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆಂದು ನಾನು ಇದನ್ನೆಲ್ಲಾ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ; ಇವೊತ್ತು ನಾವು ನಮ್ಮ ರಾಜ್ಯದಲ್ಲಿ ವ್ಯವಸಾಯ, ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಸಹಕಾರಿಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆ. ನಾವು ಸಹಕಾರಿಸಂಘಗಳನ್ನು ಪುನರ್‌ರಚನೆ ಮಾಡುವಾಗ ನಾವು ಯಾವ ದೃಷ್ಟಿಯನ್ನಿಟ್ಟುಕೊಂಡು ಮಾಡಿದ್ದೇವೆಂಬುದನ್ನು ತಾವು ಗಮನಿಸಿದ್ದೇ ಆದರೆ, ಅದರಿಂದ ತಮಗೇ ಅರ್ಥವಾಗುತ್ತದೆ. ಏನೆಂದರೆ ನಾವು ವ್ಯವಸಾಯ ಕ್ಷೇತ್ರದ ಅಭಿವೃದ್ಧಿಯ ಕಡೆಗೆ ಹೆಚ್ಚು ಗಮನ ಕೊಡುತ್ತಿದ್ದೇವೆ ಎಂಬುದು ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಜವಾಬ್ದಾರಿ ನಮ್ಮ ಮೇಲಿದೆ. ಈ ಅಂಕಿಅಂಶಗಳನ್ನು ಏತಕ್ಕೆ ನಾನು ಕೊಡುತ್ತಿದ್ದೇನೆಂದರೆ, ಈ ವಿಚಾರವಾಗಿ ನಾವು ಇನ್ನೂ ಆಳವಾಗಿ ಅಭ್ಯಾಸ ಮಾಡುವ ಅವಶ್ಯಕತೆ ಇದೆ ಎಂಬ ಕಾರಣದಿಂದ. ಒಟ್ಟಿನಲ್ಲಿ ಹೇಳುವುದಾದರೆ, ಮೇಲಿನ ವರ್ಗದ ಜನರಿಗೆ ಸಹಾಯ ಮಾಡಿ, ಕೆಳಗಿನ ವರ್ಗದವರನ್ನು ನಿರಾಕರಿಸಬೇಕು ಎಂಬುದು ನಮ್ಮ ಅಭಿಪ್ರಾಯವಲ್ಲ. ಕೆಳಗಿನ ವರ್ಗದ ಜನರೂ ಸಹ ಹೆಚ್ಚು ಉತ್ಪಾದನೆ ಮಾಡುವುದಕೆ ಪ್ರಯತ್ನಪಟ್ಟಿದ್ದಾರೆ. ಆದಕಾರಣ ಪ್ರೈಯಾರಿಟಿಯನ್ನು ಈ ವರ್ಗದವರಿಗೆ ಕೊಡತಕ್ಕಂಥ ಅವಶ್ಯಕತೆ ಇದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀರಾವರಿಗೆ ಒಳಪಟ್ಟ ಜಮೀನಿನ ಬಗ್ಗೆ ೧೯೭೦—೭೧ರಲ್ಲಿ ಇದ್ದಂಥ ಕೆಲವು ಅಂಕಿಅಂಶಗಳನ್ನು ಹೇಳುತ್ತೇನೆ. ೧೯೭೭—೭೮ರ ವರೆಗೆ ಎಷ್ಟಾಗಿದೆ ಎಂಬ ಬಗ್ಗೆ ಪ್ಲಾನಿಂಗ ಇಲಾಖೆಯಲ್ಲಿ ಅಂಕಿಅಂಶಗಳು ಇಲ್ಲದಿರುವ ಕಾರಣ ಅಂದರೆ ಇನ್ನೂ ಪ್ರೋಸೆಸ್ ಆಗುತ್ತಿರುವ ಕಾರಣ ಈಗ ಉದಾಹರಣೆಗೆ ಲವು ಅಂಕಿಅಂಶಗಳನ್ನು ಹೇಳುತ್ತೇನೆ.—

	No, of holdings Irrigated	No. of holdings not irrigated	Irrigated area	Un-irrigated area
Below 2½ acres	3.26.463	7.54,726	1,19,604	3,91,360
2½ – 10 acres	4,13,293	12,14,758	3,91,697	2756924
10 – 25 acres	159012	463753	277484	3250207
25 – 50 acres	60088	157019	170274	2777729
above 50 "	859	1159	7319	—

ಈ ಅಂಕಿ ಅಂಶಗಳನ್ನು ನಾವು ದೃಷ್ಟಿಯಲ್ಲಿಟ್ಟುಕೊಂಡು ನೋಡುವಾಗ ನಾವು ಕೆಲಸ ಮಾಡತಕ್ಕದ್ದು ಇನ್ನೂ ಬಹಳವಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಡ್ರೈಫಾರ್ಮಿಂಗ್ ಬಗ್ಗೆ ಅನೇಕ ಮಾನ್ಯಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಮ್ಮಲ್ಲಿ ೨೧ ಪರ್ಸೆಂಟ್‌ವರೆಗೆ ಇರಿಗೇಷನ್ ಆದಮೇಲೆ ಇನ್ನುಳಿದ ೮೦ ಪರ್ಸೆಂಟ್‌ನಷ್ಟು ಖುಷ್ಕಿ ಜಮೀನು ಏನಿದೆ, ಅದನ್ನು ನಾವು ಅಭಿವೃದ್ಧಿ ಮಾಡಬೇಕಾಗಿದೆ ? ಅಂದರೆ ಇಲ್ಲಿ ಸಾಯಿಲ್ ಕನ್ಸರ್‌ವೇಷನ್ ವರ್ಕ್ಸ್ ಏನಿದೆ ಅದನ್ನು ಮುಖ್ಯವಾಗಿ ಮಾಡಬೇಕಾಗಿದೆ ? ಈ ಕೆಲಸವನ್ನು ಮಾಡಿಸುವಾಗ ಯಾವ ವರ್ಗಕ್ಕೆ ಪ್ರೈಯಾರಿಟಿ ಕೊಡಬೇಕು, ಯಾವ ರೀತಿ ಈ ಜಮೀನನ್ನು ವ್ಯವಸಾಯಕ್ಕೆ ಯೋಗ್ಯಗೊಳಿಸಬೇಕು ಅನ್ನುವುದು ಬಹಳ ಮುಖ್ಯವಾದುದು. ಮಾನ್ಯ ಶಾಮಣ್ಣನವರು ಈ ವಿಚಾರದಲ್ಲಿ ಸೈಂಟಿಫಿಕ್ ಆಗಿ ವ್ಯವಸ್ಥಿಗೊಳಿಸಿಲ್ಲವೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಅದು ಆಗಬೇಕಾಗಿದೆ. ಈ ಬಗ್ಗೆ ಹೆಚ್ಚು ಕೆಲಸ ನಡೆಯುತ್ತಿದೆ, ಬಂಡ್ ವಗೈರೆ ಹಾಕಿದಮೇಲೆ ಯಾವ ರೀತಿ ವ್ಯವಸಾಯ ಮಾಡಬೇಕು ಎಂಬ ಬಗ್ಗೆ ಈಗ ರೀಸರ್ಚ್ ನಡೆಯುತ್ತಿದೆ. ತಮಗೆ ಕೊಟ್ಟಿರುವ ವರದಿಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಲಾಗಿದೆ. ಈ ಸಾಯಿಲ್ ಕನ್ಸರ್‌ವೇಷನ್ ವರ್ಕ್ಸ್ ಬಗ್ಗೆ ಕೆಲವು ಅಂಕಿಅಂಶಗಳನು ಕೊಡುತ್ತೇನೆ.

Soil conservation potential	...	50.50 lakh hectares
ನಾವು ಮಾಡಿರುವುದು	...	24.65 ಲಕ್ಷ ಹೆಕ್ಟಾರ್ಸ್
work completed	...	16.26 lakh hectares
spill over works	...	8.39 lakh hectares
area to be tackled	...	25.85 lakh hectares

ಈ ಕೆಲಸವನ್ನೆಲಾ ಮಾಡಿ ಮುಗಿಸಬೇಕಾದರೆ ನಮಗೆ ೬೫ ಕೋಟಿ ರೂ.ಗಳು ಬೇಕಾಗುತ್ತದೆ. ಈ ಬಗ್ಗೆ ಒಂದೆರಡು ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ಹಣ ಒದಗಿಸಿದ್ದೇ ಆದರೆ ೧೩೦೦ ಲಕ್ಷ ಅಂದರೆ ೧೩ ಕೋಟಿ ಮ್ಯಾನ್ ಡೇಸ್ ದೊರೆಯುತ್ತದೆ. ಅಂದರೆ ಹೆಚ್ಚು ಜನರಿಗೆ ಉದ್ಯೋಗ ಕೊಡುವುದಕ್ಕೆ ವ್ಯವಸ್ಥೆ ಮಾಡಲು ಸಾಧ್ಯವಾಗುತ್ತದೆ. In any socialist country this is how man pow er is created, whether skilled or unskilled. ಅದೇರೀತಿ ಸ್ಪಿಲ್ ಓವರ್ ವರ್ಕ್ಸನ್ನು ಮಾಡಿ ಮುಗಿಸಲು ಪ್ರಯತ್ನ ಮಾಡಿದಾಗ ೪ ಕೋಟಿ ೨೦ ಲಕ್ಷ ಮ್ಯಾನ್ ಡೇಸ್ ದೊರೆಯುತ್ತದೆ. ಉತ್ಪಾದನಾ ದೃಷ್ಟಿಯಲ್ಲಿ ತೆಗೆದುಕೊಂಡರೂ ಸಹ ೩ ಲಕ್ಷ ಟನ್ ವರೆಗೆ ಹೆಚ್ಚು ಆಹಾರದ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ನಮ್ಮಲ್ಲಿ ನೀರಾವರಿ ಪ್ರದೇಶ ಏನಿದೆ, ಆ ಭಾಗದಲ್ಲಿಯೂ ಸಹ ಚೌಳು ಭೂಮಿ, ಕ್ಷಾರ ಹೆಚ್ಚು ಇರತಕ್ಕಂಥ ಭೂಮಿ,ಮತ್ತು ಜೌಗು ಬಂದಿರುವ ಭೂಮಿ ಇರುತ್ತದೆ. ಇದನ್ನು ಸಹ ನಾವು ಟ್ಯಾಕಲ್ ಮಾಡಬೇಕಾಗುತ್ತದೆ. ಈ ಕೆಲಸವನ್ನು ಸಣ್ಣಪುಟ್ಟ ರೈತರ ಕೈಯಿಂದ ಮಾಡುವುದಕ್ಕೆ ಸಾಧ್ಯವಿಲ್ಲ, ಅದಕ್ಕಾಗಿ ನಾವು ಒಂದು ಪ್ರಾಜೆಕ್ಟ್ ರಿಪೋರ್ಟ್‌ನ್ನು ತಯಾರು ಮಾಡುತ್ತಿದ್ದೇವೆ. ಅದನ್ನು ತಯಾರು ಮಾಡಿದ ಮೇಲೆ ಈ ಭಾಗಗಳನ್ನೆಲ್ಲಾ ವ್ಯವಸಾಯಕ್ಕೆ ಯೋಗ್ಯಗೊಳಿಸಬೇಕಾದರೆ ೧೬೫ ಕೋಟಿ ರೂ.ಗಳು ಬೇಕಾಗುತ್ತದೆ. ಇದರಲ್ಲಿ ಏನಾಗಿದೆ ಎಂದರೆ, ಜಿಪ್‌ಸಮ್ ಲೈಮ್ ಮುಂತಾದ ಸಾಯಿಲ್ ಇರುವುದರಿಂದ ಇದನ್ನು ವ್ಯವಸಾಯದ ಭೂಮಿಯನ್ನು ಮಾಡಿ ಅದರಲ್ಲಿ ಫಸಲು ತೆಗೆಯುವುದಕ್ಕೆ ಸಾಕಷ್ಟು ಹಣ ಖರ್ಚುಮಾಡಬೇಕಾಗುತ್ತದೆ. ೨೦೦ ಮ್ಯಾನ್ ಡೇಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಆದ್ದರಿಂದ ಸುಮಾರು ೨ ಲಕ್ಷಟನ್ ಆಹಾರ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಅಂಕಿಅಂಶಗಳು ದೊರೆಯುತ್ತಿವೆ. ಇನ್ನು ಲ್ಯಾಂಡ್ ಡೆವಲಪ್‌ಮೆಂಟ್‌ನಿಂದ ಸುಮಾರು ೨೧ ಲಕ್ಷ ಹೆಕ್ಟೇರ್ ಏರಿಯಾದಿಂದ ೫.೫ ಅಂದರೆ ೧೫ ಲಕ್ಷ ಎಕರೆ ಭೂಮಿಯನ್ನು ಜೌಗು ಭೂಮಿಯಾಗದಂತೆ ಪ್ರಿವೆಂಟೀವ್ ಮೆಷರ್ ತೆಗೆದುಕೊಂಡರೆ ೪೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ೧೦೦೦೦ ಮ್ಯಾನ್‌ಡೇಸ್ ಕೆಲಸ ಕೊಡುವುದಕ್ಕೆ ಅವಕಾಶ ದೊರೆಯುತ್ತದೆ ಇನ್ನು ದೊಡ್ಡ ಕೆಲಸಮಾಡುವುದಾದರೆ ೬೩೪ ಕೋಟಿ ರೂಪಾಯಿ ವ್ಯವಸಾಯಕ್ಕೆ ಖರ್ಚು ಮಾಡುವುದಾದರೆ ೨ ಸಾವಿರದವರೆಗೆ ಮ್ಯಾನ್‌ಡೇಸ್ ಕೆಲಸಕ್ಕೆ ವ್ಯವಸ್ಥೆಯನ್ನು ಹಳ್ಳಿಗಾಡಿನ ಜನರಿಗೆ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಅಗ್ರಿಕಲ್ಚರ್ ಲೇಬರ್ಸ್ ಬಗ್ಗೆ ಏನು ಹೇಳಿದ್ದಾರೆ ಅದನ್ನು ನೋಡಿದರೆ ೧೯

ಲಕ್ಷ ಕೃಷಿ ಕೂಲಿಗಾರರು ಇದ್ದಾರೆ. ೧೦ ಲಕ್ಷ ಕುಟುಂಬಗಳು ೪—೫ ಎಕರೆ ಭೂಮಿಗಳನ್ನು ಇಟ್ಟು ಕೊಂಡಿರುವವರು ಕೂಡ ಕೃಷಿ ಕೂಲಿಗಾರರು ಇದ್ದ ಹಾಗೆಯೇ. ಇನ್ನು ಮಳೆ ಬಾರದೆ ಇರತಕ್ಕಂಥ ಏರಿಯಾವನ್ನು.........I have seen with my own eyes people owning 20—25 acres of land coming for soil conservation works. ಇಂತಹ ಜನಗಳಿಗೆ ಹತ್ತಾರು ವರ್ಷ ಕೆಲಸಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಜನಶಕ್ತಿಯನ್ನು ಬಳಸಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಎಲ್ಲಾ ರೀತಿಯು ಕೆಲಸ ನಡೆಯುತ್ತಿದೆ. ಮಾನ್ಯ ಜೆ. ಎಚ್. ಪಟೇಲರು ಹೇಳಿದ ಅಭಿಪ್ರಾಯಗಳನ್ನು ನಾನು ಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ, ಆದರೆ ಅದರಲ್ಲಿ ಒಂದು ಅಭಿಪ್ರಾಯವನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಶಾಮಣ್ಣನವರು ಏನು ಕಟ್ ಮೋಷನ್ಸ್‌ನಲ್ಲಿ ಹೇಳಿದ್ದಾರೆ ಅದರ ಬಗ್ಗೆ ಸಮಗ್ರವಾದ ಒಂದು ಚಿತ್ರವನ್ನೇ ಇಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ, ಇದರ ಬಗ್ಗೆ ನಮ್ಮ ಬ್ರೋಚರ್ ಏನು ಇದೆ ಅದನ್ನು ನೋಡಿದೀರೆ ಅವರಿಗೆ ಗೊತ್ತಾಗುತ್ತದೆಂದು ನಾನು ತಿಳಿದಿದ್ದೇನೆ.

ಶ್ರೀ ಎಂ.ವಿ. ರಾಜಶೇಖರನ್.—ನಿರ್ದಿಷ್ಟವಾಗಿ ಇರಿಗೇಷನ್ ಪೊಟೆನ್ಸಿಯಲ್ ವಿಚಾರವಾಗಿ ಅದರಲ್ಲಿ ಹೇಳಿದ್ದಾರೆ. ಈಗಾಗಲೇ ಕಮ್ಯಾಂಡ್‌ಏರಿಯಾ ಅಂದರೆ ಘಟಪ್ರಭಾ ತುಂಭದ್ರಾ ಹಾಗೂ ಕಾವೇರಿ ವ್ಯಾಲಿ ಪ್ರಾಜೆಕ್ಟ್ ಏನು ಇವೆ, ಅವುಗಳಲ್ಲಿ ಅಡ್ಮಿನಿಸ್ಟ್ರೇಟೀವ್ ಆಫೀಸರ್ಸ್‌ನು ಹಾಕಿದ್ದಿರಿ. ಅವರಿಗೆಹಿಂದೆ ಸಾಕಷ್ಟು ಕೆಲಸವಿತ್ತು. ಲ್ಯಾಂಡ್ ಅಕ್ವಿಸಿಷನ್‌ಕೆಲಸವಿತ್ತು. ಈಗ ಅವರಿಗೆ ಏನು ಕೆಲಸವಿದೆ.?formerly there were so many other revenue problems that had to be settled You are still continuing them. The Command Area development work has to be entrusted to the technical people, and this has to be done immediatly. All the the work that has to be done depends upon the technical opinion and for the best utilisation of the irrigarion potential you have already created.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಈ ಕೆಲಸ ಮಾಡಬೇಕಾಗಿದೆಯೆಂದು ನಾನು ಭಾವಿಸುತ್ತೇನೆ. ಉದಾಹರಣೆಗೆ, ಮಾನ್ಯ ಸದಸ್ಯರು ನರಗುಂದದ ಕಡೆಗೆ ಹೋದರೆ ಅಥವಾ ನವಲಗುಂದ ಕಡೆಗೆ ಹೋದರೆ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ನೋಡಿದರೆ ಮಳೆ ನೀರು ಬಂದು ಹೊಂಡದಲ್ಲಿ ನಿಂತರೆ ಅದನ್ನು ಶೋಧಿಸಿ ಕುಡಿಯುವ ಸ್ಥಿತಿ ಇದೆ. ಅಲ್ಲಿ ಇರುವುದು ಬರೀ ಎರೆ ಭೂಮಿ, ಚೌಳು ಭೂಮಿ ಅಲ್ಲಿ ದನಗಳು ಕುಡಿಯುವ ನೀರೇ ಮನುಷ್ಯರು ಕುಡಿಯುವ ನೀರು ಎಲ್ಲಾ ಒಂದೇ ಆಗಿದೆ. ಉದಾಹರಣೆಗೆ ಹೇಳುವುದಾದರೆ, ಮಾನ್ಯ ವಿರೋಧಪಕ್ಷದ ನಾಯಕರು ಏನು ಇದ್ದಾರೆ ಅವರ ಊರಿಗೆ ಯಾರು ಹೆಣ್ಣನ್ನು ಕೊಡುವುದಿಲ್ಲ. ಅಲ್ಲಿ ಅಂತ ಪರಿಸ್ಥಿತಿ ಇದೆ. ನರಗುಂದ ಹಾಗೂ ನವಲಗುಂದ ಕಡೆಯಲ್ಲಿ ಬರೀ ಕರಿ ಭೂಮಿ ಇರುವುದರಿಂದ ಅಲ್ಲಿ ಅದನ್ನು ಸರಿಯಾದ ವ್ಯವಸಾಯದ ಭೂಮಿಯನ್ನಾಗಿ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಲಕ್ಷಾಂತರ ಎಕರೆ ಮಾಡಿದರೂ ಇನ್ನು ೮೦ ಪರ್ಸೆಂಟ್ ಭೂಮಿ ವ್ಯವಸಾಯಕ್ಕೆ ಯೋಗ್ಯವಾಗಿ ಮಾಡುವುದಕ್ಕೆ ಪ್ರಯತ್ನಮಾಡಿದ್ದಾರೆಂದು ತಿಳಿದು ನನಗೆ ಬಹಳ ಸಂತೋಷವಾಯಿತು. ಅಲ್ಲಿ ಅಧಿಕಾರಿಗಳು ಇದ್ದಾರೆ ಅವರನ್ನು ತತ್‌ಕ್ಷಣ ನಿಲ್ಲಿಸಲಿಕ್ಕೆ ಸಾಧ್ಯವಾಗುವುದಿಲ್ಲ ಅವರ ಜೊತೆಗೆ ಟೆಕ್ನಿಕಲ್ ಪೀಪಲ್ಸ್‌ನ್ನು ಬಳಸಿಕೊಂಡಿದ್ದಾರೆ. ಇನ್ನು ೧೫ಲಕ್ಷ ಎಕರೆ ಭೂಮಿ ಇದೆ. ಅದನ್ನು ಉಳುಮೆ ಮಾಡುವುದಕ್ಕೆ ಪ್ರಯತ್ನ ಪಡುವುದಾದರೆ ಏನು ಜನಶಕ್ತಿ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದರಲ್ಲಿ ವಿದ್ಯಾವಂತರು ಹಾಗೂ ಅವಿದ್ಯಾವಂತರು ಇದ್ದಾರೆ. ಅವರನ್ನು ಫೀಲ್ಡ್ ಅಸಿಸ್ಟೆಂಟ್ ಆಗಿ ನೇಮಕ ಮಾಡಲಿಕ್ಕೆ ಸಾಧ್ಯವಿದೆ. ಅವರಿಗೆ ಟ್ರೈನಿಂಗ್ ಕೊಡಲಿಕ್ಕೂ ಸಾಧ್ಯವಾಗುತ್ತದೆ. ಇದನ್ನೆಲ್ಲಾ ಮಾಡಬೇಕಾದರೆ ಯಾವ ಪ್ರಮಾಣದಲ್ಲಿ ಹಣ ಖರ್ಚುಮಾಡಬೇಕಾಗುತ್ತದೆ ಎನ್ನುವುದನು ಯೋಚನೆ ಮಾಡಬೇಕಾಗುತ್ತದೆ. ಇನ್ನು ಮಾನ್ಯ ಕಕ್ಕಿಲಾಯರವರು ವ್ಯವಸಾಯದ ಬಗ್ಗೆ ಮಾತನಾಡುತ್ತಾ ಇದ್ದಾಗ ಮಹಾತ್ಮಾ ಗಾಂಧಿ ಹಾಗೂ ನೆಹರೂರವರ ವ್ಯವಸಾಯದ ನೀತಿಯ ಬಗ್ಗೆ ಪ್ರಸ್ತಾಪಮಾಡಿದರು. ವ್ಯವಸಾಯದ ಬಗ್ಗೆ ಹೆಚ್ಚಿಗೆ ಹಣವನ್ನು ಕೊಡಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ಕಡಿಮೆ ದುಡ್ಡಿನಲ್ಲಿ ಏನಾದರೂ ಉದ್ಯಮ ಇದ್ದರೆ ಅದು ವ್ಯವಸಾಯ ಉದ್ಯಮವೆಂದು ಹೇಳಬಹುದು. ಆದರೆ ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಯಾರಾದರೂ ಲಾಬಿ ಮಾಡುವುದಾದರೆ ಅವರು ಇಂಡಸ್ಟ್ರೀಯಲ್ ಬಗ್ಗೆ ಮಾತನಾಡುತ್ತಾರೆ ವಿನ: ವ್ಯವಸಾಯಗಾರರ ಬಗ್ಗೆ ಮಾತನಾಡು

ತ್ತಿದ್ದಾರೆಯೋ? ಇದನ್ನು ನಾವು ವಿಚಾರಮಾಡಬೇಕು. ೧೯೫೬ರಿಂದ ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆಯೇ ಮಾತನಾಡುತ್ತಿದ್ದಾರೆ. ಅದೇ ರೀತಿ ವ್ಯವಸಾಯಕ್ಕೆ ಏತಕ್ಕೆ ಆದ್ಯತೆ ಕೊಡಬಾರದು ? ಮಲ್ಟಿ ನ್ಯಾಷನಲ್ಸ್‌ಗಳು ಕೂಡ ಇವತ್ತಿನದಿವಸ ಎಲ್ಲಿಯವರೆಗೆ ಬಂದಿದ್ದಾರೆ ಎಂದರೆ ಅವರು ಕೋಳಿ ಸಾಕಾಣಿಕೆ, ಕ್ಯಾಟಲ್‌ಫೀಡ್ಸ್ ಎಲ್ಲವನ್ನೂ ತಯಾರು ಮಾಡುವುದಕ್ಕೆ ಬಂದಿದ್ದಾರೆ. ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಟ್ರಾಕ್ಟರ್ ಹಾಗೂ ಟ್ರೇಲರ್ ಇವು ಒಂದಕ್ಕೊಂದು ಪೂರಕವಾಗಿದೆ. ಮಾನ್ಯ ಪಟೇಲ್‌ರವರು ಹೇಳುವಾಗ ಈ ಮಾತನ್ನು ಹೇಳಿದ್ದಾರೆ ಬಹಳ ಸಂತೋಷ. ಈ ದೇಶದ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಹೆಚ್ಚು ಕಾಲ ಬೇಕಾಗುತ್ತದೆ. ಆದರೆ ಅತಿ ಶೀಘ್ರವಾಗಿ ಇದನ್ನು ಪರಿಹರಿಸಿದರೆ ಇದರಿಂದ ಸಾಕಷ್ಟು ನಮ್ಮ ದೇಶ ಅಭಿವೃದ್ಧಿಯಾಗುತ್ತದೆ. ಇದರಿಂದ ಬೃಹತ್ ಪ್ರಮಾಣದಲ್ಲಿ ಅನ್ ಎಂಪ್ಲಾಯ್‌ಮೆಂಟನ್ನು ಬಗೆಹರಿಸಬಹುದು. ಈ ಒಂದು ಸಮಸ್ಯೆ ನಾಗಾಲೋಟದಲ್ಲಿ ಓಡುತ್ತಿದೆ. ಇದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ನಿನ್ನೆ ಮಾತನಾಡಿದ್ದರಲ್ಲಿ ಯಾರಿಗೂ ವ್ಯವಸಾಯದ ಅಭಿವೃದ್ಧಿ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ ಇನ್ನು ರಾಯಚೂರು, ಗದಗ್ ಮುಂತಾದ ಕಡೆ ಗೋಡೌನ್‌ಗಳಲ್ಲಿ ರೈತರು ಬೆಳೆದ ಮಾಲನ್ನು ಇಡುವುದಕ್ಕೆ ಸಾಧ್ಯವಿಲ್ಲದೆ ಅವರಿಗೆ ಶೋಷಣೆಯಾಗುತ್ತಿದೆ ಅದನ್ನು ಮೊದಲು ತಪ್ಪಿಸಬೇಕಾಗಿದೆ. ಇದರ ಬಗ್ಗೆ ನಾವು ವೇರ್‌ಹೌಸ್ ಕಾರ್ಪೊರೇಷನ್‌ನಿಂದ ಹೆಚ್ಚು ಗೋಡೌನ್ಸ್ ಮಾಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅದಕ್ಕೆ ಹಣವನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನೂ ಸಹ ನಾವು ಮಾಡಿದ್ದೇವೆ. ಇವತ್ತು ಅದು ಅಭಿವೃದ್ಧಿಯಾಗಿಲ್ಲ ಎಂದು ಹೇಳುವುದಕ್ಕೆ ನಾನು ತಯಾರು ಇಲ್ಲ. ಇನ್ನು ಹೈಯೀಲ್ಡಿಂಗ್‌ವರೈಟೀಸ್ ಉತ್ಪಾದನೆಯ ಬಗ್ಗೆ ಅಂಕಿಅಂಶಗಳನ್ನು ಹೇಳುವುದಾದರೆ ೧೯೭೩–೭೪ರಲ್ಲಿ ೯.೫೩ಲಕ್ಷ ಹೆಕ್ಟಾರ್‌ನಲ್ಲಿ ಉತ್ಪಾದನೆ ಬಂದಿದೆ ; ಮತ್ತು ೧೯೭೭–೭೮ರಲ್ಲಿ ೨೪ಲಕ್ಷ ಹೆಕ್ಟಾರ್‌ನಲ್ಲಿ ಉತ್ಪಾದನೆ ಬಂದಿದೆ. ಇಷ್ಟೇ ಪ್ರಮಾಣದಲ್ಲಿ ಅದರ ಬೆಲೆ ಕುಸಿಯುತ್ತಾ ಇದೆ. ರಾಗಿ, ಜೋಳವನ್ನು ಬೆಳೆಸತಕ್ಕಂಥವರು ಕೂಲಿ ಮಾಡಿ ಜೀವನ ಮಾಡತಕ್ಕಂಥವರು. ಅವರು ಇದನ್ನು ತಿನ್ನುವುದಕ್ಕೆ ಉಪಯೋಗಿಸುತ್ತಾರೆ. ಹೈಬ್ರಿಡ್ ಜೋಳವನ್ನು ಬೆಳೆಯತಕ್ಕಂಥವರು ತಿನ್ನುವುದಕ್ಕೆ ಹೋಗುವುದಿಲ್ಲ. ಇದನ್ನು ಅನಿಮಲ್ ಹಸ್ಬೆಂಡರಿ ಇಲಾಖೆಯವರು ಡೆವ್‌ಲಪ್‌ಮೆಂಟ್ ಮಾಡುವ ಬಗ್ಗೆ ವ್ಯವಸ್ಥೆ ಮಾಡಬೇಕಾಗಿದೆ. ಇವತ್ತು ನಾವು ಹೈಯೀಲ್ಡಿಂಗ್‌ವರೈಟೀಸ್ ಉತ್ಪಾದನೆಯ ಬಗ್ಗೆ ಲೆಕ್ಕ ಹಾಕುವುದಾದರೆ ೧೯೭೩–೭೪ರಲ್ಲಿ ೭೮೯ ಕೇಜಿ ಹೈಯೀಲ್ಡಿಂಗ್ ವೆರೈಟೀಸ್ ಉತ್ಪಾದನೆ ಇದ್ದರೆ ಇವತ್ತು ೧೧೩೭ ಕೆ.ಜಿ ಉತ್ಪಾದನೆ ಇದೆ. ಅಕ್ಕಿ ಉತ್ಪಾದನೆ ಬಗ್ಗೆ ಹೇಳುವುದಾದರೆ ೧೯೭೩–೭೪ರಲ್ಲಿ ೧೯ ಕ್ವಿಂಟಾಲ್ ಇದ್ದರೆ ಇವತ್ತು ೨೧ ಕ್ವಿಂಟಾಲ್‌ನಷ್ಟು ಹೆಚ್ಚುವರಿಯಾಗಿದೆ. ರಾಗಿಯ ಉತ್ಪಾದನೆ ೧೯೭೩–೭೪ರಲ್ಲಿ ೭ ಕ್ವಿಂಟಾಲ್ ೭೪ ಕೆ.ಜಿ ಇದ್ದರೆ ಇವತ್ತು ೧೩ ಕ್ವಿಂಟಾಲ್ ೭೨ ಕೆ.ಜಿಯಷ್ಟು ಹೆಚ್ಚುವರಿ ಉತ್ಪಾದನೆಯನ್ನು ನಾವು ಕಾಣುತ್ತಿದ್ದೇವೆ. ಇನ್ನು ಗೋಧಿಯ ಉತ್ಪಾದನೆ ೧೯೭೩–೭೪ರಲ್ಲಿ ೬ ಕ್ವಿಂಟಾಲ್ ೧೧ಕೆ.ಜಿ ಇದ್ದರೆ ಇವತ್ತು ೭ ಕ್ವಿಂಟಾಲ್‌ನಷ್ಟು ಉತ್ಪಾದನೆಯಾಗಿದೆ, ನಮ್ಮ ವಿಶ್ವವಿದ್ಯಾನಿಲಯದ ಸಂಶೋಧನೆಯ ಫಲದಿಂದಾಗಿ ಮತ್ತು ನಮ್ಮ ವ್ಯವಸಾಯಾಧಿಕಾರಿಗಳು ಹಳ್ಳಿಗಾಡಿಗೆ ಬಂದು ಆದಷ್ಟು ಹೆಚ್ಚು ಎಸ್ಟೀರ್ಣದಲ್ಲಿ ಅದರ ಎಕ್ಸ್‌ಟೆನ್‌ಷನ್ ವರ್ಕ್‌ನಲ್ಲಿ ಮತ್ತು ಸಾಯಿಲ್ ಕನ್‌ಸರ್‌ವೇಷನ್ ಬಗ್ಗೆ ಆಸಕ್ತಿ ವಹಿಸಿ ಪ್ರಯತ್ನ ಪಟ್ಟಿದ್ದರಿಂದ ಉತ್ಪಾದನೆ ಹೆಚ್ಚು ಆಗುವುದಕ್ಕೆ ಸಾಧ್ಯವಾಗಿದೆ. ಆದರೆ ಇದನ್ನೇ ನಾನು ಹೆಚ್ಚು ಎಂದು ಹೇಳುವುದಿಲ್ಲ. ಇನ್ನೂ ಮಾಡತಕ್ಕಂಥ ಕೆಲಸ ಜಾಸ್ತಿ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಜೆ. ಹೆಚ್. ಪಟೇಲರು ಮಾತನಾಡತಕ್ಕಂಥ ಕಾಲದಲ್ಲಿ ನೀವೇನು ಅದನ್ನು ಮಾಡಲಿಲ್ಲ, ರೈತರೇ ಸ್ವಯಂಶಕ್ತಿಯಿಂದ ಅದನ್ನು ಬೆಳೆದಿದ್ದಾರೆ ಎಂದು ಹೇಳಿದರು. ನಾನು ಹೇಳುವುದೇನೆಂದರೆ ಸರ್ಕಾರದವರು ಇವತ್ತಿನದಿವಸ ಅವರಿಗೆ ಎಲ್ಲಾ ಅನುಕೂಲಗಳನ್ನು ಒದಗಿಸಿಕೊಟ್ಟಿದ್ದರಿಂದ ಹೆಚ್ಚು ಉತ್ಪತ್ತಿ ಮಾಡಿದ್ದಾರೆ. ಆದರೆ ಇದರಲ್ಲಿ ಕಡಿಮೆ ಹಿಡುವಳಿ ಭೂಮಿ ಇರತಕ್ಕಂಥ ಜನ ಏನಿದ್ದಾರೆ, ಭೂಮಿ ಇದ್ದೂ ಕೂಡ ಕೃಷಿ ಕೂಲಿಗಾರರಾಗಿ ಜೀವನ ಮಾಡತಕ್ಕಂಥ ಜನ ಏನಿದ್ದಾರೆ ಅವರಿಗೆ ಇದರಿಂದ ಹೆಚ್ಚಿನ ಲಾಭ ಆಗಿಲ್ಲವೆಂಬುದನ್ನು ನಾವು ಗಮನಿಸಿದ್ದೇವೆ. ಈ ದೃಷ್ಟಿಯಿಂದ ನಾವು ವಿಚಾರ ಮಾಡಿದರೆ ನಮ್ಮ ಸಂಶೋದನೆಯ ಫಲ ಅವರಿಗೂ ಮುಟ್ಟಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಈ ದಿಶೆಯಲ್ಲಿ ನಾವು ಹೆಚ್ಚು ಪ್ರಯತ್ನ ಮಾಡುತ್ತೇವೆ. ಇವತ್ತು ನಮಗೆ ಈ ಹೈಯೀಲ್ಡಿಂಗ್ ವೆರೈಟಿಯಲ್ಲಿ ಇಷ್ಟು ಫಲ ಬಂದಿರುವಾಗ ಈ ಫುಡ್‌ಗ್ರೈನ್ಸ್ ಬೆಳೆಯತಕ್ಕಂಥ ಪ್ರದೇಶ ಕಡಿಮೆಯಾಗಿರತಕ್ಕಂಥಾದ್ದು ನಮ್ಮ ಗಮನಕ್ಕೆ ಬಂದಿದೆ. ೧೯೭೩–೭೪ರಲ್ಲಿ ನಾವು ೭೪.೭೦ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಆಹಾರಧಾನ್ಯಗಳನ್ನು ಬೆಳೆಯುತ್ತಿದ್ದರೆ, ಇವತ್ತು ೭೮.೩೭ಲಕ್ಷ ಹೆಕ್ಟೇರ್ ಭೂಮಿಯಲ್ಲಿ ನಾವು ಆಹಾರಧಾನ್ಯಗಳನ್ನು ಬೆಳೆಯುತ್ತಿದ್ದೇವೆ. ಉಳಿದ ೬ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬೇರೆ ಬೇರೆ

ಬೆಳೆಗಳನ್ನು ಬೆಳೆಯುವುದಕ್ಕೆ ಅಂದರೆ ಕ್ಯಾಷ್ ಕ್ರಾಪ್ಸ್, ಹತ್ತಿ, ಕಡಲೇಕಾಯಿ, ಟೊಬೇಕೋ ಇಂತಹ ಬೆಳೆಗಳನ್ನು ಮತ್ತು ಪಲ್ಸ್ ಬೆಳೆಯುವುದಕ್ಕೆ ನಾವು ಪ್ರಯತ್ನ ಪಟ್ಟಿದ್ದೇವೆ. ಅದರಲ್ಲಿ ನಾವು ಡಬಲ್ ಮತ್ತು ಮಲ್ಟಿಪಲ್ ಕ್ರಾಪಿಂಗ್ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದೇವೆ. ಆ ಬಗ್ಗೆ ನಾವು ವೈಜ್ಞಾನಿಕ ವಾಗಿ ಕೆಲಸಮಾಡುತ್ತಿದ್ದೇವೆ. ಆದರೆ ನಿನ್ನೆ ಶ್ರೀ ರಾಜಶೇಖರ್‌ರವರು ಮಾತನಾಡುತ್ತಾ 'ನಮ್ಮಲ್ಲಿರ ತಕ್ಕಂಥ ತಜ್ಞರಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಿಕೊಟ್ಟು, ಅವರಿಗೆ ಕೆಲಸಮಾಡುವುಕ್ಕೆ ಹೆಚ್ಚಿನ ಅನು ಕೂಲಗಳನ್ನು ಒದಗಿಸಿಕೊಡುವುದಾದರೆ ಮತ್ತು ರೈತರಿಗೆ ಬೆಳೆ ಬೆಳೆಯುವುದಕ್ಕೆ ಹಣ ಒದಗಿಸಿಕೊಡುವು ದಾದರೆ ನಮ್ಮ ರಾಷ್ಟ್ರ ಪ್ರಪಂಚದ ಎಲ್ಲಾ ರಾಷ್ಟ್ರಗಳ ಮಟ್ಟಕ್ಕೆ ಬರುವುದಕ್ಕೆ ಅಥವಾ ಇನ್ನೂ ಹೆಚ್ಚಿನ ಮಟ್ಟಕ್ಕೆ ಹೋಗುವುದಕ್ಕೆ ಸಾಧ್ಯವಿದೆ' ಎನ್ನತಕ್ಕಂಥ ಮಾತನ್ನು ಹೇಳಿದರು; ಅವರು ಮತ್ತೆ ಮುಂದು ವರೆದು ಹರಿಯಾನ ಪಂಜಾಬ ನಲ್ಲಿ ರೈತರು ಪ್ರಪಂಚದ ಯಾವುದೇ ಭಾಗದಲ್ಲಿ ಬೆಳೆಯದೇ ಇರುವಷ್ಟು ಗೋಧಿಯನ್ನು ಬೆಳೆದು ಉತ್ತಮ ಸಾಧನವನ್ನು ಪಡೆದಿದ್ದಾರೆ; ಅಲ್ಲಿ ರೈತರಿಗೆ ಎಲ್ಲಾ ಅನುಕೂಲಗಳನ್ನು ಒದಗಿಸಿಕೊಟ್ಟಿದ್ದಾರೆ. ಎನ್ನತಕ್ಕಂಥ ಮಾತನ್ನು ಸಹ ಹೇಳಿದರು. ಈ ಬಗ್ಗೆ ನಾವು ಸಹ ಇಲ್ಲಿ ರೈತರಿಗೆ ಎಲ್ಲಾ ಅನುಕೂಲವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ಇವತ್ತು ದೇಶದಲ್ಲಿ ಸಮಗ್ರ ವಾಗಿ ಬೆಳೆ ಆದರೂ ಕೂಡ ರೈತ ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಸಿಗದೆ, ಬೆಲೆ ಕುಸಿಯುತ್ತಿದೆ. ಈ ಸಂದರ್ಭದಲ್ಲಿ ಅವರಿಗೆ ಸಹಾಯ ಮಾಡಬೇಕೆಂದರೆ ಯಾರಾದರೂ ಅದನ್ನು ಕೊಂಡುಕೊಳ್ಳಬೇಕು. ಸರ್ಕಾರದವರೇ ಅದನ್ನು ಕೊಂಡುಕೊಳ್ಳುವುದಾದರೆ ಸಬ್‌ಸಿಡೈಸ್ಡ್ ರೇಟ್‌ನಲ್ಲಿ ಪರ್ಚೇಸ್ ಮಾಡುವುದಕ್ಕೆ ಸಾಧ್ಯತೆ ಇದೆಯೇ ನಮ್ಮಲ್ಲಿ ಅಷ್ಟು ಹಣ ಇದೆಯೇ ಎಂಬುದನ್ನು ನಾವು ಯೋಚನೆ ಮಾಡಬೇಕು. ಈ ರೀತಿ ವಿಚಾರ ಮಾಡಿದರೆ ಅವರಿಗೆ ಏನೂ ಸಹಾಯವಾಗಲಾರದು. ಅವರನ್ನು ಮುಂದುವರಿಸತಕ್ಕಂಥ ಕ್ಷೇತ್ರಗಳು ದೊಡ್ಡ ಪ್ರಮಾಣದಲ್ಲಿ ಆಗಬೇಕು. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗಳು ದೊಡ್ಡ ಪ್ರಮಾಣದಲ್ಲಿ ಬೆಳೆಯಬೇಕು. ಈ ದೃಷ್ಟಿಯಿಂದ ವಿಚಾರ ಮಾಡುವಾಗ ಪಶುಸಂಗೋಪನಾ ಇಲಾಖೆ, ಇರಿಗೇಷನ್ ಇಲಾಖೆ, ಸಹಕಾರ ಇಲಾಖೆ ಮತ್ತು ವೇರ್‌ಹೌಸಿಂಗ್ ಕಾರ್ಪೊರೇಷನ್‌ಗಳು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಈ ವೇರ್‌ಹೌಸಿಂಗ್ ಕಾರ್ಪೊರೇಷನ್‌ಗಳ ಮುಖಾಂತರ ತಾಲ್ಲೂಕು ಪ್ರದೇಶದಲ್ಲಿ ಅನೇಕ ಉಗ್ರಾಣಗಳನ್ನು ನಾವು ಮಾಡಿದ್ದೇವೆ. ರೈತರು ಅವುಗಳನ್ನು ತಮ್ಮ ಉಪಯೋಗಕ್ಕೆ ಬಳಸಿ ಕೊಳ್ಳುತ್ತಿದ್ದಾರೆಯೇ ಎಂದು ನೋಡಿದರೆ ಅವರು ಅದನ್ನು ಬಳಸಿಕೊಳ್ಳುತ್ತಾ ಇಲ್ಲ. ರೈತ ಇವತ್ತು ತಾನು ಬೆಳೆದಂಥ ಬೆಳೆಯನ್ನು ತೆಗೆದುಕೊಂಡು ಬಂದು ಅಲ್ಲಿ ಇಟ್ಟು ರಸೀದಿ ತೆಗೆದುಕೊಂಡು ಬ್ಯಾಂಕಿಗೆ ಹಣ ಕಟ್ಟಿ ಜೀವನ ಮಾಡುತ್ತಾ ಇಲ್ಲ. ಅದರ ಬದಲಿಗೆ ತಾಲ್ಲೂಕಿನಲ್ಲಿರತಕ್ಕಂಥ ವ್ಯಾಪಾರಸ್ಥರು ಮಧ್ಯ ವರ್ತಿ ಜನರು ಅದನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಮಂತ್ರಿಯವರು ನಾವು ಎಲ್ಲೆಲ್ಲಿ ಗೋಡನ್ ಫಸಿಲಿಟೀಸ್ ಕ್ರಿಯೇಟ್ ಮಾಡಿದ್ದೇವೆ ಅಲ್ಲಿ ರೈತರುಗಳು ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲ, ಬಿಸಿನೆಸ್ ಪೀಪಲ್ಸ್ ಅದನ್ನು ಹೆಚ್ಚಿನ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ರೈತರು ಏತಕ್ಕೋಸ್ಕರ ಅವುಗಳನ್ನು ಉಪಯೋಗಿಸಿಕೊಳ್ಳುತ್ತಾ ಇಲ್ಲ ಎಂಬ ಬಗ್ಗೆ ಒಂದು ಸಮೀಕ್ಷೆಯನ್ನು ನಡೆಸಿ, ಅವರು ಆ ಫೆಸಿಲಿಟೀಸನ್ನು ಉಪಯೋಗಮಾಡಿಕೊಳ್ಳುವ ಹಾಗೆ ಮಾಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಇದು ಬಹಳ ಆಳವಾಗಿ ಯೋಚನೆ ಮಾಡತಕ್ಕಂಥ ಪ್ರಶ್ನೆ. ನಾನು ಆಗಲೇ ಈ ಬಗ್ಗೆ ಸೂಕ್ಷ್ಮವಾಗಿ ಹೇಳಿದ್ದೇನೆ. ಇವತ್ತು ಎಷ್ಟು ಜನ ಹಿಡುವಳಿದಾರರಿಗೆ ಎತ್ತು ಇದೆ, ಗಾಡಿ ಇದೆ, ಟ್ರಾನ್ಸ್‌ಪೋರ್ಟಿಂಗ್ ಫೆಸಿಲಿಟೀಸ್ ಇದೆ ಎಂದು ನೋಡಿದರೆ ಯಾರಿಗೂ ಇವತ್ತಿನದಿವಸ ಈ ಫೆಸಿಲಿಟೀಸ್‌ಗಳು ಇಲ್ಲ. ಒಂದು ಹದ ಮಳೆ ಬಿದ್ದ ತಕ್ಷಣ ವ್ಯವಸಾಯ ಮಾಡುವುದಕ್ಕೆ ಎಷ್ಟೋ ಜನಗಳಲ್ಲಿ ಎತ್ತುಗಳು ಇಲ್ಲ. ಇನ್ನು ಯಾರದೋ ಶ್ರೀಮಂತರ ಭೂಮಿಯನ್ನು ಕೂಲಿಗಾಗಿ ಉತ್ತು ಆದಮೇಲೆ ಅವರಿಂದ ಎತ್ತುಗಳನ್ನು ತೆಗೆದುಕೊಂಡು ಬಂದು ತಮ್ಮ ಜಮೀನನ್ನು ಉಳಬೇಕಾಗಿದೆ. ಅವರ ಕೆಲಸ ವನ್ನು ಮುಗಿಸುವುದರೊಳಗೆ ಒಂದು ಹದ ಮಳೆ ಬಿದ್ದು ಹೊರಟು ಹೋಗಿರುತ್ತದೆ. ಆಗ ಅವರು ತಮ್ಮ ಭೂಮಿಯನ್ನು ಉಳುಮೆ ಮಾಡುವುದಕ್ಕಾಗುವುದಿಲ್ಲ. ಒಂದೊಂದು ಸಾರಿ ಏನಾಗುತ್ತದೆ ಎಂದರೆ ಅವರು ಹಸು-ಎತ್ತು, ಎತ್ತು-ಕೋಣ ಇವುಗಳನ್ನು ಉಪಯೋಗಿಸಿಕೊಂಡು ಭೂಮಿಯನ್ನು ಉಳುತ್ತಿರುತ್ತಾರೆ, ಅವು ಕಾಲುಗಳನ್ನು ಎಳೆಯುತ್ತಾ ಇರುತ್ತದೆ; ಅವರು ಹಸಿದ ಹೊಟ್ಟೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ. ಈ ರೀತಿ ಆಗುತ್ತಿರುವುದನ್ನು ನಾವು ಅನೇಕಬಾರಿ ನೋಡಿದ್ದೇವೆ. ಈ ಒಂದು ಪರಿಸ್ಥಿತಿ ಉತ್ತಮವಾಗಬೇಕಾದರೆ 2½ ಎಕರೆಯಿಂದ 4 ಎಕರೆಯವರೆಗೆ ಜಮೀನು ಇರತಕ್ಕಂಥ ಈ ವರ್ಗ

ದವರಿಗೆ ನಾವು ಆಧ್ಯತೆಯನ್ನು ಕೊಡಬೇಕಾಗಿದೆ. ಈ ಬಗ್ಗೆ ನಾವು ಪ್ರಯತ್ನ ಮಾಡಬೇಕಾಗಿದೆ. ಇವತ್ತು ಮೈಸೂರು ಜಿಲ್ಲೆ. ಹಾಸನ ಜಿಲ್ಲೆಯಲ್ಲಿ ಏನಾಗಿದೆ ಎಂದರೆ ಏಪ್ರಿಲ್ ತಿಂಗಳಲ್ಲಿ ಮಳೆ ಬಂದಾಗ, ಮಳೆ ಬಂದತಕ್ಷಣ ಅಲ್ಲಿ ರೈತರು ಬಿತ್ತನೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಆಗ ಅವರಿಗೆ ಕ್ರೆಡಿಟ್ ಫೆಸಿಲಿಟೀಸ್ ದೊರಕುವುದಿಲ್ಲ. ಏಕೆಂದರೆ ಮಾರ್ಚ್–ಏಪ್ರಿಲ್‌ನಲ್ಲಿ ಸಾಲವಸೂಲಿ ಕಾಲವಾದ್ದರಿಂದ ಸಹಕಾರಸಂಘಗಳು ಅವರಿಗೆ ಹಣವನ್ನು ಕೊಡುವುದಿಲ್ಲ. ಅವರು ಹಣವನ್ನು ಕೊಡದೇ ಇರುವುದರಿಂದ ಅವರಿಗೆ ಸಾಲದ ವ್ಯವಸ್ಥೆ ಇಲ್ಲವಾಗಿದೆ. ಇದು ನಾನು ಮೈಸೂರು, ಹಾಸನದಲ್ಲಿ ಕಣ್ಣಾರೆ ಕಂಡಂಥ ವಿಚಾರ ಮತ್ತೆ ಜೂನ್, ಜುಲೈ ತಿಂಗಳಲ್ಲಿ ೨ನೇ ಬೆಳೆ ಬೆಳೆಯುವುದಕ್ಕೆ ಪ್ರಾರಂಭ ಮಾಡುತ್ತಾರೆ. ಜೂನ್–ಜುಲೈ ತಿಂಗಳಲ್ಲಿ ಎಲ್ಲಾ ಸೊಸೈಟಿಗಳು ಡಿಫಾಲ್ಟರ್ಸ್ ಆಗುವುದರಿಂದ ಅವರಿಗೆ ಹಣ ಕೊಡುವುದಿಲ್ಲ. ಇದರ ಬಗ್ಗೆ ಅಂಕಿಅಂಶಗಳನ್ನು ಹೇಳುವುದಕ್ಕೆ ನನಗೆ ಸಮಯ ಹೆಚ್ಚು ಇಲ್ಲ. ಆದ್ದರಿಂದ ಇದರ ಬಗ್ಗೆ ನಾನು ಪ್ರಯತ್ನಪಡುವುದಿಲ್ಲ. ನಾನು ನಮ್ಮ ಅಧಿಕಾರಿಗಳಿಗೆ ಫರ್ಟಿಲೈಸರ್ಸ್ ಬಗ್ಗೆ 'ನಮ್ಮ ರಿಕ್ವೈರ್‌ಮೆಂಟ್ ಎಷ್ಟು ಇದೆ, ಇದರಲ್ಲಿ ಕನ್‌ಸಂಪ್‌ಷನ್ ಎಷ್ಟಾಗಿದೆ ಎಂದು ಪ್ರಶ್ನೆ ಹೇಳಿದಾಗ 1/3 ಭಾಗ ಕನ್‌ಸಂಪ್‌ಷನ್ ಆಗಿದೆ, ಇದಕ್ಕೆ ಕಾರಣವೇನೆಂದರೆ ಇದರಲ್ಲಿ ಕ್ರೆಡಿಟ್ ಫೆಸಿಲಿಟೀಸ್ ಇಲ್ಲ' ಎಂದು ಅವರು ಹೇಳಿದರು. ಇದರಲ್ಲಿ ಕ್ರೆಡಿಟ್ ಫೆಸಿಲಿಟೀಸ್ ಪರ್ ಹೆಕ್ಟಾರ್ ಸರಿಯಾಗಿ ಉಪಯೋಗವಾಗುತ್ತಾ ಇಲ್ಲ.

ಶ್ರೀ ಕೆ. ಎಂ. ತಮ್ಮಯ್ಯ. —ಅವರಿಗೆ ಕ್ರೆಡಿಟ್ ಫೆಸಿಲಿಟೀಸ್ ಕೊಡುವವರು ಬೇರೆ ಬೇರೆ ಇದ್ದು ಕೊಂಡು ಡೆಪ್ಯುಟಿ ಕಮೀಷನರ್‌ರವರ ಅಧಿಕಾರಕ್ಕೆ ಒಳಪಟ್ಟಿರುವುದರಿಂದ ಇದರಲ್ಲಿ ಅವರಿಗೆ ಇಂಡಿಪೆಂಡೆಂಟ್ ಚಾರ್ಜ್ ಇಲ್ಲ. ಅವರಿಗೆ ಯಾವಯಾವ ಟೈಮ್‌ನಲ್ಲಿ ಕ್ರೆಡಿಟ್ ಫೆಸಿಲಿಟೀಸ್ ಕೊಡಬೇಕೆಂಬುದರ ಬಗ್ಗೆ ತಿಳಿಸಿಕೊಟ್ಟು ಅವರವರಿಗೇ ಈ ಒಂದು ಅಧಿಕಾರವನ್ನು ಕೊಟ್ಟರೆ ಈ ವ್ಯವಸ್ಥೆ ಸ್ವಲ್ಪ ಕಡಿಮೆಯಾಗಬಹುದು

12–00 Noon.

ಶ್ರೀ ಕೆ.ಹೆಚ್. ರಂಗನಾಥ್.—ನಿಮ್ಮ ಸಲಹೆ ಕಾರ್ಯಗತ ಮಾಡತಕ್ಕ ವಿಚಾರವಾಗಿದೆ. ಹೀಗಿರುವುದರಿಂದ ನಾವು ಏನು ಪ್ರಯತ್ನ ಮಾಡಿದರೂ ಸಹ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆರ್ಥಿಕ ಬೆಳೆಗಳ ಬಗ್ಗೆ ಸಾಕಷ್ಟು ಅಭಿವೃದ್ಧಿ ಆಗಿದೆ, ಒಳ್ಳೊಳ್ಳೆಯ ತಳಿಗಳನ್ನು ಸಂಶೋಧನೆ ಮಾಡಿ ವಿಶ್ವವಿದ್ಯಾನಿಲಯದವರು ಕಂಡುಹಿಡಿದಿದ್ದಾರೆ. ಡಿಪಾರ್ಟಮೆಂಟಿನ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಉತ್ತಮ ಕೆಲಸ ಮಾಡಿದ್ದಾರೆ. ಕೆಲವು ಸದಸ್ಯರುಗಳು ಅಧಿಕಾರಿಗಳು ರಾಜಕೀಯ ಮಾಡುತ್ತಾರೆಂದು ಹೇಳಿದರು. ಅಲ್ಲಿ, ಇಲ್ಲಿ ಮಾಡಬಹುದು, ಎಲ್ಲರೂ ರಾಜಕೀಯ ಮಾಡುತ್ತಾರೆಂದು ಹೇಳುವುದು ಸರಿಯಲ್ಲ. ನಾನು ಒಬ್ಬ ಶಾಸಕರ ಮದುವೆ ಮನೆಯಲ್ಲಿ ಗ್ರಾಮಸೇವಕರು ಊಟ ಬಡಿಸುತ್ತಿದ್ದುದ್ದನ್ನು ನೋಡಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್. —ತೋಟಗಾರಿಕೆ ಇಲಾಖೆಯವರು ಸನ್ಮಾನ್ಯ ಮಂತ್ರಿಗಳ ಮನೆ ಮುಂದೆ ಹೂವಿನ ಗಿಡಗಳನ್ನು ಬೆಳೆಸುವುದಕ್ಕಾಗಿ ಏಳು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ, ತಾವು ರಾಜಕೀಯ ಮಾಡುವುದಿಲ್ಲ ಎಂದು ಹೇಳುತ್ತೀರಿ.

SRI K. H. RANGANATH.—I am a lover of plants; I am a lover of gardens. ಬೇಡ ಅಂದರೆ ತೆಗೆದುಬಿಡೋಣ, ನನ್ನ ಮನೆಯಲ್ಲಿ ೧೫೭೭ ಕರ್ಟನ್ಸ್ ಇದ್ದವು, ಏಳುವರೆ ಸಾವಿರ ರೂಪಾಯಿ ಇನ್‌ಕಂ ಟ್ಯಾಕ್ಸ್ ಬಂದಿದೆ, ಇದೆಲ್ಲಾ ನಮಗೆ ಬೇಡ ಅಂತ ಹೇಳಿದೆ. ಹೂವಿನ ಮೇಲೆ ಕೋಪ ಏತಕ್ಕೆ? ತಾವು ಕೂಡ ಸಾಯಂಕಾಲ ಬಂದು ಕೂತುಕೊಳ್ಳಿ. You can also come and give relaxation to me. Infact it is a rare commodity to me. Why don't you come and help me also.

ಶ್ರೀ ಎಂ. ಚಂದ್ರಶೇಖರ್.—ಅರ್ಬನ್ ಲ್ಯಾಂಡ್ ಸೀಲಿಂಗ್ ಪ್ರಕಾರ ಇದರಲ್ಲಿ ನಿಮಗೆ ಅನುಕೂಲ ಇದೆ.

ಶ್ರೀ ಕೆ. ಹೆಚ್. ರಂಗನಾಥ್.—ನನಗೆ ಯಾವ ಅನುಕೂಲವೂ ಇಲ್ಲ. ನಾನು ಯಾವಸೀಲಿಂಗ್‌ನೊಳಗೂ ಬಂದಿಲ್ಲ. ನೀವು ಯಾವರೀತಿ ಸೀಲಿಂಗ್ ತಂದರೂ ನಾನು ಅದರಲ್ಲಿ ಬರುವುದಿಲ್ಲ. ಇವತ್ತು ಹತ್ತಿ ಬೆಳೆ ಚನ್ನಾಗಿ ಇದೆ, ೧೯೭೭–೭೮ರಲ್ಲಿ ೫.೮೭ ಲಕ್ಷ ಹತ್ತಿ ಬೇಲ್ ಇದ್ದರೆ, ಇವತ್ತು ೯ ಲಕ್ಷ ಬೇಲ್ ಹತ್ತಿ ಉತ್ಪನ್ನ ವಾಗುತ್ತಿದೆ. ಆದರೆ ಮಾರಾಟದ ದೃಷ್ಟಿಯಿಂದ ರೈತರಿಗೆ ತೊಂದರೆಯಾಗಿದೆ, ಇದರ ಬಗ್ಗೆ ನಾವು

ಇವತ್ತು ವಿಚಾರ ಮಾಡಬೇಕಾಗಿದೆ. ಇವತ್ತು ಕಬ್ಬು ಕೂಡ ತೊಂದರೆಗೆ ಒಳಗಾಗಿರತಕ್ಕ ಬೆಳೆಯಾಗಿದೆ. ಇವತ್ತು ಮಾರುಕಟ್ಟೆ ವ್ಯವಸ್ಥೆಯಬಗ್ಗೆ ವಿಚಾರ ಮಾಡತಕ್ಕ ಸಮಸ್ಯೆ ಇದೆ, ಇದನ್ನು ಮಾಡಲೇ ಬೇಕಾಗುತ್ತದೆ. ಇದನ್ನು ಮಾಡದೆ ಹೋದರೆ ಒಂದಕ್ಕೊಂದು ತೊಂದರೆಯಾಗಿ ವ್ಯವಸಾಯ ಯಾವ ದೃಷ್ಟಿಯಿಂದ ವಿಚಾರ ಮಾಡಿದರೂ ಕೂಡ ಅದರ ಫಲ ದೊರೆಯದೆ ಇರತಕ್ಕ ಪರಿಸ್ಥಿತಿ ಬರಬಹುದೆಂದು ಬಹಳ ಕಳಕಳಿಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಬ್ಬಿನ ಬೆಳೆ ೯೯.೬೦ ಲಕ್ಷ ಟನ್ ಇದ್ದುದು ೭೭–೭೮ಕ್ಕೆ ೧೪೯ ಲಕ್ಷ ಟನ್ ಆಗಿದೆ. ಈ ಸಾರಿ ೧೬.೨ ಲಕ್ಷ ಟನ್ ಗುರಿ ಇಟ್ಟುಕೊಂಡಿದ್ದೇವೆ. ತಂಬಾಕು ೨೬,೦೦೦ ಎಕರೆನಲ್ಲಿ ಬೆಳೆಯುತ್ತಿತ್ತು, ಇವತ್ತು ಅದು ೩೨ ಸಾವಿರ ಎಕರೆನಲ್ಲಿ ಬೆಳೆಯುತ್ತಿದೆ. ಸಿಗರೇಟು ತಂಬಾಕುವಿಗೆ ಸ್ವಲ್ಪ ಬೆಲೆ ಇದೆ, ಆದರೆ, ಬೀಡಿ ತಂಬಾಕು ಮತ್ತು ಚೀವಿಂಗ್ ತಂಬಾಕುವಿಗೆ ಎಲ್ಲಾ ಕಡೆಯಲ್ಲಿಯೂ ಬೆಲೆ ಕಡಿಮೆಯಾಗುತ್ತಿದೆ. ಇದರಿಂದ ನಿಪ್ಪಾಣಿ ಭಾಗದಲ್ಲಿ ತಂಬಾಕು ಬೆಳೆಯುತಕ್ಕ ರೈತರಿಗೆ ತೊಂದರೆಯಾಗುತ್ತದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರದೊಡನೆ ಪತ್ರ ವ್ಯವಹಾರ ಮಾಡಿ, ಮೋಹನ್‌ಧಾರಿಯಾರವರನ್ನು ಮೀಟ್ ಮಾಡಿ ಈ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಬೊಮ್ಮಾಯಿಯವರು ಹತ್ತಿಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು, ಕಾಟನ್ ಕಾರ್ಪೊರೇಷನ್‌ನವರು ನಮ್ಮಲ್ಲಿ ಒಂದು ಲಕ್ಷ ಬೇಲ್ ಹತ್ತಿ ಇದ್ದರೂ ಕೂಡ ಕೊಂಡಿಲ್ಲ, ನೀವು ಏತಕ್ಕೆ ಒತ್ತಾಯ ಮಾಡುತ್ತಿಲ್ಲ ಎಂದು ಹೇಳಿದರು. ಅವರಿಗೆ ಫೇರ್ ಕ್ವಾಲಿಟಿ ಬೇಕು ಎಂದು ಹೇಳುತ್ತಾರೆ. ಫೇರ್ ಕ್ವಾಲಿಟಿ ಯಾರು ನಿರ್ಧಾರ ಮಾಡುವುದು. ಅವರಿಗೆ ಫೇರ್ ಕ್ವಾಲಿಟಿ ಇಲ್ಲದೆ ಹೋದರೆ ಅವರು ಖರೀದಿ ಮಾಡುವುದಿಲ್ಲ. ನಮ್ಮಲ್ಲಿ ಡಿಸ್‌ಕಷನ್ ಮಾಡುವಾಗ ಕೊಳ್ಳುತ್ತೇವೆಂದು ಹೇಳುತ್ತಾರೆ, ಆದರೆ ಖರೀದಿ ಮಾಡುವಾಗ ಕಂಡೀಷನ್ಸ್ ಹಾಕುತ್ತಾರೆ. ಈ ಬಗ್ಗೆ ಪಾರ್ಲಿಮೆಂಟ್ ಸದಸ್ಯರೂ, ಪ್ರತಿಯೊಬ್ಬ ಸದಸ್ಯರೂ ಕೂಡ ಒತ್ತಾಯ ಮಾಡಬೇಕಾಗುತ್ತದೆ. Agriclutural lobby will become a powerful lobby in this country; otherwise, this agriculture which contributes 65% to the national production and national wealth will just not be there.

ಶ್ರೀ ಪಿ. ರಾಂದೇವ್.—ಕರ್ನಾಟಕದ ಚರಣ್‌ಸಿಂಗ್ ಆಗುತ್ತಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್.—ರಾಂದೇವರಿಗೂ ಮತ್ತು ವ್ಯವಸಾಯಕ್ಕೂ ಬಹಳ ದೂರ.

ಶ್ರೀ ಪಿ. ರಾಂದೇವ್.— ಈ ದೇಶದ ಹಣವನ್ನೆಲ್ಲಾ ಅಗ್ರಿಕಲ್ಚರ್‌ನಲ್ಲಿ ಹಾಕಬೇಕು ಅಂತ ಹೇಳುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಬೇರೆ ಬಾಬುಗಳಿಗೆ ಹಣ ಕೊಡಬೇಡವೆ? ಕಾಟನ್ ಕಾರ್ಪೊರೇಷನ್ ನಮಗೆ ಅಷ್ಟು ಸಹಾಯಕವಾಗಿಲ್ಲ. ಇನ್ನು ಡ್ರೈವ್ ಫಾರ್ಮಿಂಗ್‌ನಲ್ಲಿ ಬೇಳೆಕಾಳುಗಳ ಅಭಿವೃದ್ಧಿಗೆ ಹೆಚ್ಚು ಪ್ರಯತ್ನ ಮಾಡುತ್ತಿದ್ದೇವೆ. ಅದೇರೀತಿ ಭೂ ಸಾರ ಸಂರಕ್ಷಣಕ್ಕಾಗಿ ಬಂದ್ ಹಾಕಿರತಕ್ಕ ಸುಮಾರು ೪೫ ಸಾವಿರ ಹೆಕ್ಟೇರು ಪ್ರದೇಶದಲ್ಲಿ ಔಡಲ ಬೆಳೆಯತಕ್ಕ ಪ್ರಯತ್ನ ಮಾಡುತ್ತಿದ್ದೇವೆ. Cost of cultivation is less but the produce more remunerative. ಈ ದೃಷ್ಟಿಯಿಂದ ಎಣ್ಣೆ ಕಾಳುಗಳ ಉತ್ಪತ್ತಿ ಮಾಡಬೇಕಾಗುತ್ತದೆ. ಎಣ್ಣೆಕಾಳು ಮತ್ತು ಬೇಳೆ ಕಾಳುಗಳ ಉತ್ಪತ್ತಿಗೆ ಪ್ರೊಸೆಸಿಂಗ್ ಯೂನಿಟ್ ಮಾಡಬೇಕಾಗುತ್ತದೆ. ಇದನ್ನು ಹೇಗೆ ಮಾಡಬೇಕು? ಏಜನ್ಸಿ ಮುಖಾಂತರ ಮಾಡಬೇಕೆ? ಸಹಕಾರ ಕ್ಷೇತ್ರದಿಂದ ಮಾಡಬೇಕೆ? ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಮಾಡಬೇಕೆ? ಎನ್ನುವ ಬಗ್ಗೆ ವಿಚಾರ ಮಾಡಬೇಕಾಗಿದೆ. ಸಹಕಾರ ಕ್ಷೇತ್ರದಲ್ಲಿ ಮಾಡುವುದು ಕಷ್ಟವಾಗುತ್ತದೆ. ಏಕೆಂದರೆ ಅವರು ಧಿಡೀರನೇ ಹತ್ತಿರ ಬರುತ್ತಾರೆ. ಅವರ ಕೈಯೊಳಗೆ ಸಿಕ್ಕಿದ ಮೇಲೆ ಬಿಡಿಸಿಕೊಳ್ಳುವುದು ಕಷ್ಟವಾಗುತ್ತದೆ. ಗದಗ್‌ನಲ್ಲಿ ಕಾಟನ್ ಆಯಿಲ್ ಪ್ರೊಸೆಸಿಂಗ್ ಮಿಲ್ ಇದೆ, ಬಾಗಲಕೋಟೆ ಮಿಲ್ ಇದೆ. ರಾಯಚೂರುನಲ್ಲಿ ಸ್ಪಿನ್ನಿಂಗ್ ಮಿಲ್ ಇದೆ. None of them are working on profit .... ಗದಗ್‌ನಲ್ಲಿರತಕ್ಕ ಮಿಲ್ ೧.೩೨ ಲಕ್ಷ ರೂಪಾಯಿ ನಷ್ಟ ಅನುಭವಿಸಿದೆ. ಇವತ್ತು ನಾವು ರೈತರ ಪ್ರತಿನಿಧಿಗಳಾಗಿ ನೋಡಿ ನೋಡಿ ಕೂತು ಕೊಂಡಿದ್ದೇವೆ. ಇವತ್ತು ಮೂಕರಾಗಿದ್ದೇವೆ. ಇವತ್ತು ಒಂದು ಲಕ್ಷ ಬೇಲ್ ಹತ್ತಿ ಬಿದ್ದಿದೆ, ಆ ಮಿಲ್‌ಗೆ ಪರ್ಚೇಸ್ ಮಾಡುವುದಕ್ಕೆ ಶಕ್ತಿ ಇಲ್ಲ, ಹಣ ಇಲ್ಲ, ವರ್ಕಿಂಗ್ ಕ್ಯಾಪಿಟಲ್ ಇಲ್ಲ. ಇವತ್ತು ಆ ಸೊಸೈಟಿಗೆ ೫೪ ಲಕ್ಷ ರೂಪಾಯಿ ಅಕ್ಯುಮಲೇಟೀವ್ ಲಾಸ್ ಆಗಿದೆ, ಇವತು ನಮಗೆ ಕೇಂದ್ರಸರ್ಕಾರದ ಪಾಲಿಸಿ

ಯಲ್ಲಿ ತೊಂದರೆಯಾಗಿದೆ. The Varalakshmi Cotton of Raichur is the best cotton. I am not a millowner. I don't know, but this is what I heard. ಈ ಹತ್ತಿಯಿಂದ ಒಳ್ಳೆಯ ದಾರ ಬರುತ್ತದೆಂದು ತಜ್ಞರು ಕೂಡ ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಈವತ್ತು ಒಂದಕ್ಕೊಂದು ಪೂರಕವಾಗಿ ವಿಚಾರ ಮಾಡತಕ್ಕಂಥ ಅವಶ್ಯಕತೆ ಇದೆ ಎನ್ನುವುದನ್ನು ನಾನು ಹೇಳುತ್ತಾ ಇದ್ದೇನೆ. ಕೇಂದ್ರ ಸರ್ಕಾರದವರು ಈವತ್ತಿನ ದಿವಸ ಪಾಲಿಸ್ಟರ್ ಫೈಬರ್‌ನ್ನು ಕೂಡ ಇಂಪೋರ್ಟ್ ಮಾಡುತ್ತಿದ್ದಾರೆ. ಇಂಥ ಒಂದು ನೀತಿಯನ್ನು ಅನುಸರಿಸಿ ಆಹಾರ ಪದಾರ್ಥಗಳು ಅಂದರೆ ಡ್ರೈ ಏರಿಯಾದಲ್ಲಿ ಬೆಳೆಯತಕ್ಕಂಥ ಕಡಲೆಕಾಯಿ, ಪಲ್ಸ್ ಮುಂತಾದ ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಯಾವರೀತಿ ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ವಿಚಾರ ಮಾಡ ತಕ್ಕಂಥಾದ್ದು ಈವತ್ತಿನ ದಿವಸ ಬಹಳ ಅವಶ್ಯಕತೆ ಇರುತ್ತದೆ. ಮತ್ತು ಇದರ ಬಗ್ಗೆ ಒಂದು ಸಮಗ್ರ ವಾದ ವಿಚಾರವನ್ನು ಮಾಡಿ, ಒಂದು ಪ್ರಾಜೆಕ್ಟ್ ತಯಾರು ಮಾಡಬೇಕು ಎನ್ನುವ ಬಗ್ಗೆಯೂ ಕೂಡ ಸರ್ಕಾರ ಯೋಚನೆ ಮಾಡುತ್ತಿದೆ ಎಂದು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಇನ್ನು ಆಗ್ರೋ ಇಂಡಸ್ಟ್ರೀಸ್ ಮುಖಾಂತರ ಕೊಡುತ್ತಿದ್ದ ಬುಲ್ಡೋಜರ್‌ಗಳ ರೇಟ್ ಬಹಳ ಜಾಸ್ತಿ ಯಾಗಿರುತ್ತದೆಂದು ಮಾನ್ಯ ಸದಸ್ಯರು ಹೇಳಿದರು. ಅದು ೧೫೦ ರೂಪಾಯಿಗಳಲ್ಲ ೧೧೦ ರೂಪಾಯಿ. ಅದರ ಬಗ್ಗೆ ಹೇಳುವುದಾದರೆ ಒಂದು ಚರಿತ್ರೆಯೇ ಆಗುತ್ತದೆ. ಹಿಂದೆ ಅಗ್ರಿಕಲ್ಚರ್ ಫೈನಾನ್ಸ್ ಡಿಪಾರ್ಟ್ ಮೆಂಟ್ ಎಂದು ಇದ್ದುದನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಮಾಡಿದಮೇಲೆ ಅಲ್ಲಿರ ತಕ್ಕಂಥ ಸಾಮಾನುಗಳನ್ನು ಇಲ್ಲಿಗೆ ತರಬೇಕಾದರೆ ಎಷ್ಟೋ ಹಾಳಾದವು, ಕೆಟ್ಟುಹೋದವು. ಇವುಗಳನ್ನೆಲ್ಲ ರಿಪೇರಿ ವಗೈರೆ ಮಾಡಲು ಮತ್ತಷ್ಟು ಹಣ ಖರ್ಚುಮಾಡಬೇಕಾದ ಸಂದರ್ಭಗಳು ಒದಗಿಬಂತು ಒಂದು ಲಕ್ಷ ಬುಲ್ಡೋಜರುಗಳಿಗೆ ೬ ಲಕ್ಷ ಕೊಡತಕ್ಕಂಥ ಪರಿಸ್ಥಿತಿ ಬಂದುದರಿಂದ ರೈತರಿಗೆ ಸಹಾಯ ಮಾಡದಂಥ ಪರಿಸ್ಥಿತಿ ಬಂದಿತ್ತು. ಈ ರೀತಿಯ ಪರಿಸ್ಥಿತಿ ಬಂದಾಗ್ಯೂ ಕೂಡ ಇದನ್ನು ಲಾಭದಾಯಕವಾಗಿ ಮಾಡ ಬೇಕು ಎನ್ನುವ ಬಗ್ಗೆ ವಿಚಾರ ಮಾಡುತ್ತಾ ಇದ್ದೇವೆ. ಆಗ್ರೋ ಇಂಡಸ್ಟ್ರೀಸ್ ಇಂಜಿನೀಯರಿಂಗ್ ವಿಭಾಗ ಏನು ಇದೆ ಇದರಲ್ಲಿಯೂ ಕೂಡ ಸಣ್ಣ ಹಿಡುವಳಿದಾರರು ಬರುತ್ತಾರೆ. ಮಾನ್ಯ ಶ್ರೀ ಜೆ. ಎಚ್. ಪಟೇಲರು ಹೇಳಿದರು ಭೂ ಸುಧಾರಣೆ ಕಾಯಿದೆ ಬಂದಮೇಲೆ ನೂರಾರು ಎಕರೆಗಳನ್ನು ಇಟ್ಟುಕೊಂಡಿರು ವವರು ಇರುತ್ತಾರೆಂದು. ನಾನಾದರೂ ಹೇಳುವುದು ಇಷ್ಟೇ ಇನ್ನು ೧೦–೧೫ ವರ್ಷಗಳಲ್ಲಿ ೧೦ ಎಕರೆಗಳ ಮೇಲ್ಪಟ್ಟು ನೂರಾರು ಎಕರೆಗಳನ್ನು ಇಟ್ಟುಕೊಂಡಿರುತ್ತೇವೆಂದು ಹೇಳತಕ್ಕಂಥವರೇ ಇರುವುದಿಲ್ಲ. ಮಂಡ್ಯ, ಕೋಲಾರ, ಮುಳಬಾಗಿಲು ಈ ಜಿಲ್ಲೆಗಳಲ್ಲಿ ಸಣ್ಣ ಹಿಡುವಳಿದಾರರು ಇರತಕ್ಕಂಥ ಜಿಲ್ಲೆಗಳಾಗಿ ರುತ್ತವೆ. ಅಲ್ಲಿ ಹೆಚ್ಚು ಬೆಳೆ ಬೆಳೆಯುವ ಸಾಧ್ಯತೆ ಇರುತ್ತದೆ. ಬೆಳೆ ಬೆಳೆದು ತೋರಿಸುತ್ತಿದ್ದಾರೆ. ಒಂದು ಎಕರೆಯಲ್ಲಿ ೧೦–೧೫ ಎಕರೆಗಳಲ್ಲಿ ಬೆಳೆಯುವಷ್ಟು ಬೆಳೆಯನ್ನು ಬೆಳೆಯುತ್ತಿರುವುದನ್ನು ಈವತ್ತಿನ ದಿವಸ ನಾವು ನೋಡುತ್ತಿದ್ದೇವೆ. ಹೆಚ್ಚು ಭೂಮಿ ಇದ್ದ ಮಾತ್ರಕ್ಕೆ ಜಾಸ್ತಿ ಆದಾಯ ಬರುತ್ತದೆ ಎಂದು ಹೇಳು ವುದರಲ್ಲಿ ಕಾರಣವಿರುವುದಿಲ್ಲ. ಮಂಡ್ಯಾದ ಸುತ್ತಮುತ್ತಲು ಹಳ್ಳಿಗಳವರು ೧೦೦–೬೦ ರಷ್ಟು ಜನರು ಸಾಲದ ವ್ಯವಸ್ಥೆಯನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ೧೦೦ಕ್ಕೆ ೪೦–೪೫ ಜನ ಸಣ್ಣ ಹಿಡುವಳಿದಾರರು ಸಹಕಾರಿ ಸಂಘಗಳಲ್ಲಿ ಸದಸ್ಯರಾಗಿದ್ದು ಸಾಲವನ್ನು ಪಡೆದುಕೊಂಡು ವ್ಯವ ಸಾಯವನ್ನು ಮಾಡುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಪ್ರತಿಯೊಂದು ಸಂದರ್ಭದಲ್ಲಿಯೂ ಸಾಲವನ್ನು ಕೊಟ್ಟು ಅಂದರೆ ತಕಾವಿಸಾಲ, ಭಾವಿಯನ್ನು ತೋಡುವುದಕ್ಕೆ ಸಾಲ, ಪಂಪಸೆಟ್‌ಗಾಗಿ ಸಾಲ, ಇತ್ಯಾದಿ ಪ್ರತಿಯೊಂದಕ್ಕೂ ಸಾಲವನ್ನು ಕೊಟ್ಟು ರೈತನನ್ನು ಸಾಲಗಾರನನ್ನಾಗಿ ಮಾಡುವುದಕ್ಕೆ ಬದ ಲಾಗಿ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಯಾವುದಾದರೂ ಒಂದು ಹಳ್ಳಿಯಲ್ಲಿ ೧೦–೧೫ ಬಾವಿಗಳು ಬೀಳತಕ್ಕಂಥ ಪ್ರದೇಶದಲ್ಲಿ ಡೀಪ್ ಬೋರ್‌ವೆಲ್ಸ್ ತೆಗೆಸಿ, ಐ.ಪಿ.ಸೆಟ್ ಹಾಕಿಸಿ, ಭೂಮಿ ಲೆವಲಿಂಗ್ ಇವೆಲ್ಲ ಸರ್ಕಾರದವರೆ ಮಾಡಿಸಿ ವಾಟರ್ ಚಾರ್ಜ್ ಇವೆಲ್ಲವನ್ನು ಕೊಟ್ಟು, ವ್ಯವ ಸಾಯವನ್ನು ಮಾಡತಕ್ಕಂಥ ಜವಾಬ್ದಾರಿಯನ್ನು ಕೊಟ್ಟು ರೈತರನ್ನು ಸಾಲಗಾರರನ್ನಾಗಿ ಮಾಡದ ರೀತಿ ಯಲ್ಲಿ ಮಾಡುವುದರ ಜೊತೆಗೆ ಆಗ್ರೋ ಇಂಡಸ್ಟ್ರೀಸ್ ಇದಕ್ಕೆ ಕೆಲಸ ದೊರೆತು ಲಾಭದಾಯಕ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದೂ ಕೂಡ ಸರ್ಕಾರ ವಿಚಾರ ಮಾಡುತ್ತಾ ಇದೆ.

ಶ್ರೀ ಎಂ.ವಿ. ರಾಜಶೇಖರನ್.—ಆಗ್ರೋ ಇಂಡಸ್ಟ್ರೀಸ್ ರೈತರಿಗೆ ಏನೇನು ಸಹಾಯ ಕೊಡುತ್ತಿದೆ ತಿಳಿಸುತ್ತೀರಾ? ನಾನು ನೆನ್ನೆ ಮಾತನಾಡುವಾಗ ರೈತರಿಗೆ ಫೀನಲ್ ಇಂಟರೆಸ್ಟ್ ಎಲ್ಲಾ ಹಾಕು ತ್ತಿದ್ದಾರೆ. ರೈತರು ತೆಗೆದುಕೊಂಡಂಥ ಪಂಪ್‌ಸೆಟ್‌ಗಳ ಮೇಲೂ ಹೆಚ್ಚಿಗೆ ಇಂಟರೆಸ್ಟ್ ಹಾಕಿರುತ್ತಾರೆ. ಇದನ್ನು ವಜಾ ಮಾಡುವುದರ ಬಗ್ಗೆ ತಮ್ಮ ನಿಲುವು ಏನು ಎಂದು ಕೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ಹೇಳಿದ್ದಕ್ಕೆ ಪ್ರಸ್ತಾಪ ಮಾಡುತ್ತಾ, ತಕ್ಷಣ ಉತ್ತರವನ್ನು ಕೆಲವು ವಿಚಾರಗಳ ಬಗ್ಗೆ ಹೇಳುವುದಕ್ಕಾಗುವುದಿಲ್ಲ. ಒಂದು ವಿಚಾರ ಹೇಳುವುದಾದರೆ ನಾವು ಹಣವನ್ನು ಖರ್ಚು ಮಾಡಿಲ್ಲ ಎನ್ನುವ ಅಭಿಪ್ರಾಯ ಸರಿಯಾದುದಲ್ಲ. ಈವತ್ತಿನ ದಿವಸ ರೂರಲ್ ಡೆವಲಪ್‌ಮೆಂಟಿನ ವಿವಿಧ ಬಾಬುಗಳಲ್ಲಿ ಕರ್ನಾಟಕ ಸರ್ಕಾರದವರು ಸುಮಾರು ೪೦ ಪರ್ಸೆಂಟ್ ಖರ್ಚು ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ೧೦ ಪರ್ಸೆಂಟ್ ಕೂಡ ಬರುತ್ತಿಲ್ಲ ಬಂದರೂ ಯಾವರೀತಿ ಯಲ್ಲಿ ಬರುತ್ತದೊ ಎನ್ನತಕ್ಕಂಥ ಪರಿಸ್ಥಿತಿ ಇರುತ್ತದೆ.

ಇನ್ನು ಮಾನ್ಯ ಸದಸ್ಯರನೇಕರು ಕೆಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತಾರೆ. ಇದರ ಬಗ್ಗೆ ಒಂದು ಕಮಿಟಿಯನ್ನು ಮಾಡಬೇಕಾಗುತ್ತದೆ ಫೈನಾನ್ಸ್ ಮಿನಿಸ್ಟರ್, ಸಹಕಾರಿ ಸಚಿವರು, ಇರಿಗೇಷನ್ ಮಿನಿಸ್ಟರ್ ಮತ್ತು ಮುಖ್ಯ ಮಂತ್ರಿಗಳು ಎಲ್ಲರೂ ಕೂತು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿರುತ್ತದೆ. ಎಲ್ಲ ಡಿಪಾರ್ಟ್‌ಮೆಂಟ್‌ಗಳೂ ಅಂದರೆ ರೂರಲ್ ಡೆವಲಪ್‌ಮೆಂಟ್, ಅನಿಮಲ್ ಹಸ್‌ಬೆಂಡ್ರಿ, ಕೋ-ಆಪರೇಷನ್ ಈ ಎಲ್ಲಾ ಇಲಾಖೆಗಳು ಒಂದುಗೂಡಿ ಒಂದು ನೀತಿ ಪೂರಕವಾಗಿರುವಂಥ ಒಂದು ಸಮಗ್ರವಾದಂಥ ವ್ಯವಸ್ಥೆ ಮಾಡಬೇಕಾಗಿರುತ್ತದೆ. ಆ ರೀತಿಯಾಗದಿದ್ದರೆ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವೇ ಇಲ್ಲ. ಆ ಒಂದು ದೃಷ್ಟಿಯನ್ನೇ ಇಟ್ಟುಕೊಂಡು ರಾಜ್ಯ ಸರ್ಕಾರ ಕೆಲಸ ಮಾಡುತ್ತಿದೆ. ನಾವು ಬೆಳೆದಂಥ ಬೆಳೆಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಾವು ಬೆಳೆದಂಥ ಕಡಲೆಕಾಯಿ ಇದು ಬಾಂಬೆ ಗುಜರಾತಿಗೆ ಹೋಗಿ ಅಲ್ಲಿಂದ ಎಣ್ಣೆಯಾಗಿ ನಮ್ಮ ರಾಜ್ಯಕ್ಕೆ ಬರುತ್ತದೆ. ಎಣ್ಣೆಯಾದ ಮೇಲೂ ನಮಗೆ ದುಡ್ಡು ಬರಬೇಕಾದರೆ ೧೫ ದಿವಸ ೧ ತಿಂಗಳಾದರೂ ಬರುವುದಿಲ್ಲ. ಇದು ಒಂದು ರೀತಿಯಲ್ಲಿ ತಿರುಪತಿ ಚವರದಂತಾಗಿರುತ್ತದೆ. ನಾನು ಒಂದು ಮಾತನ್ನು ಹೇಳುವುದಾದರೆ ಇದು ಆಲ್ ಇಂಡಿಯಾ ಸರ್ವೀಸ್ ಆಗಬೇಕು. ಇದು ವಿವಾದಗ್ರಸ್ಥ ವಿಚಾರವಾಗಿರುತ್ತದೆ. ಇದರ ಬಗ್ಗೆ ತಕ್ಷಣ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ಇದನ್ನು ಏತಕ್ಕೆ ವಿವಾದಗ್ರಸ್ಥ ವಿಚಾರವೆಂದು ಹೇಳುತ್ತಿದ್ದೀರಿ?

ಶ್ರೀ ಕೆ. ಎಚ್. ರಂಗನಾಥ್.—ನಾನು ಮಂತ್ರಿಯಾಗಿ ಹೇಳುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದೇನೆ. ಮಾನ್ಯ ಸದಸ್ಯರು ಇಚ್ಛೆಪಟ್ಟಲ್ಲಿ ಬೇಕಾದರೆ ವೈಯುಕ್ತಿಕವಾಗಿ ಇದರ ಬಗ್ಗೆ ಮಾತನಾಡಲು ತಯಾರಾಗಿದ್ದೇನೆ.

ನಮ್ಮ ಕೃಷಿ ವಿಶ್ವವಿದ್ಯಾನಿಲಯ ಬರುವುದಕ್ಕಿಂತ ಮುಂಚೆ ಬಿ.ಎಸ್.ಸಿ. ಮತ್ತು ಎಂ.ಎಸ್.ಸಿ. ಆದ ಅಧಿಕಾರಿಗಳನ್ನು ನೇಮಿಸಿಕೊಳ್ಳಲಾಗಿತ್ತು. ಈಗ ಬಿ.ಎಸ್.ಸಿ. (ಅಗ್ರಿ) ಆದಂತಹ ತಜ್ಞರನ್ನೇ ನೇಮಿಸಿಕೊಳ್ಳುತ್ತಾ ಇರುವುದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಆತಂಕಪಡುವುದು ಅನಾವಶ್ಯಕ. ಒಬ್ಬ ಡೆಪ್ಯೂಟಿ ಸೆಕ್ರೇಟರಿಯವರನ್ನು ನೇಮಿಸಿಕೊಂಡರೆ ನಮಗೆ ಸಹಾಯವಾಗುತ್ತದೆ ಅನ್ನುವ ಅರ್ಥ ಬರುವ ರೀತಿಯಲ್ಲಿ ಹೇಳಿದ್ದಾರೆ.

ಶ್ರೀ ಎಂ. ವಿ. ರಾಜಶೇಖರನ್.—ನಾನು ಹೇಳಿದ್ದು ಟೆಕ್ನಿಕಲ್ ಆಗಿ ತಿಳಿದುಕೊಂಡಂಥಾವರನ್ನು ಸೆಕ್ರೆಟರಿಯಾಗಿ ನೇಮಕ ಮಾಡಿಕೊಳ್ಳಿ ಅದು ಆಗದೇ ಹೋದರೆ ಒಬ್ಬರು ಅಡಿಷನಲ್ ಸೆಕ್ರೆಟರಿನೋ ಅಥವಾ ಜಾಯಿಂಟ್ ಸೆಕ್ರೆಟರಿಯನ್ನೋ ಟೆಕ್ನಿಕಲ್ ವಿಷಯ ತಿಳಿದಂಥಾವರನ್ನು ಇಟ್ಟುಕೊಳ್ಳಿ ಎಂದು ಹೇಳಿದ್ದು, ಡೆಪ್ಯೂಟಿ ಸೆಕ್ರೇಟರಿನಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಅವರೇ ಇದ್ದರೇ ಅಂಥಾ ಕಷ್ಟವಾಗಲಾರದು. ಅವರ ಮನಸ್ಸಿನಲ್ಲಿ ಏನು ಇದೆಯೋ ಗೊತ್ತಿಲ್ಲ. ವಿಧಾನಸೌಧಕ್ಕೆ ಕಮೀಷನರ್ ಆಗಿ ಮತ್ತು ಜಾಯಿಂಟ್ ಸೆಕ್ರೆಟರಿಯಾಗಿ ಬರತಕ್ಕಂಥಾವರು ಅವರು ಆಯಾಯ ಡಿಪಾರ್ಟ್‌ಮೆಂಟಿನಲ್ಲಿ ಡೈರೆಕ್ಟರ್ ಆಗಿ ಇರತಕ್ಕಂಥಾವರೇ ಇಲ್ಲಿಗೆ ಬರುತ್ತಾರೆ. ಆದುದರಿಂದ ಅವರೇ ಇದ್ದರೆ ಅಂತಹ ಕಷ್ಟವಾಗಲಾರದು.

ಇನ್ನು ಡೆಟರ್ಸ್ ಬಗ್ಗೆ, ಕ್ರೆಡಿಟ್ಸ್ ಬಗ್ಗೆ ಮತ್ತು ಮಾರ್ಕೆಟಿಂಗ್ ಬಗ್ಗೆ ಕೆಲವು ಸದಸ್ಯರು ಪ್ರಸ್ತಾಪ ಮಾಡಿದರು. ನಾವು ಅಗ್ರಿಕಲ್‌ಚರಲ್ ಡೆಟರ್ ರಿಲೀಫ್ ಆಕ್ಟ್ ಒಂದನ್ನು ಇಲ್ಲಿ ಪಾಸು ಮಾಡಿದೆವು. ಅದು ಹೈಕೋರ್ಟ್‌ಗೆ ಹೋಯಿತು. ಅಲ್ಲಿ ನಮ್ಮ ವಿರುದ್ಧವಾಯಿತು. ಮತ್ತೆ ಅದು ಸುಪ್ರೀಂ ಕೋರ್ಟ್‌ಗೆ ಹೋದ ಮೇಲೆ ನಮ್ಮ ಕಡೆ ಆಗಿದೆ. ಅದನ್ನು ಜಾರಿಗೆ ಕೊಟ್ಟರೆ ಹಳ್ಳಿಗಾಡಿನಲ್ಲಿರುವ ರೈತರಿಗೆ ಅನುಕೂಲವಾಗುತ್ತದೆ. ಏತಕ್ಕೆಂದರೆ ತಮಗೆಲ್ಲಾ ಗೊತ್ತಿರುವ ಹಾಗೆ ಸುಮಾರು ೮-೧೦ ವರ್ಷ

ಇದು ಕೋರ್ಟ್‌ನಲ್ಲಿ ಇದ್ದು ಯಾವ ಒಂದು ತೀರ್ಮಾನವಾಗದೇ ಇದರಿಂದ ರೈತರು ತೊಂದರೆಗೊಳಗಾಗಿ ಬಹಳ ಕಷ್ಟಪಡಬೇಕಾಯಿತು. ಈಗ ಅದನ್ನು ಜಾರಿಗೆ ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ. ಮತ್ತು ಇದರಿಂದ ಸಣ್ಣ ಹಿಡುವಳಿದಾರರಿಗೆ ಮತ್ತು ವೀಕರ್ ಸೆಕ್ಷನ್‌ನವರಿಗೆ ಅಂದರೆ ೪೮೦೦ ರೂಪಾಯಿ ಒಳಗೆ ಇರತಕ್ಕಂಥಾ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ. ಈಗ ಬಹಳಷ್ಟು ರೈತಾಪಿ ಜನರು ಈ ಒಂದು ಸಾಲದ ಹೊರೆಯಲ್ಲಿ ಇದ್ದಾರೆ. ಅದರ ಒಂದು ಅಂಕಿಅಂಶಗಳನ್ನು ನೋಡಿದರೆ ಸುಮಾರು ೩೫೦ ಕೋಟಿ ರೂಪಾಯಿಗಳಷ್ಟು ಸಾಲ ಅವರ ತಲೆ ಮೇಲೆ ಇದೆ. ಈಗ ಇದನ್ನು ಜಾರಿಗೆ ಕೊಟ್ಟರೆ ಆವರುಗಳೆಲ್ಲಾ ಋಣ ಮುಕ್ತರಾಗಿ ಸ್ವಲ್ಪ ಉಸಿರಾಡುವುದಕ್ಕೆ ಆಗುತ್ತದೆ. ಈ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ವೆಸ್ಟರ್ನ್ ಕಂಟ್ರೀಸ್‌ನಲ್ಲಿರತಕ್ಕ ಹಾಗೆ ಹೆಲ್ಪಿಂಗ್ ದಿ ಫಾರ್ಮರ್ಸ್ ಬಗ್ಗೆ ಹೇಳಿದರು. ಇದು ಒಂದಲ್ಲ ಒಂದು ರೀತಿಯಲ್ಲಿ ಕವರ್ ಅಪ್ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಸ್ಮಾಲ್ ಹೋಲ್ಡರ್ಸ್‌ಗೆ ಸಂಬಂಧಪಟ್ಟಂತೆ ಲ್ಯಾಂಡ್ ಕನ್ಸಾಲಿಡೇಟ್ ಮಾಡಬೇಕು ಎನ್ನುವ ಮಾತನ್ನು ಶ್ರೀ ಎಂ. ವಿ. ರಾಜಶೇಖರನ್‌ರವರು ಹೇಳಿದರು. ಬಾಂಬೆ ಕರ್ನಾಟಕದಲ್ಲಿರತಕ್ಕಂಥಾ ಒಂದು ಆಕ್ಟನು ಇಲ್ಲಿಗೆ ಜಾರಿಗೆ ತಂದಿರುವ ಹಾಗೆ ನನಗೆ ಜ್ಞಾಪಕ ಇದೆ. ಬಹುಶಃ ಇದು ಯಾವ ಖಾತೆಗೆ ಸಂಬಂಧಪಟ್ಟ ಹಾಗೆ ಪ್ರಸ್ತಾಪಿಸಿದ್ದಾರೋ ನನಗೆ ಜ್ಞಾಪಕ ಇಲ್ಲ. ಬಹುಶಃ ಇದೇನಾದರೂ ರೆವಿನ್ಯೂ ಇಲಾಖೆಗೇನಾದರೂ ಸಂಬಂಧಪಟ್ಟಂತೆ ಇದೆಯೋ ಏನೋ. ಒಟ್ಟಿನಲ್ಲಿ ಇದು ಆಗುವುದು ಅವಶ್ಯಕ. ಒಂದು ಕಡೆ ಒಂದು ಗುಂಟೆ ಮತ್ತೊಂದು ಕಡೆ ೪ ಗುಂಟೆ ಈರೀತಿ ಇರುವುದು ಅನಾವಶ್ಯಕ. ಒಟ್ಟಿನಲ್ಲಿ ಬಾಂಬೆ ಕರ್ನಾಟಕದಲ್ಲಿರುವಂತೆ ಇಲ್ಲೂ ಕೂಡ ಲ್ಯಾಂಡ್ ಕನ್ಸಾಲಿಡೇಟ್ ಮಾಡುವುದು ಅವಶ್ಯಕ ಎಂದು ಹೇಳುತ್ತೇನೆ.

ಇನ್ನು ಫಾರ್ಮರ್ಸ್ ಫೋರಂ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಪೊತ್ತು ಫಾರ್ಮರ್ಸ್ ಫೋರಂ ಬೆಂಗಳೂರಿನಲ್ಲಿ ಒಂದು ಇದೆ. ಅದೇ ರೀತಿಯಾಗಿ ಜಿಲ್ಲೆಯಲ್ಲೂ ಕೂಡ ಅಲ್ಲೊಂದು ಇಲ್ಲೊಂದು ಇದೆ, ತಾಲ್ಲೂಕು ಮಟ್ಟದಲ್ಲಿರತಕ್ಕಂಥಾದ್ದು ಸತ್ತುಹೋಗಿದೆ, ಕೆಲವರು ಆ ಬಿಲ್ಡಿಂಗ್ ಅನ್ನು ಬಾಡಿಗೆಗೆ ಕೊಟ್ಟಕೊಂಡಿದ್ದಾರೆ. ರಾಜ್ಯ ಮಟ್ಟದಲ್ಲಿರತಕ್ಕಂಥಾ ಫಾರ್ಮರ್ಸ್ ಫೋರಂಗೆ ಒಬ್ಬ ಅಡ್ಮಿನಿಸ್ಟ್ರೇಟರ್ ಅನ್ನು ಹಾಕಿದ್ದೇವೆ. ಇದನ್ನು ಸರಿಯಾಗಿ ಒಂದು ವ್ಯವಸ್ಥೆ ಮಾಡಿ ಇದರಲ್ಲಿ ಎಲೆಕ್ಷನ್ ತರಹ ಮಾಡಿ ತಾಲ್ಲೂಕು ಮಟ್ಟದಲ್ಲಿ ಒಂದು ಸುವ್ಯವಸ್ಥಿತವಾದಂಥಾ ರೀತಿಯಲ್ಲಿ ಒಂದು ಅಗ್ರಿಕಲ್‌ಚರಲ್ ಮ್ಯೂಸಿಯಂ ಇರುವ ಹಾಗೆ ಹೊಸದಾಗಿ ಇದನ್ನು ಮಾಡಬೇಕು ಎನ್ನುವ ವಿಚಾರವೂ ಸಹ ಇದೆ. ಆದರೆ ಅದಕ್ಕೆ ಹಣವನ್ನು ಹೇಗೆ ಒದಗಿಸಬೇಕು ಮತ್ತು ಅದನ್ನು ಹೇಗೆ ಮಾಡಬೇಕು, ಮತ್ತು ಆ ಬಗ್ಗೆ ನಾವು ಯಾವರೀತಿಯಾಗಿ ಕೆಲಸ ಮಾಡಬೇಕು ಎನ್ನುವುದನ್ನೂ ಕೂಡ ಸರ್ಕಾರ ವಿಚಾರ ಮಾಡುತ್ತಾ ಇದೆ.

ಶ್ರೀ ಎಂ. ವಿ. ರಾಜಶೇಖರನ್.—ಸ್ವಾಮಿ, ರೈತರ ಸಂಘಟಿತವಾದಂಥಾ ಆರ್ಗನೈಸೇಷನ್ ಒಂದನ್ನು ಸೆಟ್ ಅಪ್ ಮಾಡುವಾಗ ನಮ್ಮ ಕರ್ನಾಟಕದಲ್ಲಿರುವ ಫಾರ್ಮರ್ಸ್ ಫೋರಂ ಏನು ಇದೆ ಅದು ಮತ್ತು ಸ್ಮಾಲ್ ಫಾರ್ಮರ್ಸ್, ಮಾರ್ಜಿನಲ್ ಫಾರ್ಮರ್ಸ್ ಮತ್ತು ಅಗ್ರಿಕಲ್‌ಚರಲ್ ಲೇಬರರ್ಸ್ ಇವರುಗಳಿಗೆಲ್ಲಾ ಅನುಕೂಲವಾಗುವ ಹಾಗೆ ಒಂದು ಆರ್ಗನೈಸೇಷನ್ ಸಂಘಟನೆ ಮಾಡುವಂಥಾದ್ದು ಮುಖ್ಯ.

ಎರಡನೆಯದಾಗಿ ರೈತರು ಈ ರೀತಿಯಾಗಿ ಮಾಡಿಕೊಂಡಂಥಾ ಒಂದು ಸಂಘ ಏನು ಇದೆ ಆ ಸಂಘ ಸರ್ಕಾರಕ್ಕೆ ಸಲಹೆಗಳನ್ನು ಕೊಡುವಂಥಾ ರೀತಿಯಲ್ಲಿ ಸರ್ಕಾರ ಬೆಳೆಸಬೇಕು. ಏತಕ್ಕೆಂದರೆ ಈವೊತ್ತು ಯೂರೋಪಿಯನ್ ಎಕನಾಮಿಕ್ ಪೊಜಿಷನ್ ತೆಗೆದುಕೊಂಡರೆ ಅಗ್ರಿಕಲ್‌ಚರಲ್ ಮಿನಿಸ್ಟರ್ ಅವರೇ ಬ್ರೆಸಲ್‌ಗೆ ಹೋದರೂ ಸಹ ಅಲ್ಲಿ ಅವರು ಇದರ ಬಗ್ಗೆ ಪ್ರಸ್ತಾಪ ಮಾಡುವಾಗ ಆಯಾಯ ದೇಶದ ರೈತರ ಸಂಘಗಳು ಏನು ಇದೆ ಅವರೊಂದಿಗೆ ಇದರ ಬಗ್ಗೆ ಚರ್ಚೆ ಮಾಡಿ, ಈ ಬಗ್ಗೆ ಏನೊಂದು ಪಾಲಿಸಿ ಇದೆಯೋ ಅದನ್ನೆಲ್ಲಾ ಚರ್ಚೆ ಮಾಡುತ್ತಾರೆ. ಆ ರೀತಿಯಾಗಿ ಇಲ್ಲೂ ಇರಬೇಕು. ಅಂತಹ ಸಂಘಗಳನ್ನು ತಾವು ಬೆಳೆಸಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ತಾವು ಹೇಳಿದ ವಿಷಯದ ಬಗ್ಗೆ ನನಗೆ ಭಿನ್ನಾಭಿಪ್ರಾಯ ಏನೂ ಇಲ್ಲ. ನಾನು ಇದನ್ನು ಒಪ್ಪಿಕೊಂಡರೂ ಸಹ ಇದು ಸರ್ಕಾರದ ವತಿಯಿಂದ ಒಂದರಿಂದಲೇ ಈ ಕೆಲಸ ಆಗಲಾರದು. ಈ ಬಗ್ಗೆ ಸಾರ್ವಜನಿಕರಲ್ಲೂ ಸಹ ಒಂದು ಅಭಿಪ್ರಾಯ ಬರಬೇಕು. ಇದರಲ್ಲಿ

ಸಂಯಮ ಇರಬೇಕಾದ್ದು ಅವಶ್ಯಕ. ಈ ಒಂದು ಪಾಲಿಸಿ ಸಾರ್ವಜನಿಕರ ಮುಖಾಂತರ ಬೆಳೆದುಕೊಂಡು ಬರಬೇಕು. ಅದು ಬಿಟ್ಟು ಅವರ ರಕ್ತ ಹೀರಬೇಕು ಅಂತ ಮಾಡಿದರೆ ಅದು ಆಗುವುದಿಲ್ಲ. ಇದು ಸಹಕಾರ ಕ್ಷೇತ್ರದಲ್ಲೂ ಆಗಬೇಕು, ಫಾರ್ಮರ್ಸ್ ಪೋರಂನಲ್ಲೂ ಆಗಬೇಕು, ಇದು ಅಷ್ಟರಮಟ್ಟಿಗೆ ಚೆನ್ನಾಗಿ ಬೆಳೆಯಬೇಕಾದರೆ ಸಾರ್ವಜನಿಕರ ಸಹಕಾರ ಅಗತ್ಯ. ಇದರ ಬಗ್ಗೆ ತಜ್ಞರ ಅಭಿಪ್ರಾಯವಾಗಲಿ, ಸರ್ಕಾರದ ಅಭಿಪ್ರಾಯವಾಗಲಿ, ಮಾನ್ಯ ಸದಸ್ಯರ ಅಭಿಪ್ರಾಯವಾಗಲಿ ವಿಚಾರವಂತರಿಗೆ ಮನ್ನಣೆ ಕೊಡುವಂಥಾ ರೀತಿಯಲ್ಲಿ ಬೆಳೆಯಬೇಕು. ಇದನ್ನು ಬರೇ ಕಾನೂನಿನಲ್ಲಿ ಮಾಡುವ ಅಂದರೆ ಆಗು ವುದಿಲ್ಲ. ಇದು ಸಾರ್ವಜನಿಕರ ಕೈಯಲ್ಲಿ ಇರುವುದರಿಂದ ಅವರ ಮನಸ್ಸಿನಲ್ಲೇ ಈ ಒಂದು ಅಭಿಪ್ರಾಯ ಬರಬೇಕು ಹಾಗೆ ಇಲ್ಲದೇ ಹೋದರೆ ಅಂಥಾದ್ದಕ್ಕೆಲ್ಲಾ ಈ ರೀತಿಯಾಗಿ ಅಡ್ಮಿನಿಸ್ಟ್ರೇಟರ್ ಅನ್ನು ನೇಮಕ ಮಾಡುತ್ತೇವೆ. ಒಂದು ವೇಳೆ ಇಂಥಾದ್ದಕ್ಕೆ ಅಡ್ಮಿನಿಸ್ಟ್ರೇಟರ್ ಅನ್ನು ಹಾಕಿದರೆ ಸರ್ಕಾರ ಹಸ್ತಕ್ಷೇಪ ಮಾಡಿದರು ಅಂಥಾಗಲಿ ಅಥವಾ ಡೆಮಾಕ್ರಸಿ ಹೋಯಿತು ಅಂತಾಗಲಿ ಅನ್ನುವ ರಾಗ ಬರುತ್ತದೆ. ಆದು ದರಿಂದ ನಾನು ಮೊದಲೇ ಹೇಳಿದ ಹಾಗೆ ಕೆಲವು ಕಡೆಗಳಲ್ಲಿ ಫಾರ್ಮರ್ಸ್ ಪೋರಂ ಬಿಲ್ಡಿಂಗ್ ಅನ್ನು ರೆಂಟೆಂಡ್‌ಗೆ ಕೊಟ್ಟಿದ್ದಾರೆ. ಇನ್ನು ಕೆಲವರು ಅದನ್ನು ಎಂಜಾಯ್ ಮಾಡುತ್ತಿದ್ದಾರೆ. ಈವೊತ್ತು ತಾಲ್ಲೂಕಾ ಮಟ್ಟದಲ್ಲಿರುವ ಈ ಒಂದು ಫಾರ್ಮರ್ಸ್ ಪೋರಂ ಅನ್ನು ಯಾವರೀತಿ ಒಂದು ವ್ಯವಸ್ಥೆ ಮಾಡಬೇಕು ಅನ್ನುವ ವಿಚಾರವೂ ಸಹ ಸರ್ಕಾರದ ಗಮನದಲ್ಲಿದೆ.

ಇನ್ನು ಪೀನಲ್ ಇಂಟರೆಸ್ಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಈಗಲೇ ಹೇಳು ವುದಕ್ಕೆ ಸಾಧ್ಯವಿಲ್ಲಾ. ಈ ಬಗ್ಗೆ ಆರ್ಥಿಕ ಮಂತ್ರಿಗಳೊಡನೆ ವಿಚಾರ ಮಾಡಬೇಕಾಗಿದೆ. ಕೆಲವು ರೈತರು ಏನು ಸಾಲ ತೆಗೆದುಕೊಂಡಿರುತ್ತಾರೋ ಅವರು ಆ ಸಾಲವನ್ನೂ ಇನ್ನೂ ಕಟ್ಟಿಲ್ಲಾ. ಸಾಮಾನ್ಯವಾಗಿ ಟ್ರಾಕ್ಟರ್ ಇಟ್ಟುಕೊಂಡಿರತಕ್ಕಂಥಾ ರೈತರು ದೊಡ್ಡ ದೊಡ್ಡ ರೈತರೇ ಅವರು ತೆಗೆದುಕೊಂಡಿರತಕ್ಕಂಥಾ ಸಾಲವನ್ನು ವಾಪಸ್ಸು ಕೊಡುವುದಿಲ್ಲ.

ಇನ್ನು ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಹೇಳುವುದಾ ದರೆ ಇದರಲ್ಲಿ ಹೆಚ್ಚು ಕೆಲಸ ನಡೆದಿದೆ ಎನ್ನುವುದಕ್ಕೆ ನಾನು ಇದರ ಅಂಕಿ ಸಂಖ್ಯೆಗಳನ್ನು ಕೊಟ್ಟಿರುವುದ ರಿಂದ ನಾನು ಇದನ್ನು ಪುನವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ.

ಇನ್ನು ವರಲಕ್ಷ್ಮಿ ವಿಷಯವಾಗಿ ಶ್ರೀ ವೀರಣ್ಣನವರು ಪ್ರಸ್ತಾಪ ಮಾಡಿದರು. ಏನೆಂದರೆ ಸುಮಾರು ೧೪೮೦೦ ರಿಂದ ೧೬೦೦೦ ಕ್ವಿಂಟಾಲ್‌ವರೆಗೆ ಬೇಕಾಗಬಹುದು ಎಂದು ಹೇಳಿದರು. ಬಹುಶಃ ಅವರು ಇದನ್ನು ಹೇಳಿರುವುದನ್ನು ನೋಡಿದರೆ ಬಹಳಮಟ್ಟಿಗೆ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ರೈತರನ್ನೂ ಸೇರಿಸಿಕೊಂಡು ಆ ಒಂದು ಅಂಕಿ ಸಂಖ್ಯೆಗಳನ್ನೂ ಸೇರಿಸಿಕೊಂಡು ಹೇಳಿದರೋ ಏನೋ ನನಗೆ ಗೊತ್ತಿಲ್ಲ. ಇಲ್ಲಿಯವರೆಗೆ ನಮ್ಮ ಕರ್ನಾಟಕದ ಜಿಲ್ಲೆಯಲ್ಲಿ ಖರ್ಚಾಗಿರತಕ್ಕಂಥಾದ್ದು ೮೦೦ ಕ್ವಿಂಟಾಲ್. ಇನ್ನೂ ಒಂದು ಸಾವಿರ ಕ್ವಿಂಟಾಲ್‌ನವರೆಗೆ ಬೇಕಾಗಬಹುದು. ಅದನ್ನು ಬೆಳೆ ಮಾಡುವುದಕ್ಕೆ ನಾವು ವ್ಯವಸ್ಥೆ ಮಾಡಿದ್ದೇವೆ. ಇನ್ನು ಹೋದ ಸಾರಿ ವರಲಕ್ಷ್ಮಿ ಬೆಳೆದಂಥಾ ರೈತರಿಗೆ ಕೆಲವರಿಗೆ ಸ್ವಲ್ಪ ಲಾಭ ಬಂದಿದೆ ಎಂದು ಹೇಳಿದ್ದಾರೆ ಮತ್ತು ಪ್ರಭಾವಯುತರಾದಂಥಾ ಕೆಲವರು ಹೆಚ್ಚು ಲಾಭ ಪಡೆದು ಕೊಂಡರು. ಪ್ರಭಾವವಿಲ್ಲದೇ ಇರುವಂಥಾ ಕೆಲವರಿಗೆ ಈ ಲಾಭವನ್ನು ಪಡೆದುಕೊಂಡಿಲ್ಲಾ ಎನ್ನುವ ಮಾತನ್ನು ಸಹ ಹೇಳಿದ್ದಾರೆ. ಈಗಾಗಲೇ ನಾವು ಇದರಲ್ಲಿ ಸುಮಾರು ೩–೩½ ಕೋಟಿ ರೂಪಾಯಿ ಯಷ್ಟು ದುಡ್ಡನ್ನು ಕಳೆದುಕೊಂಡಿದ್ದೇವೆ. ಶ್ರೀ ಭೀಮಣ್ಣ ಖಂಡ್ರೆಯವರು ತಮ್ಮ ಭಾಷಣದಲ್ಲಿ ಈ ಬೀಜ ಎಲ್ಲೂ ಹುಟ್ಟಿಲ್ಲ ಅನ್ನುವ ಮಾತನ್ನು ಹೇಳಿದರು ಜೊತೆಗೆ ಈ ಅಂಕಿಸಂಖ್ಯೆಗಳಿರುವ ಬಗ್ಗೆ ಪುಸ್ತಕ ಪೊಂದನ್ನು ಏನು ಕೊಟ್ಟಿದ್ದೇವೆ ಅದನ್ನು ಬೋಗಸ್ ಅಂತ ಒಂದೇ ಒಂದು ಶಬ್ದದಿಂದ ಹೇಳಿಬಿಟ್ಟರು. ಅವರು ಈ ಪುಸ್ತಕವನ್ನೇ ಬೋಗಸ್ ಅಂತ ಹೇಳಿದ ಮೇಲೆ ಇದಕ್ಕೆ ನಾನೇನೂ ಉತ್ತರ ಹೇಳುವುದಕ್ಕೆ ಸಾಧ್ಯವಿಲ್ಲಾ. ಅವರಿಗೆ ನಾನು ಹೇಳುವುದು ಇಷ್ಟೆ ಅವರು ಇನ್ನೂ ಸ್ವಲ್ಪ ಕಾಲ ತೆಗೆದುಕೊಂಡು ಈ ಪುಸ್ತಕವನ್ನು ಓದಲಿ. ಏತಕ್ಕೆಂದರೆ ಅವರು ಈ ಒಂದು ಅಂಕಿಸಂಖ್ಯೆ ಯಾವ ಯಾವ ಪೇಜಿನಲ್ಲಿ ಇದೆ ಅನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ.

೧೨–೩೦ ಪಿ ಎಂ.

ಬೇಕಾದರೆ ಪುಟಗಳನ್ನು ಹೇಳುತ್ತೇನೆ, ಮಾನ್ಯ ಸದಸ್ಯರು ಓದಿಕೊಳ್ಳಲಿ. ಆದರಲ್ಲಿ ನಿಮ್ಮ ಪ್ರಕಾರ ಬೋಗಸ್ ಯಾವುದು, ನಮ್ಮ ಪ್ರಕಾರ ಬೋಗಸ್ ಯಾವುದಲ್ಲ ಎನ್ನುವುದನ್ನು ನಂತರ ವಿಚಾರ ಮಾಡೋಣ. ಅಂಕಿ–ಅಂಶಗಳನ್ನು ಮುದ್ರಿಸುವಾಗ ಅಥವಾ ಸಂಗ್ರಹಿಸುವಾಗ ಕೆಲವು

ಸಣ್ಣ ತಪ್ಪುಗಳಾಗಬಹುದು. ಆದರೆ, ಅವನ್ನೇ ದೊಡ್ಡದು ಮಾಡಿ ಇವೆಲ್ಲಾ ಸಂಪೂರ್ಣವಾಗಿ ಬೋಗಸ್ ಎಂದು ಹೇಳುವುದು ಸಾಧುವಲ್ಲ. ಮಾನ್ಯ ಮಂಚೇಗೌಡರು ಹಲವಾರು ವಿಚಾರಗಳನು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಇನ್ನೂ ಸ್ವಲ್ಪ ಸಮಯ ಕೊಟ್ಟಿದ್ದರೆ, ಇನ್ನೂ ಕೆಲವಾರು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದರೇನೋ ಎಂದು ನನಗನ್ನಿಸಿತ್ತು. ಬಹು ಮುಖ್ಯವಾಗಿ, ವ್ಯವಸಾಯಾಭಿವೃದ್ಧಿಯಾಗಬೇಕು, ವ್ಯವಸಾಯ ಲಾಭದಾಯಕ ಉದ್ಯಮವಾಗಬೇಕು, ಇದರ ಸಂಶೋಧನೆಯ ಫಲ ಎಲ್ಲರಿಗೂ ದೊರೆಯಬೇಕು, ವ್ಯವಸಾಯೋತ್ಪತ್ತಿ ಜಾಸ್ತಿಯಾದಂತೆಲ್ಲಾ ಖರೀದಿ ಶಕ್ತಿಯೂ ಜಾಸ್ತಿಯಾಗಬೇಕು. ಇದೆಲ್ಲಾ ಆದರೆ, ಕೃಷಿಯನ್ನವಲಂಬಿಸಿರುವ ಉದ್ಯಮಗಳೆಲ್ಲವೂ ಅಭಿವೃದ್ಧಿಯಾಗುತ್ತದೆನ್ನುವ ಮೂಲತತ್ವವನ್ನು ನಾವು ಒಪ್ಪಿಕೊಂಡಿದ್ದೇವೆ. ಎಸ್.ಎಫ್.ಡಿ.ಎ. ಸೌಕರ್ಯಗಳು ದೊರೆಯುವುದು ಬಹಳ ಕಷ್ಟವಾಗಿದೆ ಎಂದು ಮಾನ್ಯ ಕಡಿದಾಳ್ ದಿವಾಕರ ಅವರು ಹೇಳಿದರು. ಈ ವಿಚಾರ ನಾನು ಮೊನ್ನೆ ಮಂಗಳೂರಿಗೆ ಹೋದಾಗ ಗೊತ್ತಾಯಿತು, ಸಹಕಾರ ಇಲಾಖೆಗೂ ಎಸ್.ಎಫ್.ಡಿ.ಎ. ಏಜನ್ಸಿಗಳ ಸಾಮರಸ್ಯವಿಲ್ಲ. ಇದರಿಂದ ಬರುವ ಶೇಕಡ ೨೫ರಷ್ಟು ಸಬ್ಸಿಡಿ ಏನಿದೆ ಅದು ರೈತನಿಗೆ ದೊರೆಯಬೇಕಾದರೆ ಸಣ್ಣ ಹಿಡುವಳಿದಾರರೆಂದು ಎಷ್ಟು ಹೇಳಿದರೂ ಸಾಲದು, ಅದರ ಜೊತೆಗೆ ೨,೪೦೦ ರೂಪಾಯಿಗಳಿಗಿಂತಲೂ ಕಡಿಮೆ ವರಮಾನ ಬರುತ್ತಿದೆ ಎಂಬುದನ್ನು ನಮೂದು ಮಾಡಬೇಕಾಗುತ್ತದೆ. ಆದರೆ, ಸಹಕಾರ ಇಲಾಖೆಯವರು ಬರೀ ''ಈತನಿಗೆ ಮೂರು ಎಕರೆ ಜಮೀನಿದೆ'' ಎಂದು ಬರೆದುಕೊಡುತ್ತಾರೆ, ಆದರೆ ಅದರಿಂದ ಬರುವ ವರಮಾನವನ್ನು ನಮೂದು ಮಾಡಿರುವುದಿಲ್ಲ. ಒಂದು ವೇಳೆ ವರಮಾನದ ಪತ್ರವನ್ನೂ ಅದರೊಂದಿಗೆ ಲಗತ್ತಿಸಿದ್ದರೆ ಸಬ್ಸಿಡಿ ಬರುವುದು ತೊಂದರೆಯಾಗುತ್ತಿರಲಿಲ್ಲ. ಹೀಗೆ. ಆಡಳಿತದಲ್ಲಿ ಸಣ್ಣ ಪುಟ್ಟ ನ್ಯೂನ್ಯತೆಗಳಿರುವುದರಿಂದ, ನಾವು ಏನು ರೈತರಿಗೆ ಅನುಕೂಲಗಳನ್ನು ಒದಗಿಕೊಡಬೇಕೆಂದು ವಿಚಾರ ಮಾಡುತ್ತಿದ್ದೇವೆ, ಆ ಅನುಕೂಲಗಳನ್ನು ಒದಗಿಸಲಿಕ್ಕೆ ಸಾಧ್ಯವಾಗಿಲ್ಲ ಆದುದರಿಂದ, ಅದನ್ನು ಹೇಗೆ ವ್ಯವಸ್ಥೆಗೊಳಿ ಬೇಕೆನ್ನುವುದನ್ನು ವಿಚಾರ ಮಾಡುತ್ತೇನೆ ಈ ವಿಚಾರ ನನಗೆ ಸಂಬಂಧಪಟ್ಟಿದ್ದಲ್ಲ, ಆದರೂ ನನ್ನ ಮಾನ್ಯಮಿತ್ರರಿಗೆ ಈ ಬಗ್ಗೆ ತಿಳಿಸುತ್ತೇನೆ. ಮಾನ್ಯ ಸೋಮಪ್ಪನವರು ಮಾತನಾಡುತ್ತಾ ಕೃಷಿ ನಿರ್ದೇಶನಾಲಯವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಬೇಕೆಂದೂ ಮತ್ತು ಅದರಲ್ಲಿ ಹರಿಜನರಿಗೆ ಹೆಚ್ಚು ಅವಕಾಶವಿಲ್ಲವೆಂದೂ ತಿಳಿಸಿದರು. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಹರಿಜನರಿಗೆ ೧೫ ಪರ್ಸೆಂಟ್ ಸೀಟ್ ರಿಜರ್ವೇಷನ್ ಇರುವುದನ್ನು ಮೇಂಟೇನ್ ಮಾಡಲಾಗುತ್ತದೆ ಮತ್ತು ಪ್ರತಿ ವರ್ಷ ೩-೪ ಜನ ಉತ್ತೀಣರಾಗುತ್ತಿದ್ದಾರೆ. ಮಾನ್ಯ ರ ಜಶೇಖರನ್ ಅವರು ಹೇಳಿದ ರೀತಿಯಲ್ಲಿ, ಅಡಿಷನಲ್ ಡೈರೆಕ್ಟರ್ ಎಂದು ಎರಡು ಹುದ್ದೆಗಳನ್ನು ಸೃಷ್ಟಿಸಲಾಗಿದೆ. ಇದರಿಂದ, ಹೆಚ್ಚು ಬಡ್ತಿ ಅವಕಾಶಗಳನ್ನು ಒದಗಿಸಲಾಗಿದೆ ಎಂದು ಮಾನ್ಯ ಸದಸ್ಯರು ತಿಳಿಯಬಹುದು. ಕೃಷಿ ವಿಶ್ವವಿದ್ಯಾನಿಲಯದಲ್ಲಿ ರೈತರ ಮಕ್ಕಳಿಗೆ ಹೆಚ್ಚಿನ ಪ್ರಾತಿನಿಧ್ಯ ದೊರೆಯಬೇಕೆಂದು ಹೇಳಿದರು. ನನಗೆ ಒದಗಿಸಿರುವ ಅಂಕಿ-ಅಂಶಗಳ ಪ್ರಕಾರ ಸುಮಾರು ೬೦ ಪರ್ಸೆಂಟ್ ರೈತರ ಮಕ್ಕಳಿಗೆ ಸೀಟು ಸಿಗುತ್ತಿದೆ. ಆದರೂ, ಮಾನ್ಯ ಸದಸ್ಯರು ಹೇಳಿರುವುದರ ಬಗ್ಗೆ ವಿಚಾರ ಮಾಡುತ್ತೇನೆ. ಕೃಷಿ ಶಾಲೆಗಳನ್ನು ತೆಗೆಯಬೇಕು ಮತ್ತು ಆ ಶಾಲೆಗಳಲ್ಲಿ ಉತ್ತೀರ್ಣರಾದವರಿಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸ್ಥಳಾವಕಾಶ ಕೊಡಬೇಕೆಂದು ಹೇಳಿದರು. ಕೆಲವು ಕಡೆ ಈಗಾಗಲೇ ಕೃಷಿ ಶಾಲೆಗಳಿವೆ. ಈ ಕೃಷಿ ಶಾಲೆಗಳನ್ನು ಹೆಚ್ಚು ಮಾಡುವುದಕ್ಕ ಪ್ರಯತ್ನ ಮಾಡಲಾಗುವುದು. ಮಾನ್ಯ ಧರ್ಮಸಿಂಗ್ ಅವರು ಬೀದರ್‌ನಲ್ಲಿ ವೆಟರ್ನರಿ ಕಾಲೇಜೊಂದನ್ನು ಪ್ರಾರಂಭ ಮಾಡಬೇಕೆಂದರು ಮತ್ತೆ ಪಾಟೀಲರು ಅವರ ಭಾಗಕ್ಕೊಂದು ವ್ಯವಸಾಯ ಕಾಲೇಜು ಬೇಕೆಂದು ಹೇಳಿದರು. ಕೃಷಿ ವಿಶ್ವವಿದ್ಯಾನಿಲಯ ಕುರಿತು ಹೆಚ್ಚು ಮಾಹಿತಿ ನಾನು ತಿಳಿದಿಲ್ಲ, ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಈಗ ಪ್ರಯತ್ನ ಮಾಡುತ್ತಿದ್ದೇನೆ. ಕೃಷಿ ವಿಶ್ವವಿದ್ಯಾನಿಲಯವೆಂದರೆ ಕ್ಯಾಂಪಸ್‌ನಲೇ ಕಾಲೇಜುಗಳಿರಬೇಕೆಂಬ ಅಭಿಪ್ರಾಯ ಬಂದಿದೆ. ಇದನ್ನು ಕಾನ್‌ಸ್ಟಿಟ್ಯೂಯಂಟ್ ಕಾಲೇಜನ್ನಾಗಿ ಮಾಡಿದರ ಬೇರೆ ಬೇರೆ ಭಾಗಗಳಲ್ಲೂ ವ್ಯವಸ್ಥೆಗೊಳಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಈ ಅಭಿಪ್ರಾಯ ನನ್ನ ತಲೆಗೆ ಹೊಳೆದಿದೆ. ನಾನೇನೂ ತಜ್ಞನಲ್ಲ. ತಜ್ಞರ ಜೊತೆಯಲ್ಲಿ ಈ ಕುರಿತು ವಿಚಾರಮಾಡಿ, ಸಾಧ್ಯವಾದರೆ ಇದನ್ನು ವ್ಯವಸ್ಥೆಗೊಳಿಸುವುದಕ್ಕೆ ಯೋಗ್ಯವೆಂದು ತಿಳಿದುಕೊಂಡಿದ್ದೇನೆ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ (ಕೃಷಿ)ದಲ್ಲಿ ಹೆಚ್ಚು ವಿಚಾರಗಳನ್ನು ಕಲಿಸುವುದಕ್ಕೆ ತೀರ್ಮಾನ ತೆಗೆದುಕೊಳ್ಳಲಾಗಿದೆ ಮತ್ತು ಅರಣ್ಯದ ಬಗ್ಗೆ ಕೂಡ ಒಂದು ಪದವಿಯನ್ನು ಇಡಬೇಕೆಂಬ ಅಭಿಪ್ರಾಯ ಇದೆ ಅಲ್ಲದೆ ರಾಯಚೂರಿನಲ್ಲಿ ಇಂಜಿನಿಯರಿಂಗ್ ಸ್ಕೂಲ್ ಮತ್ತು ಇಂಜಿನಿಯರಿಂಗ್ ಕಾಲೇಜು ಮಾಡಬೇಕೆಂಬ ಅಭಿಪ್ರಾಯವಿದೆ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಲಿತವರಿಗೇ ನೌಕರಿ ಇಲ್ಲ, ಇನ್ನು

ಪದವಿ ಮಾಡಿದರೆ ಅವರ ಪರಿಸ್ಥಿತಿ ಏನು ಮತ್ತು ಧರಣಿ ಹೂಡಿ ಜಂಡಾ ಹಿಡಿಯುತಕ್ಕದ್ದನ್ನು ಹೇಗೆ ನಿವಾರಣೆ ಮಾಡುವುದೆಂಬುದನ್ನೂ ನಾವು ಯೋಚನೆ ಮಾಡಬೇಕಾಗುತ್ತದೆ. ನಾವು ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ, ಕಾಲೇಜಿನ ಮುಂದುಗಡೆ ಒಂದು ಅರಳಿ ಕಟ್ಟೆ ಇತ್ತು. ಅಲ್ಲಿ ಹಿಂದೆ ಎಲ್ಲಾ ನೆರೆಯುತ್ತಿದ್ದರು. ಈಗ ಆ ಸ್ಥಳದಲ್ಲಿ ದೇವಸ್ಥಾನವಾಗಿದ್ದು ಅಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳೆಲ್ಲಾ ಇಂದು ಹೈಕೋರ್ಟ್ ಮುಂಭಾಗಕ್ಕೆ ಬಂದಿವೆ. ಅಲ್ಲಿ ಇದ್ದರೆ ಚೆನ್ನಾಗಿತ್ತು ಅಂತ ಅನ್ನಿಸುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ—ಅವರಿಗೊಂದು ಖಾಯಂ ಮಂಟಪ ಕಟ್ಟಿಸಿಕೊಡಿ.

ಶ್ರೀ ಕೆ. ಹೆಚ್. ರಂಗನಾಥ್—ಇದರ ಬಗ್ಗೆ ತಕ್ಷಣ ನಾನೇನೂ ಹೇಳುವುದಕ್ಕಾಗುವುದಿಲ್ಲ. ಇದರ ಸಾಧಕ ಬಾಧಕಗಳನ್ನು ನೋಡಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಶಿಕ್ಷಣ ಕೊಟ್ಟು, ಉದ್ಯೋಗ ಕೊಡದೆ ವಿದ್ಯಾವಂತರನ್ನು ಬೀದಿಯಲ್ಲಿ ಓಡಾಡಿಸುವ ಪರಿಸ್ಥಿತಿಗೆ ತರುವುದು ಸರಿಯಾದ ಕ್ರಮವಲ್ಲ. ನಾವು ಮತ ಕೇಳಲು ಹೋದಾಗ ಅವರಿಗೆ ಹೇಳಿಬಂದಿರುತ್ತೇವೆ. ಮತ ಕೇಳಲು ಬಂದಾಗ ಹೇಳಿದ್ದರಲ್ಲಾ ಸಾರ್, ಕೆಲಸ ಕೊಡಿಸಿಕೊಡಿ ಎಂದು ಬಂದು ಈಗ ಕೇಳ್ತಾರೆ. ನಾವು ಮತ ಕೇಳುವಾಗ, ಅವರು ಕೇಳಿದ್ದಕ್ಕೆಲ್ಲಾ ನಾವು ಆಗಲೀ, ಆಗಲೀ ಎಂದು ಹೇಳಿ ಬಂದಿರುತ್ತೇವೆ ಅಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ—ಇಲ್ಲ ಎಂದು ಹೇಳುವುಕ್ಕಾಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್—ಆದುದರಿಂದ, ಇದನ್ನೆಲ್ಲಾ ನಾವು ವಿಚಾರ ಮಾಡಬೇಕಾಗುತ್ತದೆ. ಕೃಷಿ ವಿಶ್ವವಿದ್ಯಾನಿಲಯ ಹೆಚ್ಚು ಅಭಿವೃದ್ಧಿಯಾಗುವುದಕ್ಕೆ ಮತ್ತು ಅಲ್ಲಿ ಶಿಸ್ತನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ತಜ್ಞರು ಇರುವುದಕ್ಕೆ ಅವಕಾಶ ಮಾಡಿಕೊಡುವುದು ನಮ್ಮ ಆದ್ಯಕರ್ತವ್ಯ. ಆಗ್ರೋ ಕಾರ್ಪೊರೇಷನ್ನಿನವರು ಫಾಸ್ಟ್ ಬೋರ್‌ವೆಲ್ ಮತ್ತು ಫಾಸ್ಟ್ ರಿಗ್‌ಗಳನ್ನು ಶ್ರೀಮಂತರಿಗೆ ಹಾಕುತ್ತಿದ್ದಾರೆಂದು ಮಾನ್ಯ ಸೋಮಪ್ಪನವರು ಹೇಳಿದರು. ಆದರೆ, ಪರಿಸ್ಥಿತಿ ಹಾಗಿಲ್ಲ. ನಾವೇ ಹಳ್ಳಿಗಾಡುಗಳಲ್ಲಿ ೫–೬ ಬೋರ್ ವೆಲ್‌ಗಳನ್ನು ತೆರೆದು ನೀರನ್ನು ಒದಗಿಸುವ ಕಾರ್ಯಕ್ರಮ ಕೈಗೊಳ್ಳುವುದರಿಂದ, ಅದು ಶ್ರೀಮಂತರಿಗೆ ಹೋಗತಕ್ಕ ಪರಿಸ್ಥಿತಿ ಬರಲಾರದೆಂದು ನನ್ನ ಭಾವನೆ. ಒಂದೊಂದ ಸಾರಿ ಅಧಿಕಾರಿಗಳೂ ಕೂಡ ಶ್ರೀಮಂತರ ಮನೆಗೇ ಹೋಗುತ್ತಾರೆ. ಏಕೆಂದರೆ, ಶ್ರೀಮಂತರ ಮನೆಯಲ್ಲಿ ಕುಡಿಯಲಿಕ್ಕೆ ಕಾಫಿ ಕೊಡುತ್ತಾರೆ ಬಡವರ ಮನೆಯಲ್ಲಿ ಕಾಫಿಯೇ ಇರುವುದಿಲ್ಲವಲ್ಲ. ಸರ್ಕಾರಿ ಅಧಿಕಾರಿ ಕೂಡ ಒಬ್ಬ ಮನುಷ್ಯ, ಅವನಿಗೆ ಊಟ ಬೇಕೇ ಬೇಕು. ಅವನು ಒಳ್ಳೆಯ ಊಟವನ್ನು ಬಯಸುವುದು ಸ್ವಾಭಾವಿಕ. ಬೀಜ, ಗೊಬ್ಬರ ಸಿಕ್ಕಬಹುದೆಂಬ ಆಸೆಯಿಂದಲೂ ಶ್ರೀಮಂತರು ಅವರನ್ನು ಕರೆಯುತ್ತಾರೆ. ಇವರು ಹೋಗುವುದೂ ಸ್ವಾಭಾವಿಕ. ಅಲ್ಲಿ ನಡೆಯುವುದು ಸ್ವಾಭಾವಿಕ ಆದರೆ ಅದನ್ನೇ ಒಂದು ಅಪರಾಧವೆಂದು ಭಾವಿಸುವುದು ಸಾಧುವಲ್ಲ ಎಂದು ನನ್ನ ಅಭಿಪ್ರಾಯ.

ಒಬ್ಬ ಸದಸ್ಯರು—ಅನ್ನದ ಪ್ರಭಾವ.

ಶ್ರೀ ಕೆ. ಹೆಚ್. ರಂಗನಾಥ್—ಒಂದೊಂದು ಸಾರಿ ಆಗುತ್ತದೆ. ಉಪ್ಪು ತಿಂದ ಮನೆಗೆ ಎರಡು ಬಗೆಯಬಾರದು ಎಂದು ಹೇಳುವುದಿಲ್ಲವೆ ? ಹಾಗೆ ಇದಕ್ಕೆ ನಾನು ಹೊರತಲ್ಲ. ನೀವು ಹೊರತಲ್ಲ ಇನ್ನು, ಮಾನ್ಯ ರಾಮಭಟ್ ಅವರು ವಿದ್ಯುಚ್ಛಕ್ತಿ ದರ ಕುರಿತು ಮಾತನಾಡಿದರು ಮತ್ತು ಮಾನ್ಯ ಡಿ. ಟಿ ರಾಮು ಅವರು ಬೆಳೆಗೆ ವಿಮೆ ಮಾಡಿಸುವ ಬಗ್ಗೆ ಪ್ರಸ್ತಾಪ ಮಾಡಿದರು. ಈ ಕುರಿತು ಸರ್ಕಾರದಲ್ಲಿ ಒಂದು ಅಭಿಪ್ರಾಯವಿದೆ. ಇದನ್ನು ಹೇಗೆ ಮಾಡಬೇಕು ಎಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಇದು ಸ್ವಲ್ಪ ಕಂಬರ್‌ಸಮ್ ಪ್ರೋಸೆಸ್ ಆಗಿದೆ ಕೆಲವು ಭಾಗದಲ್ಲಿ ಅವನ್ನು ನಾವು ಪ್ರಯತ್ನ ಮಾಡುತ್ತಿದ್ದೇವೆ. ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಂಡಿದೆ. ಇದರ ಬಗ್ಗೆ ಸ್ವಲ್ಪ ಡೀಟೈಲಾಗಿ ನೋಡತಕ್ಕದ್ದು ಒಳ್ಳೆಯದು. ಇದು ನಾವು ಯೋಚನೆ ಮಾಡುವಷ್ಟು ಸುಲಭವಾಗಿ ಇನ್‌ಷ್ಯೂರೆನ್ಸ್ ಡಿಪಾರ್ಟ್‌ಮೆಂಟ್‌ನವರು ಮಾಡುವುದಿಲ್ಲ. ದೊಡ್ಡ ದೊಡ್ಡವರು ಬಂದರೆ ಅವರಿಗೆ ಉದ್ಯೋಗವಿಲ್ಲದಿದ್ದರೂ ಎರಡು ಲಕ್ಷ ರೂಪಾಯಿಗಳ ಇನ್‌ಷ್ಯೂರೆನ್ಸ್ ಮಾಡಿಸುತ್ತಾರೆ ರೈತನಿಗೆ ಇನ್‌ಷ್ಯೂರೆನ್ಸ್ ಮಾಡಿಸಬೇಕಾದರೆ ಅವನು ಹೇಗೆ ಪ್ರೀಮಿಯಮ್ ಕೊಡುತ್ತಾನೆ ಎಂಬುದನ್ನು ವಿಚಾರ ಮಾಡುತ್ತಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಕ್ಯಾಷ್ ಕ್ರಾಪ್ಸ್ ವಾಣಿಜ್ಯ ಬೆಳೆಯನ್ನು ಬೆಳೆಯತಕ್ಕವರಿಗೆ ಕಾಫಿ ಬೋರ್ಡಿನಲ್ಲಿ ಯಾವ ತರಹ ವ್ಯವಸ್ಥೆ ಇದೆ ಅಂಥಾ ಅನುಕೂಲಗಳು ಆದರೆ ಬೆಳೆಯನ್ನು ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗಬಹುದು. ಈ ಮಟ್ಟದಲ್ಲಿ ಯೋಚನೆ ಮಾಡಬೇಕಾದರೆ ಇದನ್ನು ಆಲ್ ಇಂಡಿಯಾ ಲೆವೆಲ್‌ನಲ್ಲಿ ವಿಚಾರ ಮಾಡತಕ್ಕದ್ದಾಗಬೇಕು.

ನಾನು ಇನ್ನು ಯಾವುದೇ ವಿಚಾರವನ್ನು ಬಿಟ್ಟಿದ್ದರೆ ಮಾನ್ಯ ಸದಸ್ಯರು ನನಗೆ ಪತ್ರ ಬರೆದರೆ ಸಂಬಂಧ ಪಟ್ಟವರಿಗೆ ನಾನು ಉತ್ತರವನ್ನು ಬರೆಯುತ್ತೇನೆ. ಇವೊತ್ತಿನ ದಿವಸ ಈ ಒಂದು ಬೇಡಿಕೆಯ ಬಗ್ಗೆ ಮಾನ್ಯ ಸದಸ್ಯರು ಏನೇನೂ ಅಭಿಪ್ರಾಯಗಳನ್ನೂ ಸಲಹೆಗಳನ್ನೂ ಕೊಟ್ಟಿದ್ದಾರೆ, ಟೀಕೆಗಳನ್ನು ಏನು ಮಾಡಿದ್ದಾರೆ ಅವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಾನು ಅದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಮಾನ್ಯ ಸದಸ್ಯರು ಲೆಜಿಸ್ಲೇಚರ್ ಸೆಕ್ರೆಟೇರಿಯಟ್ ಸ್ವತಂತ್ರವಾಗಿರಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮೀಸಾಗರ್ ಅವರು ಪ್ರಸ್ತಾಪ ಮಾಡಿದ ರೀತಿಯಲ್ಲಿ ಅವರ ಭಾಷಣವನ್ನು ಮಾರ್ಕ್ ಮಾಡಬೇಕು ಎನ್ನುವ ಪರಿಸ್ಥಿತಿಗೆ ಹೋಯಿತು. ಇನ್ನು ಒಂದೆರಡು ತಿಂಗಳಲ್ಲಿ ಅದು ಕಾರ್ಯರೂಪಕ್ಕೆ ಬರುವಂತೆ ಮಾಡಿ ಅದನ್ನು ಮಾಡಿಕೊಡುತ್ತೇನೆ ಎನ್ನುವ ಮಾತನ್ನುನಾನು ಹೇಳುತ್ತೇನೆ.

ಇನ್ನು ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ನ ನೌಕರರಿಗೆ ಓವರ್ ಟೈಮ್ ಅಲೋಯನ್ಸ್ ಕೊಡುವ ಬಗ್ಗೆ ನಮ್ಮ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಈ ಸಭೆಯನ್ನು ಬೆಳಿಗ್ಗೆಯೇ ಕರೆದರೆ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಅಥವಾ ೧½ ಗಂಟೆಯವರೆಗೂ ಸಭೆ ಕುಳಿತುಕೊಂಡರೆ ಓವರ್ ಟೈಮ್ ಅಲೋಯನ್ಸ್ ಕೇಳುವ ಪ್ರಶ್ನೆಯೇ ಬರುವುದಿಲ್ಲ, ರಾತ್ರಿ ೭-೮ ಗಂಟೆಯವರೆಗೂ ಕುಳಿತುಕೊಂಡರೆ ಓವರ್ ಟೈಮ್ ಅಲೋಯನ್ಸ್ ಕೇಳುವ ಒಂದು ಪ್ರಶ್ನೆ ಬರುತ್ತದೆ. ಇದು ಏತಕ್ಕೆ ಬೇಕು?

SRI C.M. ARUMUGHAM—That is not the point, You cannot presume that we will agree to that. We may not agree. Just because they are demanding overtime allowance, to avoid it you cannot say that we will sit in the morning. When they are demanding overtime allowance, to avoid paying that you want to shift the working hours from 9 a.m. to 1 p.m., is it ? For instance the watch and word staff from the Police Department, and staff in the Legislators Home they are getting Rs 5 per day. What about the Reporters ? What about others ? What about the Librarian ? They work from 9 a.m. to 7 p.m. and you give them just 50 paise ? Is it fair on the part of the Government to pay just 50 paise ? Is it fair ? When the Minister replies he should clear this point. I know the hon. Minister is for upholding the cause of poor. This way of Bania attitude is not correct.

SRI K.H. RANGANATH—I am not a Bania nor I view things from Bania's point of view. Both of them are trade unionists ; they are so quick. Some of those things I never said. I only said, supposing we adopt that timing this question does not arise and supposing it does not happen, we are prepared to consider. He did not wait for the latter portion.

SRI MICHAEL B. FERNANDES—Even if they are called to work from 9 a.m. they should be paid.

SRI K.H. RANGANATH—I have understood the point and I sympathise with them. I know them all. I know how they work. I only said supposing we shift the timings, this question may not arise. Or even therewise supposing we fix up from 9 a.m. to 1 p.m. and sit

upto 2.30 p.m. then also we have to pay. After all we are nothing to spend a huge amount. I am definitely going to take into consideration this question.

SRI MICHAEL B. FERNANDES –Even if you sit from 9 am. to 1 p.m you have to pay.

ಶ್ರೀ ಎಸ್.ಎಸ್. ಅರಕೇರಿ—ಶ್ರೀ ಮಾನ್ ಎಸ್.ಎಂ. ಕೃಷ್ಣವರು ಪಾರ್ಲಿಮೆಂಟರಿ ಶಾಖೆಯ ಮಂತ್ರಿಗಳಾಗಿದ್ದಾಗ ಓವರ್‌ಟೈಮ್ ಅಲೋಯನ್ಸ್ ಕೊಡುವ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ.

ಶ್ರೀ ಕೆ.ಎಚ್ ರಂಗನಾಥ್—ಆಶ್ವಾಸನೆ ಕೊಟ್ಟಿದ್ದರು ಎಂದರೆ ಆಶ್ವಾಸನೆ ಕೊಟ್ಟರೆ ಪ್ರಯೋಜನ ವಿಲ್ಲ. ಅದು ಕಾರ್ಯಗತವಾಗಬೇಕು. ಅದು ಕಾರ್ಯಗತವಾಗಬೇಕಾದರೆ....

SRI C.M. ARMUGHAM—In the Lok Sabha the Presiding Officer accepts the proposals from the Secretariat. In Tamilnadu proposal goes to the Finance Department and the Presiding officers have the power of sanction. Here they have to take it to the Law Department and the Law Department will sanction it.

SRI K.H. RANGANATH—I said that independence to the Legislature Secretariat will be given within a very short time. I said within two months time we will do it.

SRI C.M. ARUMUGHAM—Before the Speaker goes abroad it should be done.

ಶ್ರೀ ಕೆ.ಎಚ್. ರಂಗನಾಥ್—ಸ್ವಾಮಿ ಇದನ್ನು ವಿಚಾರ ಮಾಡುತ್ತಿದ್ದೇವೆ. ಇದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದೇನೆ. ಇದನ್ನು ಕಾರ್ಯಗತ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಸ್ವಾಮಿ ಇಷ್ಟನ್ನು ಹೇಳುತ್ತಾ ಎಲೆಕ್ಷನ್ನಿಗೆ ಸಂಬಂಧಪಟ್ಟ ಹಾಗೆ ಶ್ರೀಮಾನ್ ಶಾಮಣ್ಣನವರು ಕೆಲವು ಕಟ್‌ಮೋಷನ್‌ಗಳನ್ನು ಕಳುಹಿಸಿದ್ದಾರೆ ಮಾನ್ಯ ಸೈನಕ್ ಅವರೂ ಕೂಡ ಎಲೆಕ್ಷನ್ ಬಗ್ಗೆ ಕೆಲವು ವಿಷಯಗಳನ್ನು ಹೇಳಿದ್ದಾರೆ. ಎನ್ಯುಮರೇಟರ್ಸ್ ಅನ್ನು ಗ್ರಾಜುಯೇಟ್ಸ್ ನೇಮಕ ಮಾಡಬೇಕು ಎಂದು ಹೇಳಿದ್ದಾರೆ. ಉಪಾಧ್ಯಾಯರನ್ನು ಎನ್ನುಮರೇಟರ್ ಆಗಿ ನೇಮಕ ಮಾಡಿಕೊಳ್ಳುವುದರಿಂದ ಶಾಲೆಗೆ ರಜ ಕೊಡಬೇಕಾಗುತ್ತದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ ಎನ್ನುವ ಮಾತನು ಹೇಳಿದ್ದಾರೆ. ೧೮ ವರ್ಷ ವಯಸ್ಸಾದವರು ಓಟು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕು ಎಂದು ಹೇಳಿದ್ದಾರೆ. ಇದೆಲ್ಲಾ ನಮ್ಮ ಕೈಯ್ಯಲ್ಲಿ ಇರುವುದಿಲ್ಲ. ಇದು ಪಾರ್ಲಿಮೆಂಟ್‌ಗೆ ಸಂಬಂಧಪಟ್ಟ ವಿಚಾರ. ಶ್ರೀಮಾನ್ ಶಾಮಣ್ಣನವರೂ ಸಹ ಕೆಲವು ಕಟ್‌ಮೋಷನ್ ಕಳುಹಿಸಿದ್ದಾರೆ. ರಿವಿಜನ್ ಆಫ್ ವೋಟರ್ಸ್ ಲಿಸ್ಟ್ ಮಾಡಬೇಕೆಂದು ಹೇಳಿದ್ದಾರೆ. ಕಾನೂನು ಪ್ರಕಾರ ಎಲೆಕ್ಟ್ರೋರಲ್ ರೋಲ್ ರಿಜಿಸ್ಟ್ರೇಷನ್ ಅಥಾರಿಟಿ ಏನಿದೆ ಅದು ಹೊಸದಾಗಿ ಸೇರಿಸತಕ್ಕುದ್ದು. ತೆಗೆಯತಕ್ಕದ್ದು ಬಿಡತಕ್ಕದ್ದು ಏನಿದೆ ಅದನ್ನು ಕಾನೂನು ಪ್ರಕಾರ ಮಾಡಿದ್ದಾರೆ. ಇದರಲ್ಲಿ ಕ್ವಾಲಿಫೈಯಿಂಗ್ ಡೇಟ್ ಇರುತ್ತದೆ. ಅದರೊಳಗೆ ಅವರು ಏನು ಮಾಡಬೇಕೋ ಅದನ್ನು ಕಾನೂನು ಪ್ರಕಾರ ಮಾಡಿದ್ದಾರೆ. ಇದರಲ್ಲಿ ಏನೂ ತಪ್ಪು ನಡೆದಿಲ್ಲFailure of Government in preparing voters list properlr in general elections. Failure of Government in checking large numbey of bogus votes during elections. ಇಂದು ಕಟ್‌ಮೋಷನ್ಸ್ ಕಳುಹಿಸಿದ್ದಾರೆ. ವೋಟರ್ ಲಿಸ್ಟನ್ನು ಎಲೆಕ್ಷನ್ ಕಮಿಷನ್‌ನವರು ಮಾಡಿದ್ದಾರೆ. ಅವರು ಅದನ್ನೆಲ್ಲಾ ಸರಿಯಾಗಿ ಮಾಡಿದ್ದಾರೆ. ಒಂದು ವೇಳೆ ಆ ಬಗ್ಗೆ ಏನಾದರೂ ಕಂಪ್ಲೆಂಟ್ ಬಂದರೆ ಅದನ್ನು ನಾವು ನೋಡುತ್ತೇವೆ. ಆಮೇಲೆ ಭೋಗಸ್ ವೋಟ್ಸ್ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಅಂಥಾ ಕಂಪ್ಲೆಂಟ್ ಯಾವುದೂ ಬಂದಿಲ್ಲ.

ಶ್ರೀ ಸಿ.ಎಂ. ಇಬ್ರಾಹಿಂ—ಇದರ ಬಗ್ಗೆ ಕೋರ್ಟಿನಲ್ಲಿ ರಿಟ್‌ಗಳು ಫೈಲ್ ಆಗಿವೆ.

ಶ್ರೀ ಕೆ.ಎಚ್. ರಂಗನಾಥ್—ಇದರ ಬಗ್ಗೆ ಕಂಪ್ಲೈಂಟ್ ಬಂದಿಲ್ಲ ಎಂದು ಹೇಳಿದ್ದೇನೆ. ರಿಟರ್ನಿಂಗ್ ಆಫೀಸರು ಎಲ್ಲಾ ಪಕ್ಷದವರನ್ನೂ ಮೀಟಿಂಗಿಗೆ ಕರೆಸಿ ಇಂಥಾದ್ದನ್ನು ಮಾಡಕೂಡದು ಎಂದು ಹೇಳುತ್ತಾರೆ ಈಗ ಎಲ್ಲರೂ ಒಪ್ಪಿಕೊಂಡು ಹೋಗುತ್ತಾರೆ. ಆಮೇಲೆ ಏನಾದರೂ ಅವರು ಮಾಡಿದರೆ ಅದಕ್ಕೆ ಸರ್ಕಾರ ಜವಾಬ್ದಾರಿಯಾಗುತ್ತದೆಯೇ ? Failur of Government in preventing free use of Toddy and wine and money durii g General Elections. ಎಲೆಕ್ಷನ್ ದಿವಸ ಟಾಡಿ, ವೈನ್ ಯಾವುದೂ ಮಾರಾಟ ಮಾಡಕೂಡದು ಎಂದು ಇದೆ. ಆದರೆ ಕೆಲವರು ಹಿಂದಿನ ದಿವಸ ಕೊಂಡು ಕೊಂಡು ಬಂದು ಇಟ್ಟಿರಬಹುದು. ರಿಟರ್ನಿಂಗ್ ಆಫೀಸರು ಎಲೆಕ್ಷನ್ನಿನ ಹಿಂದಿನ ದಿವಸ ಎಲ್ಲಾ ಪಕ್ಷದವರನ್ನೂ ಕರೆಸಿ ಹಾಗೆ ಇರಬೇಕು ಹೀಗಿರಬೇಕು ಎಂದು ಹೇಳಿರುತ್ತಾರೆ. ನಾವು ನಿಯಮದ ಪ್ರಕಾರ ನಡೆಯುತ್ತೇವೆ ಎಂದು ಹೇಳಿರುತ್ತಾರೆ. ಯಾರೋ ಅಂಗಡಿಯನ್ನು ಇಟ್ಟುಕೊಂಡು ಟಾಡಿ ಯನ್ನು ಮಾರಿದರೆ ಅದು ಸರ್ಕಾರದ ಗಮನಕ್ಕೆ ಹೇಗೆ ಬರುತ್ತದೆ ? ಈಗ ಕೆಲವರು ಮನೆಗಳಿಗೆ ಹೋಗಿ ಕಣವನ್ನು ಹಂಚಿರುತ್ತಾರೆ, ಕೆಲವರು ಜೋಳವನ್ನು ಹಂಚಿರುತ್ತಾರೆ. ಕೆಲವರು ಅಕ್ಕಿಯನ್ನು ಹಂಚಿರು ತ್ತಾರೆ. ಇದನ್ನೆಲ್ಲಾ ಅಧಿಕಾರಿಗಳು ಹೇಗೆ ಮನೆ ಮನೆಗೆ ಹೋಗಿ ಕಂಡುಹಿಡಿಯುತ್ತಾರೆ ? ಇದುವರೆಗೆ ಯಾವ ದೂರುಗಳು ಬರದೇ ಇರುವುದರಿಂದ ಎಲ್ಲವೂ ಕಾನೂನು ಪ್ರಕಾರ ಸಮರ್ಪಕವಾಗಿ ನಡೆದಿದೆ ಎಂದು ಭಾವಿಸಬಹುದಾಗಿದೆ.

ಇನ್ನು ವಿರೋಧ ಪಕ್ಷದ ನಾಯಕರಾದ ಮಾನ್ಯ ಬೊಮ್ಮಾಯಿ ಅವರು ಭಾಷಣ ಮಾಡುವುದಕ್ಕೆ ಹೋಗದೆ ಕೇವಲ ಒಂದೆರಡು ವಿಚಾರಗಳನ್ನು ಮಾತ್ರ ಹೇಳಿದ್ದಾರೆ. ಅದು ಏನೆಂದರೆ ಈ ಸದನದಿಂದ ರಚಿತವಾದ ಸಮಿತಿಗಳು ತಮ್ಮ ತಮ್ಮ ವರದಿಗಳನ್ನು ಏನು ಕೊಟ್ಟಿವೆ ಅದರ ಮೇಲೆ ತಾವು ಏನು ಕ್ರಮ ತಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಇದು ಅಯಾಯ ಡಿಮ್ಯಾಂಡ್ಸ್ ಬಂದಾಗ ಮಾನ್ಯ ಸದಸ್ಯರು ಅದರ ಬಗ್ಗೆ ಕಟ್‌ಮೋಷನ್ಸ್ ಕಳುಹಿಸಿದರೆ ಅದನ್ನು ಚರ್ಚೆ ಮಾಡುವುದಕ್ಕೆ ಬಹಳ ಅನುಕೂಲವಾಗು ತ್ತದೆ. ಇಲ್ಲದೇ ಹೋದರೆ ಬರೀ ರಿಪೋರ್ಟ್ಸ್‌ನ್ನು ಚರ್ಚೆ ಮಾಡುವುದಕ್ಕೇ ಬಹಳ ಕಾಲ ಬೇಕಾಗುತ್ತದೆ. The rules are very clear that if they do not agree with the policy of the Government, or if they want to raise some issues concerning either Au itor reports or reports of other committees, they will have to mention that in the cut-motions so that we would be in a position to supply that information to the House and follow-up action that the Government has taken. ನಾನು ಪಾರ್ಲಿಮೆಂಟರಿ ಸಚಿವನಾಗಿರುವುದರಿಂದ ಮಾನ್ಯ ಬೊಮ್ಮಾಯಿ ಅವರು ಈ ಒಂದು ಪ್ರಶ್ನೆಯನ್ನು ನೇರವಾಗಿ ನನಗೆ ಕೇಳಿದ್ದಾರೆ. ಇದರ ಬಗ್ಗೆ ನಾನು ಮಾನ್ಯ ಬೊಮ್ಮಾಯಿ ಅವರ ಜೊತೆಯಲ್ಲಿಯೇ ಕುಳಿತುಕೊಂಡು ಮಾತನಾಡುತ್ತೇನೆ. ಬೇರೆ ರಾಜ್ಯ ಗಳಲ್ಲಿ ಇರುವಂತೆ ನಮ್ಮ ರಾಜ್ಯದಲ್ಲೂ ಕೂಡ ಕ್ಯಾಬಿನೆಟ್‌ಗೆ ಸೇರಿದಂತೆ ಒಂದು ಸಬ್ ಕಮಿಟಿ ಇರ ಬೇಕೆಂದು ಹೇಳಿದ್ದಾರೆ. It is a suggestion for action, and I shall convey the information to my colleagues.

ಶ್ರೀ ಎಂ.ವಿ. ರಾಜಶೇಖರನ್—ಮಾನ್ಯ ಮಂತ್ರಿಗಳು ವಕೀಲರಾಗಿರುವುದರಿಂದ ಸದಸ್ಯರು ಕೇಳಿದ ಎಲ್ಲ ಪ್ರಶ್ನೆಗಳಿಗೂ ಬಹಳ ಚೆನ್ನಾಗಿ ಉತ್ತರಗಳನ್ನು ಹೇಳಿದ್ದಾರೆ. I know he is a very good lawyer. But unfortunately he has tried to defend a very bad case and that is where he has completely failed. ಇನ್ನೊಂದು ಮುಖ್ಯವಾದ ವಿಚಾರವನ್ನೇ ಹೇಳಲಿಲ್ಲ. ಅದು ಏನೆಂದರೆ, ರೈತ ಬೆಳೆದ ಧಾನ್ಯಗಳಿಗೆ ಧಾರಣೆಯನ್ನು ನಿಗಧಿ ಮಾಡುವ ವಿಚಾರ ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಹೇಳಬೇಕು. ನಾನು ಏತಕ್ಕೆ ಈ ಮಾತನ್ನು ಕೇಳು ತ್ತಿದ್ದೇನೆಂದರೆ, ಇವತ್ತು ಭತ್ತ ಮತ್ತು ಗೋಧಿ ಇವೆರಡೂ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುತ್ತವೆ. ಇದನ್ನು ನಾವು ಮಾಡುವುದಕ್ಕಾಗುವುದಿಲ್ಲ. ಆದರೆ ನಮ್ಮ ಸರ್ಕಾರದವರೇ ಮಾಡಬೇಕಾದ್ದು ಕೆಲವು ಇವೆ. ಇವತ್ತು ರೈತರು ಭತ್ತ ಮತ್ತು ಬೇಳೆಕಾಳುಗಳನ್ನು ಹೆಚ್ಚಿಗೆ ಬೆಳೆದಿರುವುದಕ್ಕೆ ಸರ್ಕಾರದವರೂ ಮತ್ತು ವ್ಯವಸಾಯ ಇಲಾಖೆಯವರೂ ಬಹಳ ಚೆನ್ನಾಗಿ ಅವರನ್ನು ಶ್ಲಾಘಿಸಿದ್ದಾರೆ. ಆದರೆ ಅದಕ್ಕೆ ತಕ್ಕ ಬೆಲೆಯನು ಮಾತ್ರ ಕೊಟ್ಟಿಲ್ಲ. ಸರ್ಕಾರದವರು ರೈತರಿಗೆ ಪ್ರೈಸ್ ಸಪೋರ್ಟ್ ಕೊಡಬೇಕಾದರೆ ಅದನ್ನು ರೈತರು ಬಿತ್ತನೆ ಮಾಡುವ ಕಾಲಕ್ಕೆ ಮುಂಚಿತವಾಗಿಯೇ ತಿಳಿಸಬೇಕು.

ಇನ್ನು ಎರಡನೆಯದಾಗಿ ರಾಗಿ ಮತ್ತು ಜೋಳದ ಬಗ್ಗೆ ಹೇಳುವುದಾದರೆ ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿದ್ದಲ್ಲ. ಇವೆರಡರ ಧಾರಣೆಯನ್ನೂ ನಮ್ಮ ಸರ್ಕಾರವೇ ನಿಗಧಿ ಮಾಡಬೇಕು. ಇವತ್ತು ಕೇಂದ್ರ ಸರ್ಕಾರದವರು ಪ್ರೈಸ್ ಸಪೋರ್ಟ್ ವಿಚಾರವನ್ನು ರೈತರಿಗೆ ಯಾವಾಗ ತಿಳಿಸುತ್ತಾರೆಂದರೆ, ಆ ರೈತರು ತಾವು ಬೆಳೆದ ಎಲ್ಲಾ ಪದಾರ್ಥಗಳನ್ನೂ ಮಾರಾಟ ಮಾಡಿ ಬರಿಗೈ ಮಾಡಿಕೊಂಡಾಗ. ಇದರ ಪ್ರಯೋಜನ ವ್ಯಾಪಾರಗಾರರಿಗೆ ಸಿಕ್ಕುತ್ತದೆಯೇ ಹೊರತು ರೈತರಿಗೆ ಸಿಕ್ಕುವುದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಬೇಳೆಕಾಳು ರಾಗಿ, ಜೋಳ ಇವುಗಳಿಗೆ ಪ್ರೈಸ್ ಸಪೋರ್ಟನ್ನು ಬಿತ್ತನೆ ಕಾಲಕ್ಕೆ ಮುಂಚಿತವಾಗಿ ರೈತರಿಗೆ ತಿಳಿಸುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್—ಈ ವ್ಯವಸಾಯ ವಿಚಾರ ಸ್ಟೇಟ್‌ಲಿಸ್ಟ್‌ನಲ್ಲಿ ಬರುವುದರಿಂದ ಇದನ್ನು ನಾವೇ ವಿಚಾರ ಮಾಡಬೇಕಾಗುತ್ತದೆ. ಆದರೆ ಈ ಪ್ರೈಸ್ ಸಪೋರ್ಟ್ ಮಾಡುವ ಕೆಲಸ ಬಹಳ ಕಷ್ಟವಾದ ಕೆಲಸ ಏಕೆಂದರೆ ಇದು ದೇಶದ ಹಣಕಾಸಿನ ಪರಿಸ್ಥಿತಿಯನ್ನು ಆವಲಂಬಿಸಿರುತ್ತದೆ. ಆದರೂ ಪ್ರೈಸ್ ಸಪೋರ್ಟ್ ವಿಚಾರವನ್ನು ಬಿತ್ತನೆ ಕಾಲಕ್ಕೆ ಮುಂಚಿತವಾಗಿ ರೈತರಿಗೆ ತಿಳಿಸುವುದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಇನ್ನು ರಾಗಿ ಮತ್ತು ಜೋಳದ ಬೆಲೆಯನ್ನು ಕಳೆದ ಸಾರಿ ನಿಗದಿ ಮಾಡಿದ್ದೆವು ಇದು ನನಗೆ ಗೊತ್ತಿರುವ ವಿಚಾರ. ಬಹುಶ: ಇದು ಸರಿಯಲ್ಲ ಎಂದು ಮಾನ್ಯ ಸದಸ್ಯರು ಹೇಳುವುದಾದರೆ ಅದನ್ನು ನಾನು ತಿದ್ದಿಕೊಳ್ಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಕಳೆದ ಸಾರಿ ಫುಡ್ ಕಾರ್ಪೊರೇಷನ್‌ನಲ್ಲಿ ಹೈಬ್ರಿಡ್ ಜೋಳವನ್ನು ಶೇಖರಣೆ ಮಾಡಿದ್ದೆವು. ಆದರೆ ಅದರಲ್ಲಿ ನಷ್ಟವನ್ನು ಅನುಭವಿಸಬೇಕಾದ ಪರಿಸ್ಥಿತಿ ಬಂತು. ಆದ್ದರಿಂದ ರಾಜ್ಯದ ಆರ್ಥಿಕ ದೃಷ್ಟಿಯಿಂದ ಹೇಳುವುದಾದರೆ ತಕ್ಷಣವೇ ಒಂದು ಅಭಿಪ್ರಾಯಕ್ಕೆ ಬಂದು ಈಗಲೇ ಈ ಸದನಕ್ಕೆ ಒಂದು ಆಶ್ವಾಸನೆಯನ್ನು ಕೊಡುವ ಪರಿಸ್ಥಿತಿಯಲ್ಲಿ ನಾನು ಇಲ್ಲ. ನಾವು ಸಪೋರ್ಟ್ ಪ್ರೈಸ್‌ನ್ನು ಕೊಡಬೇಕಾದ್ದು ಅವಶ್ಯಕವಿದೆ. ಆದರೆ ನಮ್ಮ ಸಹಾಯಕ್ಕೆ ಕೇಂದ್ರ ಸರ್ಕಾರದವರೂ ಬರಬೇಕು.

ಬಹಳ ಮಟ್ಟಿಗೆ ಇದೂ ಕೂಡ ವಾದಗ್ರಸ್ಥವಾದ ವಿಚಾರ. ವಿದ್ಯಾಭ್ಯಾಸವನ್ನು ಕನ್‌ಕರೆಂಟ್ ಲಿಸ್ಟ್‌ನಲ್ಲಿ ಸೇರಿಸಿದ್ದಾರೆ. ವ್ಯವಸಾಯವನ್ನೂ ಕನ್‌ಕರೆಂಟ್ ಲಿಸ್ಟ್‌ನಲ್ಲಿ ಸೇರಿಸಿ, ರಾಜ್ಯದ ಮಟ್ಟಕ್ಕೆ ಇದನ್ನು ಕೈಬಿಟ್ಟಿದ್ದಾರೆ. ಇದು ಕೇಂದ್ರದಲ್ಲಿದ್ದರೆ ಅವರನ್ನು ಕೇಳುವಂಥ ಹಕ್ಕು ನಮಗೂ ಬರುತ್ತಿತ್ತು. ಆದರೆ ರಾಜ್ಯಕ್ಕೆ ಇದನ್ನು ಬಿಟ್ಟಿರುವಾಗ, ರಾಜ್ಯದ ಹಣಕಾಸಿನ ಪರಿಸ್ಥಿತಿ ಅಷ್ಟೊಂದು ದೃಢವಾಗಿ ಇಲ್ಲದಿರುವುದರಿಂದ ದಿಟ್ಟವಾದ ನಿಲುವನ್ನು ತೆಗೆದುಕೊಂಡು, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರಿಯಾದಂಥ ಪರಿಸ್ಥಿತಿಯಲ್ಲಿ ನಾವು ಇಲ್ಲ, ಆದರೂ ಇದನ್ನು ನಾವು ಯೋಚನೆ ಮಾಡತಕ್ಕದ್ದು ಸರಿ ಎಂದು ಹೇಳತಕ್ಕ ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. I am sorry, I don't touch that aspect though every Member has raised that point ಆದ್ದರಿಂದ ಇದನ್ನು ನಾನು ವಿಚಾರ ಮಾಡುತ್ತೇನೆ.

1.00 ಪಿ.ಎಂ.

ಶ್ರೀ ಎಂ. ವಿ ರಾಜಶೇಖರನ್.—ತಾವು ಸಪೋರ್ಟಿಂಗ್ ಪ್ರೈಸ್ ಕೊಡುವಾಗ ಏನಾಗುತ್ತದೆ. ಎಂದರೆ, ಓಪನ್ ಮಾರ್ಕೆಟ್ಟಿನಲ್ಲಿ ಪ್ರಿವೇಲಿಂಗ್ ಪ್ರೈಸ್ ಏನು ಇದೆ ಅದಕ್ಕಿಂತ ಕಡಿಮೆ ಸಪೋರ್ಟ್ ಪ್ರೈಸ್ ಫಿಕ್ಸ್ ಮಾಡುತ್ತೀರಿ, ಭತ್ತಕ್ಕೆ ಓಪನ್ ಮಾರ್ಕೆಟ್ಟಿನಲ್ಲಿ ೧೦೫ರಿಂದ ೧೧೦ ರೂಪಾಯಿಗಳು ಇದೆ. ತಾವು ಸಪೋರ್ಟಿಂಗ್ ಪ್ರೈಸ್ ಕೊಟ್ಟಿರುವುದು ೮೫ ರೂಪಾಯಿಗಳು ಮಾತ್ರ. ಇದು ಸರಿಯೇ? You have to take into consideration the cost of production and the margin of profit which the farmers should get. These are the two things which you have to taken into consideration and fix the price.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಮಾನ್ಯ ರಾಜಶೇಖರನ್ನು ಹೇಳುವುದನ್ನು ನಾನು ಒಪ್ಪುತ್ತೇನೆ. ಅದು ಸಪೋರ್ಟಿಂಗ್ ಪ್ರೈಸ್ ಅಲ್ಲ, ಲೆವಿ ಪ್ರೈಸ್. ೧೦೫–೧೧೦ ರೂಪಾಯಿಗಳು ಓಪನ್ ಮಾರ್ಕೆಟ್ಟಿನಲ್ಲಿರುವಾಗ ಭತ್ತಕ್ಕೆ ಕೇಂದ್ರದವರು ೭೭ ರೂಪಾಯಿಗಳನ್ನು ಕೊಟ್ಟಿರುವುದು. ಇದಕ್ಕೆ ಸ್ವಲ್ಪ ಸೇರಿಸಿ ತಾವು ೮೨ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದೇ ರೀತಿಯಲ್ಲಿ, ೧೯೭೫–೭೬ನೇ ಇಸವಿಯಲ್ಲಿ ಸುಮಾರು ೨ ಲಕ್ಷ ಟನ್ ಭತ್ತವನ್ನು ತಾವು ಪರ್ಚೇಸ್ ಮಾಡಿದ್ದೀರಿ. ಆದರೆ ಜಾಸ್ತಿ ಬೆಳೆ ಬಂದಾಗ ಕೇವಲ ೩೯ ಸಾವಿರ ಟನ್ ಪರ್ಚೇಸ್ ಮಾಡಿದ್ದೀರಿ. ಆದ್ದರಿಂದ ೧೯೭೭ರಲ್ಲಿ ಭತ್ತದ ಬೆಲೆ ಕುಸಿದು

ಬಿದ್ದಿತು. ರೈತ ಜಾಸ್ತಿ ಬೆಳೆದಾಗ ಭತ್ತವನ್ನು ಕೊಂಡುಕೊಳ್ಳದಿದ್ದರೆ ಉಪಯೋಗವಿಲ್ಲ. ಸಮಯದಲ್ಲಿ ಸರಿಯಾಗಿ ಕೊಂಡುಕೊಳ್ಳದಿದ್ದರೆ ಏನು ಪ್ರಯೋಜನ? ತಾವು ಇದನ್ನು ಅಧಿಕಾರಿಗಳಿಗೆ ತಿಳಿಸಿ, ಭತ್ತವನ್ನು ಕೊಂಡುಕೊಳ್ಳುವ ಹಾಗೆ ಮಾಡಬೇಕು.

ಶ್ರೀ ಪ್ರಭಾಕರ್ ತೇಲ್ಕರ್.—ಈಗಾಗಲೇ ಮಾನ್ಯ ಮಂತ್ರಿಗಳು ಯಾವ ಪ್ರಕಾರ ಲೆವಿ ರೇಟನ್ನು ಹೆಚ್ಚು ಮಾಡಿದ್ದಾರೋ ಅದೇ ರೀತಿಯಲ್ಲಿ, ನಮ್ಮ ಗುಲ್ಬರ್ಗದಲ್ಲಿ ಜೋಳವನ್ನು ಹೆಚ್ಚಾಗಿ ಬೆಳೆಯುತ್ತೇವೆ, ಜೋಳದ ಬೆಲೆ ಬಹಳವಾಗಿ ಇಳಿದು ಹೋಗಿದೆ, ಅದರ ಲೆವಿ ಪ್ರೈಸ್ ೭೦ ರೂಪಾಯಿಗಳಿಗೆ ಇಳಿದಿದೆ, ತಾವು ಯಾವಾಗಲೂ ಪ್ಯಾಡಿಗೆ ಮಾತ್ರ ಲೆವಿ ಪ್ರೈಸ್ ಹೆಚ್ಚು ಮಾಡುತ್ತಾ ಇರುತ್ತಿದ್ದೀರಿ. ಜೋಳಕ್ಕೂ ಲೆವಿ ಪ್ರೈಸ್ ಹೆಚ್ಚು ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ನಾವೂ ಸಹ ಜೋಳವನ್ನು ಬೆಳೆಯುತ್ತೇವೆ. ರಾಗಿಯನ್ನು ಬೆಳೆಯುತ್ತೇವೆ, ಆದ್ದರಿಂದ ಮಾನ್ಯ ಸದಸ್ಯರು, ನಮ್ಮ ಕಡೆ, ನಿಮ್ಮ ಕಡೆ ಎನ್ನುವ ಮಾತನ್ನು ಬಳಸುವುದು ಬೇಡ. ಕರ್ನಾಟಕ ಆದಮೇಲೆ ಅಂಥಾದ್ದು ಏನೂ ಇಲ್ಲ. ಆದರೆ ತಕ್ಷಣ ನಾನು ಇದರ ಬಗ್ಗೆ ಹೇಳಲು ತಯಾರು ಇಲ್ಲ. ಇದನ್ನು ನನ್ನ ಸ್ನೇಹಿತರಾದ ಆಹಾರ ಮಂತ್ರಿಗಳೊಂದಿಗೆ ಸಮಾಲೋಚಿಸಬೇಕಾಗುತ್ತದೆ, ನನಗೆ ಇದರ ಪರಿಶ್ರಮ ಇಲ್ಲ. ಇದರ ಜೊತೆಗೆ ಈ ಸಭೆಗೆ ಗೊತ್ತಿರುವ ಹಾಗೆ ನಾವು ಯಾವ ಪ್ರಮಾಣದಲ್ಲಿ ಇದರಲ್ಲಿ ಹಣವನ್ನು ಹಾಕಬೇಕಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಸಧ್ಯದಲ್ಲಿ ಯೋಚನೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಬೇಕಾಗುತ್ತದೆ. ಮಾನ್ಯ ರಾಜಶೇಖರನ್ ಅವರು ಸೋಯಿಂಗ್ ಸೀಸನ್ ನೋಡಿಕೊಂಡು ಸಪೋರ್ಟಿಂಗ್ ಪ್ರೈಸ್ ಕೊಡಬೇಕು ಎಂದು ಹೇಳಿದ್ದಾರೆ. ನಾನು ಈ ದಿಶೆಯಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ, ಇದು ಒಂದಕ್ಕೊಂದು ಸಂಬಂಧವನ್ನು ಹೊಂದಿದೆ. ನಾವು ಇದನ್ನು ಚೆನ್ನಾಗಿ ಅಭ್ಯಾಸ ಮಾಡಬೇಕಾಗಿದೆ, ಈ ಎಲ್ಲಾ ವಿಷಯಗಳನ್ನು ನಾನು ಗಮನಕ್ಕೆ ತೆಗೆದುಕೊಂಡಿರುತ್ತೇನೆ. ಮಂತ್ರಿಮಂಡಲದ ಇತರೆ ಮಿತ್ರರೊಂದಿಗೆ ನಾನು ಪ್ರಸ್ತಾಪ ಮಾಡಿ ಇದನ್ನು ವಿಚಾರ ಮಾಡುತ್ತೇನೆ,

ಶ್ರೀ ಭೀಮಣ್ಣ ಖಂಡ್ರೆ.—ರೈತರು ತರತಕ್ಕ ಮಾಲಿನ ಮೇಲೆ, ಇಡೀ ಭಾರತ ದೇಶದಲ್ಲಿ ಇಲ್ಲದಂಥ ತೆರಿಗೆಯ ಹೊರೆಯನ್ನು ನಮ್ಮ ರೈತರ ಮೇಲೆ ನಿಮ್ಮ ಸರ್ಕಾರದವರು ಹಾಕಿದ್ದಾರೆ, ಇದನ್ನು ಸರಿಪಡಿಸುತ್ತೀರಾ? ಬೀದರ್ ಜಿಲ್ಲೆಯಲ್ಲಿ ಸುಮಾರು ೮ ಕೋಟಿ ರೂಪಾಯಿಗಳನ್ನು ಬೀಜಕ್ಕೋಸ್ಕರ ಕೊಟ್ಟಿದ್ದಾರೆ. ಇವತ್ತು ರೈತ ಬೀಜ ಬೆಳೆದರೂ ಅದು ಮಾರ್ಕೆಟ್ಟಿನಲ್ಲಿ ಉಳಿದು ಈ ಹಣಕ್ಕೆ ಫೀನಲ್ ಇಂಟರೆಸ್ಟ್ ಹಾಕುತ್ತಿದ್ದಾರೆ, ಇದೇ ಪ್ರಕಾರ ಶಿವಮೊಗ್ಗದಲ್ಲಿ ಆದಾಗ ಮಾನ್ಯ ನಿಜಲಿಂಗಪ್ಪನವರು ಹಿಂದೆ ವಸೂಲಿ ಮಾಡಬೇಕಾದ ಹಣವನ್ನು ಕಡಿಮೆ ಮಾಡಿದರು. ಅದೇ ಪ್ರಕಾರ ಮಾರ್ಕೆಟ್ ರೇಟ್ ಎಷ್ಟು ಇದೆ ಅದನ್ನು ನೋಡಿಕೊಂಡು ಈ ಹಣವನ್ನು ವಸೂಲು ಮಾಡಿಕೊಳ್ಳುತ್ತೀರಾ?

ಶ್ರೀ ಕೆ. ಎಚ್. ರಂಗನಾಥ್.—ನಾನು ಇದರ ಬಗ್ಗೆ ತಕ್ಷಣ ಹೇಳುವುದಕ್ಕೆ ತಯಾರು ಇಲ್ಲ ಎಲ್ಲಾ ಅನುಕೂಲ ಮಾಡಿಕೊಡುತ್ತೇನೆ ಎಂದು ಹೇಳಲಿಕ್ಕೂ ನಾನು ತಯಾರು ಇಲ್ಲ. ಇದನ್ನು ನಾನು ವಿಚಾರ ಮಾಡಬೇಕು, ೧೦ ಸಾವಿರ ರೂಪಾಯಿಗಳ ಬೀಜವನ್ನು ಬೆಳೆಯತಕ್ಕ ರೈತರು ಎಲ್ಲಿದ್ದಾರೆ?

ಶ್ರೀ ಭೀಮಣ್ಣ ಖಂಡ್ರೆ.—ಸುಮಾರು ೫೦ ಸಾವಿರ ರೂಪಾಯಿಗಳನ್ನು ನಮ್ಮ ಬೀದರ್ ಡಿಸ್ಟ್ರಿಕ್ಟ್‌ನಲ್ಲಿ ರೈತರು ಕೊಡಬೇಕಾಗಿದೆ, ಇವರಿಗೆ ಸುಲಭವಾಗಿ ಸಾಲವನ್ನು ಕೊಡುವಂಥ ಧೋರಣೆಯನ್ನು ಸರ್ಕಾರದವರು ಅನುಸರಿಸಬೇಕು.

ಶ್ರೀ ಕೆ. ಎಚ್. ರಂಗನಾಥ್.- ನಮ್ಮ ಧೋರಣೆ ಏನೇ ಇರಲಿ, ಹಿಂದಿನವರದು ಏನೇ ಇರಲಿ, ಅದು ಏನಿತ್ತು ಎನ್ನುವುದು ನನಗೂ ಗೊತ್ತಿದೆ. ಸುಮಾರು ೧೦ ಸಾವಿರ ರೂಪಾಯಿಗಳ ಬೀಜವನ್ನು ತೆಗೆದುಕೊಳ್ಳುವವರು ಎಲ್ಲಿಯಾದರೂ ಉಂಟೆ ? ಯಾವ ಯಾವ ಬೀಜ ತಂದರೂ ಅದು ಹುಟ್ಟದಿದ್ದರೆ, ಅದಕ್ಕೂ ಮಾಫಿ ಮಾಡಿ ಎಂದು ಹೇಳತಕ್ಕದ್ದನ್ನು ನಾನು ಒಪ್ಪುವುದಕ್ಕೆ ತಯಾರು ಇಲ್ಲ. ಇಲ್ಲಿಯವರೆಗೆ ಸರ್ಕಾರಕ್ಕೆ ಬೀಜ ಹುಟ್ಟಲಿಲ್ಲ ಎನ್ನುವ ವರದಿಗಳು ಬಂದಿಲ್ಲ. ಎಲ್ಲಿ ಸಣ್ಣ ಪುಟ್ಟ ರೈತರಿಗೆ ತೊಂದರೆಯಾಗಿದೆ, ತೊಂದರೆಯಾಗಿದ್ದರೆ ಅಂಥಾದ್ದನ್ನು ನಾವು ವಿಚಾರ ಮಾಡೋಣ. ೧೯೭೩-೭೪ನೇ

ಸಾಲಿನಲ್ಲಿ ಮುಂಗಾರಿ ಮಳೆ ರಾಕ್ಷಸಿ ರೂಪದಲ್ಲಿ ಬಿದ್ದು ಸ್ವಲ್ಪ ತೊಂದರೆಯಾಗಿರಬಹುದು, ಆದರೆ ಎಲ್ಲಾ ಕಡೆ ಹೀಗೆ ಆಗಿದೆ, ಎನ್ನುವುದನ್ನು ನಾನು ಒಪ್ಪುವುದಕ್ಕೆ ತಯಾರು ಇಲ್ಲ. ಪೆನಾಲ್ ಇಂಟರೆಸ್ಟ್ ಬಗ್ಗೆ ಇದನ್ನು ತೆಗೆಯುವುದಕ್ಕೆ ಸಾಧ್ಯವೇ ಎಂದು ವಿಚಾರ ಮಾಡುತ್ತೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಸದಸ್ಯರುಗಳು ಇದರ ಬಗ್ಗೆ ಬೇಕಾದಷ್ಟು ಪ್ರಶ್ನೆಗಳನ್ನು ಕೇಳಿದ್ದಾರೆ, ಸಚಿವರೂ ಉತ್ತರ ಕೊಟ್ಟಿದ್ದಾರೆ, ಇನ್ನೊಂದು ಡಿಮ್ಯಾಂಡ್ ಪಾಸ್ ಆಗಬೇಕಾಗಿದೆ, ಆದ್ದರಿಂದ ಅಧ್ಯಕ್ಷರು, ಮುಂದಿನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕು.

ಶ್ರೀ ಭೀಮಣ್ಣ ಖಂಡ್ರೆ.—ಭಾರತ ದೇಶದಲ್ಲಿ ಯಾವ ರಾಜ್ಯದಲ್ಲಿಯೂ ನಮ್ಮ ರಾಜ್ಯದಲ್ಲಿರುವಷ್ಟು ರೈತರ ಮೇಲಿನ ತೆರಿಗೆ ಇಲ್ಲ, ಇದನ್ನು ಸರಿಪಡಿಸುತ್ತೀರಾ?

ಶ್ರೀ ಕೆ. ಹೆಚ್. ರಂಗನಾಥ್.—ಟ್ಯಾಕ್ಸ್ ಹಾಕಿದ್ದೇವೆ, ಟ್ಯಾಕ್ಸ್ ಹಾಕಬೇಕಾಗುತ್ತದೆ. ಮಾನ್ಯ ಖಂಡ್ರೆಯವರು ನಮ್ಮ ಜೊತೆಗೆ ಇಲ್ಲಿ ಬರುವುದಕ್ಕಿಂತ ಮುಂಚೆ ಬೀದರ್‌ನಲ್ಲಿ ಒಂಟೆ ಮೇಲೆ ಓಡಾಡುತ್ತಿದ್ದರು. ಆ ಎಲ್ಲ ಅನುಕೂಲತೆಗಳನ್ನು ಮಾಡಿಕೊಡಬೇಕಾದರೆ ಟ್ಯಾಕ್ಸ್ ಹಾಕಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ಕೂಡ ವಿಚಾರ ಮಾಡುತ್ತದೆ. ರಾಜ್ಯ ಸರ್ಕಾರ ಯಾವು ಯಾವುದರ ಮೇಲೆ ಯಾವ ಯಾವ ರೀತಿ ಟ್ಯಾಕ್ಸ್ ಹಾಕಬೇಕೆಂಬುದನ್ನು ವಿಚಾರ ಮಾಡಿ ಹಾಕುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಬಿಜಾಪುರ ತಾಲ್ಲೂಕಿನ ಜಂಬಗಿ ಎಂಬಲ್ಲಿ ಒಂದು ಅಗ್ರಿಕಲ್ಚರಲ್ ಫಾರಂ ಇದೆ. ಅಲ್ಲಿ ೨–೩ ವರ್ಷಗಳಿಂದ ಅದು ನಡೆಯುತ್ತಿದೆ. ಅಲ್ಲಿನ ಕೃಷ್ಣ ನದಿ ದಂಡೆಯಲ್ಲಿ ೪೦೦–೫೦೦ ಎಕರೆ ಜಮೀನು ಇದೆ. ಅಲ್ಲಿ ನೋಡಿದರೆ ಸುಮಾರು ೨–೩ ಲಕ್ಷ ರೂಪಾಯಿ ನಷ್ಟವಾಗುತ್ತಿದೆಯೇ ವಿನಹ ಉತ್ಪತ್ತಿ ಏನು ಬರುತ್ತಿಲ್ಲ. ಆದ್ದರಿಂದ, ಆ ಪ್ರದೇಶದ ಮುಖಂಡರೆಲ್ಲ ಸೇರಿ ಒಂದು ತೀರ್ಮಾನ ತೆಗೆದುಕೊಂಡು ಆ ಜಮೀನನ್ನು ಭೂಹೀನರಿಗೆ, ಹರಿಜನ ಗಿರಿಜನರಿಗೆ ಕೊಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದ್ದಾರೆ. ಆ ಫಾರಂ, ರೀಡ್ಸ್ ವಗೈರೆಯಿಂದ ಲಾಸ್ ಆಗುತ್ತಿದೆ. ಅದಕ್ಕೆ ಬದಲಾಗಿ ಭೂಹೀನರಿಗೆ ಹಂಚಿದರೆ ಒಳ್ಳೆಯದಾಗುತ್ತದೆಂದು ವಿಚಾರ ಮಾಡಿದ್ದಾರೆ. ಆದ್ದರಿಂದ ಈ ರೀತಿ ಸರ್ಕಾರಕ್ಕೆ ಲುಕ್ಸಾನು ಆಗುವುದರ ಬದಲು ಭೂಹೀನರಿಗೆ, ಬಡ ರೈತರಿಗೆ ಕೊಟ್ಟರೆ, ಬಡಜನರ ಉದ್ಧಾರವಾದರೂ ಆಗುತ್ತದೆಂದು ನನ್ನ ಅಭಿಪ್ರಾಯ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಅದನ್ನು ನೋಡಿಲ್ಲ, ತಾವು ಆ ಬಗ್ಗೆ ಪ್ರಸ್ತಾಪ ಮಾಡಿರುವುದನ್ನು ನಾನು ನೋಟ್ ಮಾಡಿಕೊಂಡಿದ್ದೇನೆ; ನಂತರ ಅದನ್ನು ನೋಡುತ್ತೇನೆ. ಎಲ್ಲ ಸೀಡ್ ಫಾರಂಗಳು ಲಾಸ್‌ನಲ್ಲಿ ನಡೆಯುತ್ತಿರುವುದಿಲ್ಲ. ಅಲ್ಲಿ ಸುಮಾರು ಒಂದು ಒಂದೂವರೆ ಸಾವಿರ ರೂಪಾಯಿ ಸಂಬಳ ಪಡೆಯತಕ್ಕಂಥ ಅಧಿಕಾರಿಗಳನ್ನು ಹಾಕಬೇಕಾಗುತ್ತದೆ. ಇವತ್ತು ಅಲ್ಲಿರತಕ್ಕ ಫಾರಂ ಏನೋವ್ಯಾಜ್ಯದಲ್ಲಿದೆ. ಇಂಥ ಸಂದರ್ಭದಲ್ಲಿ ಮಧ್ಯೆ ಕೈ ಹಾಕುವುದಕ್ಕೆ ಬರುವುದಿಲ್ಲ. ಅದೂ ಕೂಡ ಇರಿಗೇಟೆಡ್ ಫಾರಂ ಅಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಅದು ಹೊಳೆಯ ದಂಡೆಯಲ್ಲಿರುವುದರಿಂದ ಅಲ್ಲಿ ತುಂಬಾ ನೀರಾವರಿ ಇದೆ; ಜೊತೆಗೆ ಲಿಫ್ಟ್ ಇರಿಗೇಷನ್ ಕೂಡ ಇದೆ.

ಶ್ರೀ ಕೆ. ಹೆಚ್. ರಂಗನಾಥ್.—ಅಲ್ಲಿ ಈಗಾಗಲೇ ಒಂದು ವ್ಯಾಜ್ಯ ಇರುವಾಗ ಇನ್ನೊಂದು ವ್ಯಾಜ್ಯ ವನ್ನು ಮಾಡಬಾರದು. ಒಂದು ವೇಳೆ ನಾವು ಭೂಹೀನರಿಗೆ ಕೊಟ್ಟವೇದರೆ ಅವರವರಿಗೆ ವ್ಯಾಜ್ಯ ತಂದಿಟ್ಟು ಕುಳಿತುಕೊಳ್ಳುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಅದನ್ನು ನಾನು ಮೊದಲು ನೋಡಿದ ಬಳಿಕ ವಿಚಾರ ಮಾಡೋಣ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ.—ಬೀಜಗಳನ್ನು ರೈತರಿಗೆ ಒದಗಿಸತಕ್ಕದ್ದು ಸರ್ಕಾರದ ನೀತಿ; ಅದ ಕ್ಕೋಸ್ಕರ ಕಾರ್ಪೊರೇಷನ್ ಕೂಡ ಮಾಡಿದ್ದೀರಿ. ಆದರೂ ಕೂಡ ಕೆಲವು ಜಿಲ್ಲೆಗಳಲ್ಲಿ ೧೯೭೫ನೇ ಇಸವಿಯು ವರಲಕ್ಷ್ಮಿ ಹತ್ತಿ ಬೀಜವನ್ನೂ ಕೆಲವು ಜಿಲ್ಲೆಗಳಲ್ಲಿ ೧೯೭೭ನೇ ಇಸವಿಯು ಬೀಜವನ್ನು ಹಂಚಿದ್ದೀರಿ. ೧೯೭೫ನೇ ಇಸವಿಯು ಬೀಜ ೩ ವರ್ಷಗಳ ನಂತರ ಹುಟ್ಟುತ್ತದೆಯೆ? ನಮ್ಮ ಹಾಸನ ಜಿಲ್ಲೆಯಲ್ಲಿ ಬಹಳ ಮಂದಿ ಹತ್ತಿ ಬೀಜ ಹುಟದೆ ನಷ್ಟವಾಗಿದೆ ಎಂದು ತಿಳಿಸಿದ್ದಾರೆ. ಇದಕ್ಕೆ ಸರ್ಕಾರ ಜವಾಬ್ದಾರಿ ಅಲ್ಲವೆ?

ಶ್ರೀ ಕೆ.ಹೆಚ್. ರಂಗನಾಥ್.—ಎರಡು ತರಹದ ಬೀಜವನ್ನು ಕೊಟ್ಟಿದ್ದೇವೆ. ಅದರಲ್ಲಿ ಮುಚು ಮರೆ ಏನು ಇಲ್ಲ. ಅದು ಇಂಥ ಬೀಜ ಎಂದು ಕೂಡ ಹೇಳಿದ್ದೇವೆ ಅದು ಸರಿಯಾಗಿ ಹುಟ್ಟುತ್ತದೆಯೋ ಎಂದು ಟೆಸ್ಟ್ ಮಾಡಿದ ಮೇಲೆ ಅದನ್ನು ಮಾರಾಟ ಮಾಡಿರುವುದು. ಇದುವರೆಗೆ ಬೀಜ ಹುಟ್ಟಿಲ್ಲವೆಂದು

ಯಾವ ದೂರು ಬಂದಿಲ್ಲ. ಆದ್ದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಇನ್ನು ಮೇಲೆ ಬೀಜೋತ್ಪತ್ತಿಗೆ ನ್ಯಾಷನಲ್ ಸೀಡ್ಸ್ ಪ್ರಾಜೆಕ್ಟ್ ಎಂದು ಒಂದು ಪ್ರಾಜೆಕ್ಟ್ ಹೊಸದಾಗಿ ಬರುತ್ತದೆ. ಅದಕ್ಕೆ ಕೇಂದ್ರ ದಿಂದಲೂ ಕೂಡ ೫ ಕೋಟಿ ರೂಪಾಯಿ ನೆರವು ದೊರೆಯುತ್ತದೆ. ಹಾಸನ ಜಿಲ್ಲೆಗೆ ಮಾತ್ರವಲ್ಲ, ಬೇರೆ ಬೇರೆ ಜಿಲ್ಲೆಯವರಿಗೂ ಕೂಡ ಕೊಟ್ಟಿದ್ದೇವೆ. ಅದರ ರೇಟ್ ಕೂಡ ಕಡಿಮೆ ಇದೆ. ಆ ಎರಡು ತರಹದ ಬೀಜಗಳನ್ನು ಹಾಕಿದರೂ ಕೂಡ ಚೆನ್ನಾಗಿ ಬೆಳೆಯುತ್ತವೆ. ಈ ಬಗ್ಗೆ ರೇಡಿಯೋ ಮೂಲಕವೂ ಕೂಡ ಪ್ರಸಾರ ಮಾಡಲಾಗಿದೆ. ಇಲ್ಲಿಯವರೆಗೆ ಈ ಬಗ್ಗೆ ನನಗಾಗಲೀ, ಇಲಾಖೆಯವರಿಗಾಗಲೀ ಯಾವ ದೂರು ಬಂದಿಲ್ಲ.

ಶ್ರೀ ಎಚ್.ಡಿ. ಚೌಡಯ್ಯ.—ಕಳೆದ ಮೂರು ವರ್ಷಗಳಿಂದ ಮಂಡ್ಯ ಜಿಲ್ಲೆಯಲ್ಲಿ ಕಬ್ಬಿನ ಬೇಸಾಯಕ್ಕೆ ಒಂದು ತರಹ ರೋಗ ಬಹಳ ಉಲ್ಬಣವಾಗಿ ತಗಲಿದೆ. ಹೀಗಾಗಿ ೧೫-೨೦ ಎಕರೆಗಳಲ್ಲಿ ಬರುತ್ತಿದ್ದ ಇಳುವರಿ ೪೦-೫೦ ಎಕರೆಯಲ್ಲೂ ಬರುತ್ತಿಲ್ಲ. ಇದರ ನಿವಾರಣೆಗೆ ವ್ಯಾಪಕವಾಗಿ ಕ್ರಮ ಕೈಗೊಳ್ಳುವುದಕ್ಕೆ ಇಲಾಖೆಯವರಿಗೂ ಕೂಡ ಸಾಧ್ಯವಾಗಿಲ್ಲ. ಅದಕ್ಕೆ ಸಂಬಂಧಪಟ್ಟ ಔಷಧಿಗಳನ್ನೇನೋ ಸೊಸೈಟಿಗಳಿಗೆ ಸರಬರಾಜು ಮಾಡಿದ್ದಾರೆ. ಆದರೆ ಅದಕ್ಕೆ ರೈತರು ಹಣವನ್ನು ಕೊಟ್ಟು ಕೊಳ್ಳಬೇಕಾಗಿದೆ. ಅದಕ್ಕೆ ಕೊನೇ ಪಕ್ಷ ೩ ಸ್ಪ್ರೇ ಆದರೂ ಕೊಡಬೇಕಾಗುತ್ತದೆ. ೩ಕ್ಕೆ ೧೫೦–೧೬೦ ರೂಪಾಯಿಯಾದರೂ ಖರ್ಚಾಗುತ್ತದೆ. ಅಷ್ಟನ್ನು ರೈತರಿಂದ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ರೀತಿ ರಿಕವರ್ ಮಾಡಬೇಕೆಂದು ಸರ್ಕ್ಯೂಲರ್ ಇನ್‌ಸ್ಟ್ರಕ್ಷನ್ ಕೊಡಲಾಗಿದೆ. ಆದ್ದರಿಂದ, ನಾನು ಈ ಬಗ್ಗೆ ಒಂದು ಸಲಹೆ ಮಾಡುವುದೇನೆಂದರೆ, ಕೇಂದ್ರದಲ್ಲಿ ಬಹುಶಃ ಇದಕ್ಕೆ ಸಾಕಷ್ಟು ಕೆಲವು ಯೋಜನೆಗಳಿವೆ. ಆದ ಕಾರಣ, ತಾವು ಕೇಂದ್ರ ಸರ್ಕಾರವನ್ನು ಅಪ್ರೋಚ್ ಮಾಡಿ ಅವರಿಂದ ಏನು ನೆರವು ಸಿಕ್ಕಬಹುದೋ ಅದನ್ನು ಪಡೆದು, ರೈತರಿಗೆ ಕನಿಷ್ಟಪಕ್ಷ ಶೇಕಡ ೫೦ ರ ಷ್ಟಾದರೂ ಕನ್‌ಸೆಷನ್ ಕೊಡಬೇಕೆಂದು ಹೇಳುತ್ತೇನೆ. ಎಲ್ಲ ರೈತರಿಗೂ ಕೊಡುವುದಕ್ಕೆ ಸಾಧ್ಯ ಆಗದಿದ್ದರೂ ಮಾರ್ಜಿನಲ್ ಅಂಡ್ ಸಬ್ ಮಾರ್ಜಿನಲ್ ಫಾರ್ಮರ್ಸ್‌ಗಾದರೂ ಕೂಡ ಈ ಒಂದು ಕನ್‌ಸೆಷನ್ ಅನ್ನು ಕೊಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಟ್ರಾಕ್ಟರ್ಸ್ ಮತ್ತು ಬುಲ್ಡೋಜರ್ಸ್ ವಿಷಯದಲ್ಲಿ ಹೇಳುವುದಾದರೆ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನ ಬೆಲೆಯೇ ಆ ರೀತಿ ಆಗಿದೆ. ಅದರಲ್ಲಿ ಲಾಭದಾಯಕವಾದ ಒಂದು ಸೆಕ್ಷನ್ ಕೂಡ ಇಲ್ಲ. ನನಗೆ ತಿಳಿದಮಟ್ಟಿಗೆ ಈಗ್ಗೆ ೨ನೇ ವರ್ಷದಲ್ಲಿ ಸುಮಾರು ೨೫–೩೦ ಸಾವಿರ ರೂಪಾಯಿಗಳನ್ನು ಕೊಟ್ಟು ಬುಲ್ಡೋಜರ್ ಹೊಡೆಸಲಾಯಿತು. ಅದರಲ್ಲಿ ಏನು ಓವರ್‌ಹೆಡ್ ಚಾರ್ಜಸ್ ಇದೆ, ಬೇರೆ ಬೇರೆ ಸೆಕ್ಷನ್‌ಗಳಲ್ಲಿ ಏನು ಲಾಸ್ ಆಗುತ್ತಿದೆ ಅದನ್ನು ಈ ಟ್ರಾಕ್ಟರ್ ಮತ್ತು ಬುಲ್ಡೋಜರ್ ಸೆಕ್ಷನ್‌ನಲ್ಲಿ ಎತ್ತುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ತಾವು ದಯವಿಟ್ಟು ಈ ಬಗ್ಗೆ ಪರ್ಸನಲ್ ಆಗಿ ಗಮನಕೊಟ್ಟು ಟ್ರಾಕ್ಟರ್ ಮತ್ತು ಬುಲ್ಡೋಜರ್ ಚಾರ್ಜಸ್ ಏನಿದೆ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ (೫೦ ರಿಂದ ೭೫ ಪರ್ಸೆಂಟ್ ವರೆಗೆ ಕಡಿಮೆ ಮಾಡಬೇಕೆಂದು ಹೇಳುವುದಿಲ್ಲ) ಕಡಿಮೆ ಮಾಡಿಸಬೇಕೆಂದು ಹೇಳುತ್ತೇನೆ. ಇನ್ನು ಅಗ್ರಿಕಲ್ಚರಲ್ ಯೂನಿವರ್ಸಿಟಿಯ ಅಡ್ಮಿಷನ್ಸ್ ಬಗ್ಗೆ ಹೇಳುವುದಾದರೆ, ವ್ಯವಸಾಯಗಾರರ ಮಕ್ಕಳಿಗೆ ಏನು ೧೫ ಪರ್ಸೆಂಟ್ ಅಂದರೆ ಸುಮಾರು ೪೫–೪೬ ಸೀಟುಗಳನ್ನು ರಿಸರ್ವ್ ಮಾಡಬೇಕೆಂದು ಮಾಡಿದ್ದೀರಿ ಅದನ್ನು ದಯವಿಟ್ಟು ಅದರ ಎರಡರಷ್ಟು ಆದರೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಬಿ.ಎಸ್.ಸಿ. (ಎಜಿ) ಬಿ.ವಿ.ಎಸ್.ಸಿ., ಹಾರ್ಟಿಕಲ್ಚರಲ್, ಅಗ್ರಿಕಲ್ಚರಲ್, ಮಾರ್ಕೆಟಿಂಗ್ ಎಂದು ಏನು ಬೇರೆ ಬೇರೆ ಕೋರ್ಸ್‌ಗಳನ್ನು ಇಂಟ್ರಡ್ಯೂಸ್ ಮಾಡಿದ್ದೀರಿ ಅದು ಬಹಳ ಸಂತೋಷ. ಒಟ್ಟಿನಲ್ಲಿ ಈಗಿರತಕ್ಕ ಸೀಟುಗಳ ಎರಡರಷ್ಟನ್ನಾದರೂ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇನ್ನು ಹಳ್ಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ಆರ್ಗನೈಸೇಷನ್ ಸೆಟ್‌ಆಪ್ ಏನಿದೆ ಅದು ಸ್ವಲ್ಪ ಸುಧಾರಣೆಯಾಗಬೇಕು. ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್ ಮತ್ತು ಎ.ಇ.ಓಸ್. ಏನಿದ್ದಾರೆ ಅವರು ಬಿ.ಡಿ.ಓ.ನ ಕಂಟ್ರೋಲ್‌ನಲ್ಲಿರುತ್ತಾರೆ. ಇದರಿಂದ ಅಪ್ರಯೋಜಕವಾಗುತ್ತದೆ. ಒಬ್ಬ ಟೆಕ್ನಿಕಲ್ ಮ್ಯಾನನ್ನು ತೆಗೆದುಕೊಂಡು ಹೋಗಿ ನಾನ್ ಟೆಕ್ನಿಕಲ್ ಮ್ಯಾನ್ ಕೈ ಕೆಳಗೆ ಕೆಲಸ ಮಾಡಬೇಕು ಎಂದು ಹೇಳಿದರೆ ಅದು ಸರಿಹೋಗುವುದಿಲ್ಲ. ಆದ್ದರಿಂದ ಅವರನ್ನು ತಮ್ಮ ಇಲಾಖೆಗೆ ತೆಗೆದುಕೊಳ್ಳಬೇಕು. ನಂತರ ಟ್ರೈನಿಂಗ್ ಬಗ್ಗೆ ಹೇಳಬೇಕೆಂದರೆ...

ಶ್ರೀ ಬಿ. ಭಾಸ್ಕರಶೆಟ್ಟಿ.—ಅವರು ಭಾಷಣ ಮಾಡುತ್ತಿದ್ದಾರೆ. ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಅವರು ಕೃಷಿ ಪದವೀಧರರು. ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದ್ದರಿಂದ ಕೆಲವು ಮುಖ್ಯವಾದ ಅಂಶಗಳನ್ನು ಹೇಳುತ್ತಿದ್ದಾರೆ.

ಶ್ರೀ ಎಚ್ ಡಿ. ಚೌಡಯ್ಯ.—ಆದ್ದರಿಂದ ನಾನು ಹೇಳುವುದೇನೆಂದರೆ ಅಗ್ರಿಕಲ್ಚರ್ ಗ್ರಾಜುಯೇಟ್ಸ್‌ಗಳನ್ನು ಅಗ್ರಿಕಲ್ಚರ್ ಅಸಿಸ್ಟೆಂಟ್ಸ್‌ಗಳಾಗಿ ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ. ಇನ್ನು ರೂರಲ್ ಡೆವಲಪ್‌ಮೆಂಟ್ ಟ್ರೈನಿಂಗ್ ಸೆಂಟರ್ ವಿಷಯವಾಗಿ ಹೇಳುವುದಾದರೆ ಅಲ್ಲಿ ಟ್ರೈನೀಸ್‌ಗೆ ಸ್ಟೈಫಂಡ್ ಹೆಚ್ಚಿಸುವ ವಿಷಯದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಬಡವರ ಏಳಿಗೆಯನ್ನು ಮಾಡಲು ಸರ್ಕಾರ ದೀಕ್ಷೆ ತೆಗೆದುಕೊಂಡಿದೆ ಎಂದು ಹೇಳುತ್ತೀರಿ. ಆದರೆ ಈ ಬಗ್ಗೆ ಯಾತಕ್ಕೆ ಗಮನ ಕೊಡಲಿಲ್ಲವೋ ಗೊತ್ತಿಲ್ಲ. ರೂರಲ್ ಡೆವಲಪ್‌ಮೆಂಟ್ ಟ್ರೈನಿಂಗ್ ಸೆಂಟರ್‌ಗೆ ತಮಗೆ ಗೊತ್ತಿರುವ ಹಾಗೆ ಅನುಕೂಲಸ್ಥರ ಮಕ್ಕಳು ಹೋಗುವುದಿಲ್ಲ, ಆರ್ಥಿಕವಾಗಿ ದುರ್ಬಲವಾಗಿರತಕ್ಕ ಹಿಂದುಳಿದವರ ಮಕ್ಕಳು ಸಾಮಾನ್ಯವಾಗಿ ಹೋಗುತ್ತಾರೆ. ಆದರೆ ಅವರಿಗೆ ೧೦೦ ರೂಪಾಯಿ ಸ್ಟೈಫಂಡ್ ಕೊಡುತ್ತಿದ್ದಾರೆ. ಅದು ಅವರ ಊಟ ತಿಂಡಿಗೆ ಸಾಕಾಗುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕು. ಸರ್ಕಾರಕ್ಕೆ ಸ್ಟೈಫಂಡ್ ಹೆಚ್ಚು ಮಾಡುವ ಬಗ್ಗೆ ಪ್ರೊಪೋಸಲ್ ಬಂದಿದೆ. ಆದ್ದರಿಂದ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಸ್ಟೈಫಂಡನ್ನು ಕಡೇ ಪಕ್ಷ ೧೫೦ ರೂಪಾಯಿಗಾದರೂ ಏರಿಸಬೇಕು ಎಂದು ಸಲಹೆ ಕೊಡುತ್ತಿದ್ದೇನೆ. ಕೊನೆಯದಾಗಿ ಬೆಳೆಗಳ ವಿಷಯವಾಗಿ ಒಂದು ಮಾತನ್ನು ಹೇಳುತ್ತೇನೆ. ಬೆಳೆಗಳ ಉತ್ಪಾದನೆ ಕೆಳಮಟ್ಟಕ್ಕೆ ಇಳಿಯುತ್ತಿದೆ. ಇವತ್ತಿನ ದಿವಸ ಬೆಳೆಗಳಲ್ಲಿ ಬದಲಾವಣೆ ಆಗಬೇಕು. ಮೊನ್ನೆ ತಾನೆ ರಾಜ್ಯಸಭೆಯಲ್ಲಿ ಕೇಂದ್ರ ಸರ್ಕಾರದ ವ್ಯವಸಾಯ ಖಾತೆ ರಾಜ್ಯ ಸಚಿವರು ಹೇಳಿದ್ದಾರೆ, ಕಬ್ಬನ್ನು ಬೆಳೆಯುತಕ್ಕ ಪ್ರದೇಶವನ್ನು ಕಡಿಮೆ ಮಾಡಬೇಕು, ಒಂದು ವೇಳೆ ರೈತರು ಕಡಿಮೆ ಮಾಡದೇ ಹೋದರೆ ಲೆಜಿಸ್ಲೇಷನ್ ತರಬೇಕಾಗುತ್ತದೆ ಎಂದು ಹೇಳಿದ್ದಾರೆ. ಅದೇ ಅಲ್ಲದೆ ನಿಮ್ಮ ವರದಿಯಲ್ಲಿ ಕೂಡ ಪಲ್ಸಸ್ ರಿಕ್ವೈರ್‌ಮೆಂಟಿಗೆ ತಕ್ಕ ಹಾಗೆ ಉತ್ಪಾದನೆ ಇಲ್ಲ ಎಂದು ಹೇಳಿದ್ದೀರಿ. ಯಾವ ಯಾವ ಬೆಳೆಗಳ ಅವಶ್ಯಕತೆ ಇದೆ ಎಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ವ್ಯಾಪಕವಾದ ಕಾರ್ಯಕ್ರಮವನ್ನು ಇಲಾಖೆ ಹಾಕಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.—ಕಬ್ಬಿನ ಬೆಳೆಯ ರೋಗದ ಬಗ್ಗೆ ಹೇಳಿದ್ದೀರಿ. ಆ ಬಗ್ಗೆ ಹೇಳುವುದಾದರೆ ಈ ಬ್ರೋಚರ್ ಪೇಜ್ ೯ ರಲ್ಲಿ ಏನೇನು ಮಾಡಬೇಕು ಎಂದು ಹೇಳಿದೆ. ಮತ್ತೆ ಮಾನ್ಯ ಸದಸ್ಯರು ರೈತರಿಗೆ ಎಲ್ಲಾ ಸಬ್ಸಿಡೈಸ್ಡ್ ರೇಟ್‌ನಲ್ಲಿ ಕೊಡಬೇಕು, ಇಲ್ಲದಿದ್ದರೆ ಕಾಸ್ಟ್ ಜಾಸ್ತಿಯಾಗುತ್ತದೆ ಎಂದು ಹೇಳಿದ್ದಾರೆ. ಈಗ ಕೆಲವು ಏರಿಯಾಗಳನ್ನು ಎಂಡಮಿಕ್ ಏರಿಯಾ ಎಂದು ಡಿಕ್ಲೇರ್ ಮಾಡಿ ಅದಕ್ಕೆ ಸಹಾಯ ಮಾಡಬೇಕೆಂದು ಕೇಂದ್ರ ಸರ್ಕಾರದ ಜೊತೆ ಪ್ರಸ್ತಾಪ ಮಾಡಿದ್ದೇವೆ. ಅದು ಒಪ್ಪಿಗೆಯಾಗಿ ಬಂದ ಮೇಲೆ ಅನುಕೂಲವಾಗುತ್ತದೆ. ಅದರೆ ರೈತರೂ ಕೂಡ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. Untimely sowing ಮಾಡತಕ್ಕುದ್ದು, ಪ್ರತಿ ವರ್ಷ ಕಬ್ಬನ್ನೇ ಹಾಕತಕ್ಕುದ್ದು ಹೀಗೆಲ್ಲಾ ಮಾಡುತ್ತಿರುವುದರಿಂದ ಸ್ವಲ್ಪ ಮಟ್ಟಿಗೆ ರೋಗ ಜಾಸ್ತಿಯಾಗುವುದಕ್ಕೆ ಕಾರಣವಾಗಿದೆ. ಅದಲ್ಲದೆ ಕಬ್ಬು ಬೆಳೆದರೆ ಹೆಚ್ಚಿಗೆ ಲಾಭ ಸಿಗುತ್ತದೆ ಎಂಬ ದೃಷ್ಟಿಯೂ ರೈತರಲ್ಲಿದೆ. ಹೀಗಾಗಿ ಕಬ್ಬನ್ನು ಬೆಳೆಯುತಕ್ಕ ಹವ್ಯಾಸ ಜಾಸ್ತಿಯಾಗಿ ಸ್ವಲ್ಪ ರೋಗಕ್ಕೆ ತುತ್ತಾಗಿರತಕ್ಕ ಸಂದರ್ಭಗಳು ಉಂಟಾಗುತ್ತಿವೆ. ಇದನ್ನೂ ಕೂಡ ತಾವು ಯೋಚನೆ ಮಾಡಬೇಕು. ಇವತ್ತು ಕಬ್ಬಿನ ಬೆಳೆ ಬಗ್ಗೆ ಕೇಂದ್ರ ಸರ್ಕಾರದ ಅಭಿಪ್ರಾಯ ಬಂದ ಮೇಲೆ ಅದನ್ನು ಹೆಚ್ಚಾಗಿ ಬೆಳೆಯಬೇಕೇ ಅಥವಾ ಕಡಿಮೆ ಮಾಡಬೇಕೇ ಎಂಬುದನ್ನೂ ವಿಚಾರ ಮಾಡಬೇಕಾಗಿದೆ. ಮತ್ತೆ ಬುಲ್ಡೋಜರ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ವಾಸ್ತವಾಂಶ ಇದೆ. ನಷ್ಟವಾಗುವುದನ್ನು ಒಂದಲ್ಲ ಒಂದು ರೀತಿಯಲ್ಲಿ ಸರಿದೂಗಿಸಬೇಕು ಎಂಬ ಉದ್ದೇಶದಿಂದ ಬೆಲೆ ಜಾಸ್ತಿ ಮಾಡುವ ಪರಿಸ್ಥಿತಿಗೆ ಬಂದಿದೆ. ಬುಲ್ಡೋಜರ್‌ಗಳು ಕೆಲವು ಹಳೆಯದಿದ್ದು ಅದನ್ನು ರಿಪೇರಿ ವಗೈರೆ ಮಾಡಬೇಕಾಗಿ ಬಂದುದರಿಂದ ರೇಟನ್ನು ಸ್ವಲ್ಪ ಜಾಸ್ತಿ ಮಾಡಬೇಕಾಗಿ ಬಂದಿದೆ. ಈ ಬಗ್ಗೆ ಯಾವ ರೀತಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥೆಗೊಳಿಸಬೇಕು ಎಂಬುದು ಸರ್ಕಾರದ ಗಮನದಲ್ಲಿದೆ. ಮತ್ತು ಸಂಬಂಧಪಟ್ಟ ಕಾರ್ಪೊರೇಷನ್ನಿನವರೂ ಕೂಡ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಕಾರ್ಪೊರೇಷನ್ ಸ್ವತಂತ್ರ ಸಂಸ್ಥೆಯಾಗಿರುವುದರಿಂದ ನೇರವಾಗಿ ಅದು ನಮ್ಮ ಆಡಳಿತಕ್ಕೆ ಒಳಪಡುವುದಿಲ್ಲ. ಆದರೆ ಸರ್ಕಾರದ ಪ್ರತಿನಿಧಿಗಳು ಅಲ್ಲಿದ್ದಾರೆ. ಆದ್ದರಿಂದ ಸರ್ಕಾರ ಕೂಡ ಇದರ ಬಗ್ಗೆ ಗಮನ ವಹಿಸುತ್ತಿಲ್ಲ ಎಂದು ಹೇಳುವುದಿಲ್ಲ. ಲಾಭ ಮಾಡಲೇಬೇಕು ನಷ್ಟ ಆದರೆ ಸಹಿಸುವುದಕ್ಕಾಗುವುದಿಲ್ಲ ಎಂದು ಹೇಳಿದ್ದೇವೆ. ಮತ್ತು ಬುಲ್ಡೋಜರ್ ರೇಟನ್ನು ಕಡಿಮೆ ಮಾಡಬೇಕಾದರೆ ಹೊಸ ಬುಲ್ಡೋಜರ್ ಬಂದರೆ ಮಾತ್ರ ಅವಕಾಶವಾಗುತ್ತದೆ. ಈಗ ಮ್ಯಾಗ್ಸಿಮಂ ಇಷ್ಟೇ ಟೈಂ ಕೆಲಸ ಮಾಡಬೇಕು ಎಂಬ ನೀತಿಯಿದ್ದರೂ ಕೂಡ ಆ ಮಟ್ಟಕ್ಕೆ ಬರದೇ ಇರುವ ಪರಿಸ್ಥಿತಿಗೆ ಬಂದಿದೆ. ರಿಕ್ವೈರ್ಡ್ ಏರಿಯಾಗಳನ್ನು ಮಾತ್ರ ಮಾಡಿ ಬಾಕಿ ಎಲ್ಲಾ ಕಡೆ ಮಾಡಲಿಕ್ಕೆ ಸಾಧ್ಯವಾಗದೇ ಇರತಕ್ಕ ಪರಿಸ್ಥಿತಿ ಇದೆ.

ಹಿಂದೆ ಅಗ್ರಿಕಲ್ಚರಲ್ ಇಂಜಿನಿಯರಿಂಗ್ ವಿಂಗ್ ಇತ್ತು. ಈಗ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಆದ ಮೇಲೆ ಎಲ್ಲಾ ಅಲ್ಲಿಗೆ ವರ್ಗಾವಣೆ ಆಗಿದೆ. ಹೀಗಾಗಿ ಕೆಲವು ತೊಂದರೆಯಾಗಿದೆ. ಮತ್ತೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ರೈತರ ಮಕ್ಕಳಿಗೆ ಹೆಚ್ಚಿಗೆ ಸೀಟುಗಳು ದೊರೆಯಬೇಕು ಎಂದು ಹೇಳಿದ್ದಾರೆ. ಸುಮಾರು ೬೦–೬೫ ಪರ್ಸೆಂಟ್ ಸೀಟುಗಳು ರೈತರ ಮಕ್ಕಳಿಗೇ ದೊರೆಯುತ್ತಿದೆ. ಇದರ ಬಗ್ಗೆ ಮತ್ತೊಮ್ಮೆ ವಿಚಾರ ಮಾಡಿ ನಾನು ಹೇಳುತ್ತೇನೆ. ಫೀಲ್ಡ್ ಅಸಿಸ್ಟೆಂಟ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ, ಅದು ವಾಸ್ತವಾಂಶ. ನಾನು ಆ ಬಗ್ಗೆ ಹೇಳುವುದನ್ನು ಮರೆತಿದ್ದೆ. ತಾವು ಪ್ರಸ್ತಾಪ ಮಾಡಿದ್ದು ಒಳ್ಳೆಯದಾಯಿತು. ಹೆಚ್ಚು ವ್ಯವಸಾಯಗಾರರ ಕುಟುಂಬಗಳಿಗೆ ಒಬ್ಬೊಬ್ಬರು ಫೀಲ್ಡ್ ಅಸಿಸ್ಟೆಂಟ್ ಇರುವುದರಿಂದ ಹೆಚ್ಚು ನಿಗಾ ವಹಿಸುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕಾಗಿ ಹೊಸ ಸಿಸ್ಟಂ ಇಂಟ್ರೊಡ್ಯೂಸ್ ಮಾಡಲಾಗಿದೆ. ಅದೇನೆಂದರೆ ಎಲ್ಲಿ ನೀರಾವರಿ ವ್ಯವಸಾಯವಿರುತ್ತದೆ ಅಲ್ಲಿ ೪೨೦ ಸಂಸಾರಗಳಿಗೆ ಒಬ್ಬ ಫೀಲ್ಡ್ ಅಸಿಸ್ಟೆಂಟ್ ಇರತಕ್ಕ ರೀತಿಯಲ್ಲಿ ಏರ್ಪಾಡು ಮಾಡಿ ಅವರು ಎಲ್ಲಾ ನೋಡಿಕೊಂಡು ಸರ್ಕಾರಕ್ಕೆ ಇನ್‌ಫರ್ಮೇಷನ್ ಕೊಡತಕ್ಕ ಜವಾಬ್ದಾರಿಯನ್ನು ಅವರಿಗೆ ವಹಿಸಿ ಅವರು ತಾವು ಹೇಳಿದ ರೀತಿಯಲ್ಲಿ ನೇರವಾಗಿ ವ್ಯವಸಾಯ ಅಧಿಕಾರಿಯ ಆಡಳಿತಕ್ಕೆ ಒಳಪಡತಕ್ಕ ವಿಚಾರದಲ್ಲಿ ವ್ಯವಸ್ಥೆ ಮಾಡಬೇಕು ಎಂದು ಯೋಚನೆ ಮಾಡಲಾಗಿದೆ. ಖುಷ್ಕಿ ವ್ಯವಸಾಯದ ಪ್ರದೇಶನಲ್ಲಿ ೮೦೦ ವ್ಯವಸಾಯದ ಕುಟುಂಬಗಳಿಗೆ ಒಬ್ಬ ಗ್ರಾಮಸೇವಕನನ್ನು ಮಾಡಬೇಕು ಎಂದು ಇದೆ. ಈಗ ತಜ್ಞರಲ್ಲದೇ ಇರುವವರ ಕೈಕೆಳಗೆ ತಜ್ಞರು ಕೆಲಸ ಮಾಡುವಂಥ ಪರಿಸ್ಥಿತಿ ಬರುತ್ತದೆ ಎಂಬುದು ನಿಜ. ಅದು ಅನಿವಾರ್ಯ. ಗ್ರಾಮಸೇವಕನಾಗಿರುವವನಿಗೆ ಪ್ರೊಮೋಷನ್ ಕೊಟ್ಟಾಗ ಅವನು ಅಗ್ರಿಕಲ್ಚರ ಅಸಿಸ್ಟೆಂಟ್ ಆಗತಕ್ಕ ಅವಕಾಶ ಬರುತ್ತದೆ. ಹೀಗಾಗುವಾಗ ಹೊಸದಾಗಿ ಪದವೀಧರನಾಗಿ ಬಂದವನು ಅವರ ಕೈಕೆಳಗೆ ಕೆಲಸ ಮಾಡುವುದು ಅನಿವಾರ್ಯ. ಏಕೆಂದರೆ ಸರ್ಕಾರಿ ಕೆಲಸಗಾರರಿಗೆ ಪ್ರೊಮೋಷನ್ ಕೊಡಲೇಬೇಕಾಗುತ್ತದೆ, ಕೊಟ್ಟಾಗ ಹೀಗಾಗುತ್ತದೆ. ಹೀಗಾಗಿರುವುದರಿಂದ ಈ ಪರಿಸ್ಥಿತಿಯನ್ನು ತಕ್ಷಣ ತಪ್ಪಿಸುವುದಕ್ಕಾಗುವುದಿಲ್ಲ. ಕ್ರಮೇಣ ತಪ್ಪಬಹುದು. ಗ್ರಾಮಸೇವಕರು ಹೆಚ್ಚು ವ್ಯಾಪಕವಾಗಿ ಕೆಲಸ ಮಾಡುವ ಬಗ್ಗೆ ಅವರ ಕೆಲಸ ಒಂದು ಮಿತಿ ಮೀರಿದೆ ಅದನ್ನು ಕಡಿಮೆ ಮಾಡಿ ಅವರಿಗೆ ವಹಿಸಿರತಕ್ಕ ಕುಟುಂಬಗಳನ್ನು ಕಡಿಮೆ ಮಾಡಿ ಮಿಕ್ಕ ಕುಟುಂಬಗಳಿಗೇ ಹೆಚ್ಚು ನಿಗಾ ವಹಿಸುವ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಮತ್ತೆ ಮಾನ್ಯ ಸದಸ್ಯರು ರೂರಲ್ ಡೆವಲಪ್ಮೆಂಟ್ ಟ್ರೈನಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆಯುವವರಿಗೆ ಸ್ಟೈಫಂಡ್ ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು ಸರ್ಕಾರದ ಗಮನದಲ್ಲಿದ್ದು ಅದನ್ನು ವಿಚಾರ ಮಾಡಲಾಗುತ್ತಿದೆ. ಅದನ್ನು ಯಾವ ರೀತಿ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕು ಎಂದು ಯೋಚನೆ ಮಾಡುತ್ತಿದ್ದೇವೆ. ೧೦೦ ರೂಪಾಯಿ ಕೊಡುತ್ತಿರುವುದು ಕಡಿಮೆ ಆದನ್ನು ಎಷ್ಟು ಹೆಚ್ಚಿಸಬೇಕು, ಅವರಿಗೆ ಹೇಗೆ ಅನುಕೂಲ ಮಾಡಿಕೊಡಬೇಕು ಎಂಬುದು ಸರ್ಕಾರದ ಗಮನದಲ್ಲಿದೆ.

೧-೩೦ ಪಿ. ಎಂ.

ಶ್ರೀ ಡಿ. ಟಿ. ರಾಮು.—ನಾನು ನಿನ್ನೆ ಮಾತನಾಡುವಾಗ ಬೀಜೋತ್ಪಾದನಾ ಸಂಶೋಧನಾ ಕೇಂದ್ರ ಇನ್ನೊಂದು ಆಗಬೇಕು ಎಂದು ಹೇಳಿದ್ದೆ. ಯಾವ ವರ್ಷದಲ್ಲಿ ಬೀಜೋತ್ಪಾದನೆ ಮಾಡಿರುತ್ತೇವೋ ಅದೇ ವರ್ಷ ಹಂಚಬೇಕು ಎಂದು ಹೇಳಿದ್ದೆ. ಇದರ ಬಗ್ಗೆ ಸ್ಪಷ್ಟೀಕರಣಬೇಕು. ಜೊತೆಗೆ ೨೫–೩೦ ಎಕರೆ ಪ್ರದೇಶವನ್ನು ಒಂದು ಯೂನಿಟ್ ಮಾಡಿ ಅಲ್ಲಿ ಸರ್ಕಾರವೇ ಬಾವಿ ತೆಗೆಸಿ, ಆ ಪ್ರದೇಶದ ರೈತರಿಗೆ ನೀರನ್ನು ಹಂಚಿ, ನೀರಿನ ತೆರಿಗೆಯನ್ನು ಹಾಕಬೇಕು ಎಂದು ಒಂದು ವಿಷಯವನ್ನು ಹೇಳಿದ್ದೆ, ಅದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕು. ಮೂರನೆಯದು, ನಾನು ಭೂ ವಿಜ್ಞಾನಿಯವರ ಜೊತೆಯಲ್ಲಿ ಮಾತನಾಡುತ್ತಿದ್ದಾಗ ಅವರು ಒಂದು ತಂತ್ರವನ್ನು ಹೇಳಿದರು. ಆ ಒಂದು ಹೊಸ ತಂತ್ರವನ್ನು ನಾನು ಹೇಳಿದ್ದೆ. ಏನೆಂದರೆ, ಸುಮಾರು ೪೦ ಅಡಿ ಆಳದ ಒಳಗಡೆ ಇದ್ದ ಬಾವಿಯಲ್ಲಿ ವೈಬ್ರೇಟ್ ಮಾಡಿದಾಗ ಈಗ ಏನು ನೀರು ದೊರೆಯುತ್ತದೆ ಅದಕ್ಕಿಂತಲೂ ಹೆಚ್ಚು ಪಟ್ಟು ನೀರು ದೊರೆಯುತ್ತದೆ. ಈ ಒಂದು ತಂತ್ರವನ್ನು ಪ್ರಾಯೋಗಿಕವಾಗಿ ಒಂದೆರಡು ಜಿಲ್ಲೆಗಳಲ್ಲಿ ಮಾಡಿನೋಡಿ. ಈ ಒಂದು ಹೊಸ ತಂತ್ರಕ್ಕೆ ಹೆಚ್ಚು ಮಹತ್ವ ಏಕೆ ಕೊಡಬಾರದು ಎಂದು ನಾನು ಕೇಳುತ್ತೇನೆ. ಇದರ ಬಗ್ಗೆ ಕೂಡ ಸ್ಪಷ್ಟೀಕರಣ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆಲ್ಲಾ ನಾನು ಆಗಲೇ ಉತ್ತರವನ್ನು ಹೇಳಿದ್ದೇನೆ, ಆಗ ಅವರು ಇದ್ದರೋ ಇಲ್ಲವೋ ಗೊತ್ತಿಲ್ಲ. ಕಮ್ಯೂನಿಟಿ ವೆಲ್, ಬೋರ್‌ವೆಲ್

ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ, ಅದನ್ನು ಮಾಡಿಸುತ್ತೇನೆಂದು ಹೇಳಿದ್ದೇನೆ. ಮತ್ತೆ ಆಯಾ ವರ್ಷದಲ್ಲೇ ಬೀಜಗಳನ್ನು ಮಾರಬೇಕು ಎಂದು ಹೇಳಿದರು. ನ್ಯಾಷನಲ್ ಸೀಡ್ ಕಾರ್ಪೊರೇಷನ್ ಪ್ರಾಜೆಕ್ಟ್ ಬರುತ್ತಾ ಇದೆ. ಈಗ ಹಳೇ ಬೀಜಗಳನ್ನು ಮಾರತಕ್ಕಂಥ ಪರಿಸ್ಥಿತಿ ಇಲ್ಲ. ಹಳೇ ಬೀಜಗಳನ್ನೆಲ್ಲಾ ಖಾಲಿ ಮಾಡಿಯಾಯಿತು. ಇನ್ನು ಮುಂದೆಯೆಲ್ಲಾ ಆಯಾ ವರ್ಷದಲ್ಲೇ ಬೀಜಗಳು ಮಾರಾಟವಾಗುತ್ತದೆ. ಮತ್ತೆ ಭೂ ವಿಜ್ಞಾನಿಯ ತಂತ್ರವನ್ನು ಹೇಳಿದರು. ಅದು ನನಗೆ ಗೊತ್ತಾಗಲಿಲ್ಲ. ಇದರ ಬಗ್ಗೆ ಅವರು ಕಾಗದ ಬರೆದರೆ ಈ ವಿಷಯವನ್ನು ಭೂ ವಿಜ್ಞಾನಿಗಳನ್ನು ಕೇಳಿ ನಾನು ಹೇಳುತ್ತೇನೆ.

ಶ್ರೀ ಬಿ. ಎ. ಮುತ್ತಿಕಟ್ಟಿ.—ನಮ್ಮ ಭಾಗದಲ್ಲಿ ಸವಳು ಭೂಮಿ ಜಾಸ್ತಿ ಇದೆಯೆಂದು ನಾನು ಹೇಳಿದ್ದೆ. ವ್ಯವಸಾಯಕ್ಕೆ ಯೋಗ್ಯವಾಗಿ ಮಾಡಿಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—೫.೫ ಲಕ್ಷ ಎಕರೆ ಭೂಮಿಯಲ್ಲಿ ಅನುಕೂಲ ಮಾಡತಕ್ಕಂಥಾದ್ದಿದೆ. ಇದರ ಬಗ್ಗೆ ರಾಜ್ಯಾದ್ಯಂತ ವ್ಯಾಪಕವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ರಾಜ್ಯಾದ್ಯಂತ ನಾವು ಕಾರ್ಯಕ್ರಮ ತೆಗೆದುಕೊಳ್ಳುವಾಗ ನಿಮ್ಮ ಊರಿನದೂ ಬಂದುಬಿಡುತ್ತದೆ.

MR. SPEAKER.—I will now put the Demands to the vote of the House. The question is :

"That a sum not exceeding Rs. 19,78,20,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demand No. 1 "Agriculture (Excluding Horticulture and Drought Prone Areas Programme)."

"That a sum not exceeding Rs, 9,45,94,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demand No. 3 "Soil and Water Conservation".

"That a sum not exceeding Rs. 56,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demand No. 35 "Elections",

"That a sum not exceeding Rs. 80,81,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demand No. 33, "State Legislature".

The motion was adopted and the sums Demands were granted.

MR. SPEAKER.—In the afternoon we will take up Demands relating to State Excise and Labour and Employment. The House now stands adjourned to meet again at 3-30 p. m.

The House adjourned at Thirty Five Minutes past One of the Clock and re-assembled at Thirty Five Minutes past Three of the Clock.

[MR. SPEAKER.—In the Chair]

Message from the Chairman L. C.

Announcement

MR. SPEAKER.—I have received the following message from the Chairman, Legislative Council.

As required under Rule 109 of the Rules of Procedure and conduct of Business, in Karnataka Legislative Council I am sending herewith the Karnataka Village Officers Abolition Bill, 1978 as passed by the Legislative Assembly and as amended in the Legislative Council on 21-7-1978,

SRI S. LAXMI SAGAR.—Sir, on the day on which this particular Bill came up, we have pointed out to the Hon'ble Minister to bring certain amendments. At the conclusion he was good enough to accept our suggestion. Now it has become a duplication of work. He could have avoided it. Logically, he has agreed ; dut something held him back.

ಅಧ್ಯಕ್ಷರು.—ಇದು ನಾಳೆ ನಾಡಿದ್ದರಲ್ಲಿ ಪುನಃ ಡಿಸ್ಕಷನ್‌ಗೆ ಬರುತ್ತದೆ ಆಗ ಇದರ ಮೇಲೆ ಮಾತನಾಡುವಿರಂತೆ. Within 2 or 3 days it will be brought before the House.

Bus Accident near Sira

SRI H. GANGADHARAN.—I have sent a notice under Rule 312 regarding the accident took place near Sira in which one M.L.A. was involved.

MR. SPEAKER.—I send words to the concerned Minister.

Demand No. 21 and 58

SRI R. S. PATIL (Minister for Labour and Excise).—Sir, on the recommendation of the Governor I beg to move :

> "That a sum not exceeding Rs. 4,08,30,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demand No. 21 'State Exeise".

Sir, on the recommendation of the Governor I beg to move :

> "That a sum not exceeding Rs. 3,23,93 000 inclusive of the sum granted 'on account' be granted to the Government to

defray the charges which will come in course of payment during the financial year ending 31st day of March 1979 in respect of Demand No. 58, "Labour and Employment".

The Question was proposed

† ಶ್ರೀ ಮೈಕಲ್ ಬಿ. ಫರ್ನಾಂಡೀಸ್ (ಭಾರತೀನಗರ).—ಮಾನ್ಯ ಅಧ್ಯಕ್ಷರೇ, ಈಗತಾನೇ ಮಾನ್ಯ ಕಾರ್ಮಿಕ ಮತ್ತು ಉದ್ಯಮ ಇಲಾಖೆಗೆ ಸಂಬಂಧಪಟ್ಟ ಮಂತ್ರಿಯವರು ಬೇಡಿದ ಬೇಡಿಕೆಗಳನ್ನು ನಾನು ವಿರೋಧಿಸಿ, ನನ್ನ ವಿರೋಧವನ್ನು ಸಮರ್ಥಿಸುವ ಉದ್ದೇಶದಿಂದ ತಪ್ಪು ಮೂಲಕ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಈ ವರ್ಷದ ಬಡ್ಜೆಟ್ ಏನಿದೆ ಇದು ಒಂದು ಸರ್ಕಾರದ ಧೋರಣೆಯನ್ನು ನಿರೂಪಿಸುವ ಸಾಧನ ಕಾರ್ಮಿಕರ ಬಗ್ಗೆ ಸರ್ಕಾರದ ಧೋರಣೆ ಏನಿದೆ ಎಂದು ಸೂಚಿಸುವ ವಿಚಾರದಲ್ಲಿ, ಯಾವ ರೀತಿಯಲ್ಲೂ ಸಹ ಅದು ತನ್ನ ಧೋರಣೆಯನ್ನು ಹೊಸ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುತ್ತದೆ ಎಂದು ಸೂಚಿಸುವ ವಿಚಾರದಲ್ಲಿ ಈ ಒಂದು ಬಜೆಟ್ ಸಫಲವಾಗಿಲ್ಲ. ಒಂದು ಮಾಮೂಲಿ ರೀತಿಯಲ್ಲಿ ಕಾರ್ಮಿಕರ ಇಲಾಖೆಯ ಕಾರ್ಯಕ್ರಮದ ಬಗ್ಗೆ ಏನೆಲ್ಲಾ ಆಗಬೇಕು ಅವುಗಳನ್ನು ಸೂಚಿಸುವುದನ್ನು ಬಿಟ್ಟರೆ ಇದರಲ್ಲಿ ನಮ್ಮ ಕಾರ್ಮಿಕರ ಬಗ್ಗೆ ಬದಲಾವಣೆ ಆಗುವಂಥಾ ಸನ್ನಿವೇಶ ಇಲ್ಲ, ಮತ್ತು ಕಾರ್ಮಿಕರನ್ನು ಯಾವರೀತಿಯಲ್ಲಿ ಕಾಣುತ್ತಾರೆ ಎನ್ನುವ ಬಗ್ಗೆ ಕೂಡ ಯಾವ ಬದಲಾವಣೆಯನ್ನೂ ತೋರಿಸುತ್ತಾ ಇಲ್ಲ. ಮಾನ್ಯ ಆರ್ಥಿಕ ಸಚಿವರು ಹೇಳಿದರು ಈ ಒಂದು ಬಜೆಟ್ ಪ್ರಾಮುಖ್ಯವಾಗಿ ಇನ್‌ಕ್ರಿಮೆಂಟಲ್ ಬಜೆಟ್ ಎಂದು. ಅದು ಕೆಲವು ಇಲಾಖೆಗಳಿಗೆ ಬಹುಶಃ ಆ ರೀತಿ ಇದ್ದರೂ ಅದರಲ್ಲಿ ತೊಂದರೆ ಆಗಿಲ್ಲ; ಆದರೆ ಕಾರ್ಮಿಕ ವರ್ಗದ ವಿಚಾರದಲ್ಲಿ ಒಂದು ವಿಚಾರ ತಿಳಿದುಕೊಳ್ಳಬೇಕಾಗಿದೆ; ಅದು ಏನೆಂದರೆ ಇದು ಕೇವಲ ಒಂದು ವರ್ಷದ ಸಾಧನೆ ಏನಿದೆ ಆ ಸಾಧನೆಯ ಮೂಲಕ ಕಾರ್ಮಿಕರ ನೀತಿ ಯಾವ ರೀತಿ ಬದಲಾವಣೆಯಾಗಿದೆ ಎಂಬುದನ್ನು ಕಾಣುವ ಸ್ಥಿತಿಯಲ್ಲಿಯೂ ಸಹ ಬಜೆಟ್ ಮಾಡಿಲ್ಲ. ನಮ್ಮ ದೇಶದಲ್ಲಿ ಕಾರ್ಮಿಕರು ಒಂದು ದೊಡ್ಡ ಪ್ರಮಾಣದಲ್ಲಿರುವುದರಿಂದ ಇಲ್ಲಿ 'ಕಾರ್ಮಿಕವರ್ಗನೇ ಆಗಿದೆ. ಈ ಕಾರ್ಮಿಕ ವರ್ಗಕ್ಕೆ ಸರ್ಕಾರ' ನಾವು ಸೋಷಿಯಾಲಿಸಂನ್ನು ಜಾರಿಗೆ ತರುತ್ತೇವೆ ಎಂದು ಕೊಟ್ಟಂಥ ಭರವಸೆ ಏನಿದೆ ಈ ಭರವಸೆಯನ್ನು ಈಡೇರಿಸುವ ವಿಚಾರದಲ್ಲಿ ಅವರು ಸಂಗ್ನರಾಗಿದ್ದಾರೆಯೋ ಸರ್ಕಾರದವರು ಕಾರ್ಮಿಕವರ್ಗದವರ ವಿಚಾರದಲ್ಲಿ ಕೇವಲ ಒಂದು ಇಂಕ್ರಿಮೆಂಟಲ್ ಬಜೆಟ್ ಎಂದು ಹೇಳಿಕೊಂಡು ಹೋದರೆ ಸಾಲದು: ಸರ್ಕಾರದವರು ಸಮಾಜವಾದವನ್ನು ಯಾವರೀತಿಯಲ್ಲಿ ತೆಗೆದುಕೊಂಡು ಬರುತ್ತಿದ್ದಾರೆ ಎಂಬುದನ್ನು, ಅದರಲ್ಲಿ ಸೂಚಿಸಬೇಕಾಗಿತ್ತು. ಆದರೆ ಅವರು ಅದನ್ನು ಸೂಚಿಸಿಲ್ಲ ಎಂದು ನಾನು ಹೇಳಲಿಚ್ಛಿಸುತ್ತೇನೆ. ಎಮರ್‌ಜೆನ್ಸಿ ಕಾಲದಲ್ಲಿ ನಮ್ಮ ಸಂವಿಧಾನಕ್ಕೆ ಒಂದು ತಿದ್ದುಪಡಿಯನ್ನು ತಂದರು. ಇದು ೪೨ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್; ಇದರಲ್ಲಿ ನಮ್ಮ ಒಂದು ಸಾವರಿನ್ ಡೆಮಾಕ್ರಟಿಕ್ ರಿಪಬ್ಲಿಕ್ ಎಂದು ಏನಿತ್ತು ಇದಕ್ಕೆ ಸಾವರಿನ್ ಸೋಷಿಯಾಲಿಸ್ಟಿಕ್ ಸೆಕ್ಯುಲರ್ ಡೆಮಾಕ್ರೆಟಿಕ್ ರಿಪಬ್ಲಿಕ್ ಎಂದು ತಿದ್ದುಪಡಿ ಬಂತು. ಈ ಒಂದು ತಿದ್ದುಪಡಿಯನ್ನು ಕೇವಲ ಮಾತಿನಲ್ಲಿ ಮಾತ್ರ ಮಾಡಿದ್ದರಿಂದ ನಮ್ಮ ಸಂವಿಧಾನ ಹಾಗೂ ನಮ್ಮ ರಾಷ್ಟ್ರ ನಮ್ಮ ರಾಜ್ಯ ಸೋಷಿಯಾಲಿಸಂದಾರಿಯಲ್ಲಿ ಹೋಗಿದೆ ಎಂದು ಯಾರೂ ಹೇಳುವ ಹಾಗೆ ಇಲ್ಲ. ಈ ಸೋಷಿಯಾಲಿಸಂ ಪದದ ಅರ್ಥವನ್ನು ಕಾರ್ಯಗತ ಮಾಡಬೇಕು. ಅದಕ್ಕೆ ಒಂದು ರೂಪವನ್ನು ಕೊಡಬೇಕು. ಈ ವಿಚಾರದಲ್ಲಿ ಕಾರ್ಮಿಕರ ಧೋರಣೆ ಏನಿದೆ, ಲೇಬರ್ ಪಾಲಿಸಿ ಏನಿದೆ ಇದಕ್ಕೆ ಸರ್ಕಾರದವರು ಒಂದು ಇಂಡೆಕ್ಸ್ ಆಗಿರಬೇಕು. It should be the index of the Government to implement socialist policies. It should also reflect the Government's faith in Socialism. ಆದರೆ ನಾವು ಈಗ ಈ ಬಜೆಟ್‌ನಲ್ಲಿ ಕಾಣುವುದಾದರೂ ಏನು ಎಂದರೆ ನನ್ನ ಅಭಿಪ್ರಾಯದಲ್ಲಿ ಕಾರ್ಮಿಕವರ್ಗದವರ ಬಗ್ಗೆ ಸರ್ಕಾರಕ್ಕೆ ಯಾವ ನಂಬಿಕೆಯೂ ಇಲ್ಲ ಎನ್ನತಕ್ಕಂಥಾದ್ದು ಕಂಡುಬರುತ್ತಾ ಇದೆ. ಅವರು ಏನು ವಾರ್ಷಿಕ ವರದಿಯನ್ನು ಕೊಟ್ಟಿದ್ದಾರೆ ಅದರ ಆಧಾರದಮೇಲೆ ನಾನು ಅದನ್ನು ತೋರಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ೧೯೭೭-೭೮ನೇ ಇಸವಿಯ ವರದಿಯ ೪ನೇ ಪುಟದಲ್ಲಿ ಈ ರೀತಿ ಇದೆ,--"Consequent upon the liting of the emergency and amendment to the payment of Bonus Act, a number of agitations, mostly demanding bonus, characterised the labour situation. However the situation was well under control due to timely

intervention of the State and Central Authorities.'' ಇದರೊಳಗೆ ಎಮರ್‌ಜೆನ್ಸಿ ವಿಚಾರವನ್ನು ಹೇಳಿದ್ದರಿಂದ ಎಮರ್‌ಜೆನ್ಸಿ ಕಾಲದಲ್ಲಿ ಕೂಡ ಸರ್ಕಾರಕ್ಕೆ ಯಾವತರದ ಧೋರಣೆ ಇತ್ತು ಎಂಬುದನ್ನು ನೋಡಬೇಕಾದರೆ ಹಿಂದಿನ ಎರಡು ವರ್ಷಗಳ ಅನ್ಯುಯಲ್ ರಿಪೋರ್ಟನ್ನು ನೋಡಬೇಕಾಗಿದೆ. ಇನ್ನು ೧೯೭೬-೭೭ನೇ ಇಸವಿಯ ವರದಿಯಲ್ಲಿ ಈ ರೀತಿ ಇದೆ· ''As a result of the emergency and on accoun of t mely intervention of the departmental Officers, the labour situa i n during the year improved remarkably'' ಇದು ನನ್ನ ಅಭಿಪ್ರಾಯದಲ್ಲಿ ಷಾಕಿಂಗ್ ಸ್ಟೇಟ್‌ಮೆಂಟ್ ಆಗಿದೆ. ಇದರಲ್ಲಿ as a result o' the emergency ಈ ರೀತಿ ಆಗಿದೆ ಎಂದು ಸಮರ್ಥಿಸಿದ್ದಾರೆ. ಇದು ಬಹಳ ಶೋಚನೀಯವಾದ ವಿಚಾರ. ಇದಕ್ಕಿಂತ ಹಿಂದಿನವರ್ಷದ್ದು ಅಂದರೆ ೧೯೭೫-೭೬ನೇ ಇಸವಿಯ ವರದಿಯಲ್ಲಿ ಈ ರೀತಿ ಹೇಳಿದ್ದಾರೆ.—''As a result of the Emergency and as well as the effective dealings of t e industrial relations through the machinery of the Department the year 1975 may be marked as the most peaceful year of labour situation.''

ಹೀಗೆಂದಮೇಲೆ ಸರ್ಕಾರಕ್ಕೆ ಬಹುಷಃ ಆರ್ಗನೈಸ್ಡ್ ವರ್ಕಿಂಗ್ ಕ್ಲಾಸ್ ಬಗ್ಗೆ ಯಾವರೀತಿಯಲ್ಲಿ ಅವರ ಹತ್ತಿರ ಸಂಪರ್ಕವನ್ನು ಬೆಳೆಸಿಕೊಳ್ಳಬೇಕೆಂದು ಇಷ್ಟ ಎಂದರೆ They want to d al with the working class wi h a stick. ಅವರ ಹತ್ತಿರ ಸೌಹಾರ್ದದಿಂದ ಇರಬೇಕೆಂಬ ಇಷ್ಟ ಸರ್ಕಾರಕ್ಕೆ ಇಲ್ಲ. ಸರ್ಕಾರದವರು ಎಮರ್‌ಜೆನ್ಸಿ ಕಾಲದಲ್ಲಿ ತಮ್ಮ ಅಧಿಕಾರವನ್ನು, ತಮ್ಮ ಡಿಕ್ಟೇಟೋರಿಯಲ್ ಪವರನ್ನು ಲಂಗುಲಗಾಮು ಇಲ್ಲದೆ ಯಾವರೀತಿ ದುರುಪಯೋಗ ಮಾಡಿದರೋ ಅದೇ ರೀತಿಯಲ್ಲಿ ಈ ಕಾರ್ಮಿಕವರ್ಗದವರ ಮೇಲೂ ಕೂಡ ಅವರನ್ನು ಹತೋಟಿಯಲ್ಲಿ ಇಡುವಂಥ, ಅವರನ್ನು ಒಂದು ಕಂಟ್ರೋಲ್‌ನಲ್ಲಿ ಇಡುವಂಥ ಒಂದು ಮನೋವೃತ್ತಿಯನ್ನು ಅವರು ತೋರಿದರು. ಕಾರ್ಮಿಕವರ್ಗದವರು ಚಳುವಳಿ ಮೂಲಕ ಅವರ ಹಕ್ಕುಗಳನ್ನಲ್ಲದೆ ಎಲ್ಲಾ ಜನರ ವ್ಯಕ್ತಿಸ್ವಾತಂತ್ರವನ್ನು ಅಥವಾ ಮಾನವೀಯ ಸ್ವಾತಂತ್ರವನ್ನು ಕಾಪಾಡತಕ್ಕಂಥ ಜನರು ಅವರು. ಈ ಕಾರ್ಮಿಕವರ್ಗದವರು ಸೋಷಿಯಾಲಿಸಂನ್ನು ಬೆಂಬಲಿಸುತ್ತಾರೆ, ಅದಕ್ಕೆ ನಾವು ಸಹಾಯ ಮಾಡಬೇಕೆಂಬ ಅಭಿಪ್ರಾಯವನ್ನು ಸರ್ಕಾರದವರು ಇಟ್ಟುಕೊಳ್ಳದೆ ಎಮರ್‌ಜೆನ್ಸಿ ಮೂಲಕ ಅವರನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಂಡರೆ ಮಾತ್ರ ಅವರು ಒಳ್ಳೆಯರೀತಿಯಲ್ಲಿ ವರ್ತಿಸುತ್ತಾರೆ ಎನ್ನತಕ್ಕಂಥ ಮನೋಭಾವನೆಯುಳ್ಳವರಾಗಿದ್ದರು. In a nutshell that is the m ntality of the Government. ಇದನ್ನು ನಾವು ಫಾಸಿಸ್ಟ್ ಮೆಂಟಾಲಿಟಿ ಎಂದು ಹೇಳಬೇಕಾಗಿದೆ. Hitler has used the same language at one time or the another. ಈ ಒಂದು ಮನೋವೃತ್ತಿ ಬದಲಾವಣೆಯಾಗ ಬೇಕು ; ಈ ಒಂದು ಅಭಿಪ್ರಾಯ ಬದಲಾಯಿಸಬೇಕು. ಎಮರ್‌ಜೆನ್ಸಿ ಕಾಲದಲ್ಲಿ under one rule of another without any reason or with reason perhaps ಅನೇಕರು ಸರ್ಕಾರಿ ವಲಯದಲ್ಲಿರತಕ್ಕ ಮತ್ತು ಖಾಸಗೀ ವಲಯದಲ್ಲಿರತಕ್ಕ ನೌಕರರು ಅವರ ಕೆಲಸಗಳನ್ನು ಕಳೆದುಕೊಂಡಿದ್ದಾರೆ.

ಶ್ರೀ ಎಸ್. ವಿ. ನಾಯಕ್.—ಈಗಿನ ಕೇಂದ್ರಸರ್ಕಾರದವರು ರಾಜ್ಯಸರ್ಕಾರಗಳಿಗೆ ಇದರಲ್ಲಿ ಒಂದು ಮಾದರಿಯನ್ನು ಹಾಕಿಕೊಡಬೇಕಾಗಿದೆ. ಅವರ ನೀತಿ ಏನು ಎಂಬುದರ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ನಿಮಗೆ ಅವಕಾಶ ಬಂದಾಗ ಆ ತರಹ ಮಾತನಾಡಿ. ಈಗ ಕೇಂದ್ರಸರ್ಕಾರದವರು ಯಾವರೀತಿಯಲ್ಲಿ ನಡೆದುಕೊಂಡು ಬಂದಿದ್ದಾರೆ ಎಂಬುದನ್ನು ಹೋಲಿಸಿ ನೋಡಿದರೆ ಬಹುಷಃ ಕೇಂದ್ರಸರ್ಕಾರ ರಾಜ್ಯಸರ್ಕಾರಗಳಿಗೆ ಬಹಳ ರೀತಿಯಲ್ಲಿ ಮಾದರಿಯಾಗಿದ್ದಾರೆ ಎಂದು ನಾನು ಹೇಳಬಲ್ಲೆ.

ಶ್ರೀ ಎಸ್. ವಿ. ನಾಯಕ್.—ಅವರ ನೀತಿ ಏನು ಎಂಬುದನ್ನು ಹೇಳಿ.

ಅಧ್ಯಕ್ಷರು.—ಇದಕ್ಕೆ ಮಾನ್ಯ ಸದಸ್ಯರು ಉತ್ತರ ಕೊಡಬೇಕಾದ್ದು ಇಲ್ಲ. Let him speak. When you have got your chance, you can speak The Hon'ble Minister is there to reply.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್,—ಆದರಿಂದಾಗಿ ಈ ಒಂದು ಕಾರ್ಮಿಕರು ಆವತ್ತಿನವರೆಗೂ ತಮ್ಮ ನೌಕರಿಯನ್ನು ವಾಪಸ್ಸು ಪಡೆದುಕೊಂಡಿಲ್ಲ. ಕೇಂದ್ರಸರ್ಕಾರದವರು ಅವರಿಗೆಲ್ಲ ಪುನಃ ಕೆಲಸ ಕೊಡುವಂತೆ ರಾಜ್ಯಸರ್ಕಾರಗಳಿಗೆ ಆದೇಶ ಕೊಟ್ಟಿದ್ದಾರೆ. ಅದರ ಬಗ್ಗೆ ಆಸಕ್ತಿ ತೋರಿಸಿ ಸರ್ಕಾರದ ಮಟ್ಟದಲ್ಲಾಗಲೀ, ಮಾನ್ಯ ಮಂತ್ರಿಗಳ ಮಟ್ಟದಲ್ಲಾಗಲೀ ಅಥವಾ ಲೇಬರ್ ಡಿಪಾರ್ಟ್‌ಮೆಂಟ್ ಆಗಲೀ ಇದ್ದರ ಬಗ್ಗೆ ಸಾಕಷ್ಟು ಕೆಲಸಗಳನ್ನು ಮಾಡಿಲ್ಲ ಎಂದು ನಾನು ಹೇಳಬಯಸುತ್ತೇನೆ ಸರ್ಕಾರದವರು ಈ ವಿಚಾರದಲ್ಲಿ ಆಸಕ್ತಿಯುಳ್ಳವರಾಗಿದ್ದರೆ ಸರ್ಕಾರಿ ಮತ್ತು ಖಾಸಗೀ ವಲಯದಲ್ಲಿ ಕೆಲಸ ಕಳೆದುಕೊಂಡಿರ ತಕ್ಕಂಥ ಕಾರ್ಮಿಕ ನೌಕರರನ್ನು ಪುನಃ ಕೆಲಸಕ್ಕೆ ಕರೆದುಕೊಳ್ಳಬೇಕು ಎಂದು ಹೇಳುತ್ತೇನೆ. ಎಮರ್‌ಜೆನ್ಸಿ ಕಾಲದಲ್ಲಿ ಅಧಿಕಾರಿಗಳಲ್ಲಿ ಏನೊಂದು ಮನೋವೃತ್ತಿ ಬೆಳೆಯಿತು ಅದನ್ನು ಹೋಗಲಾಡಿಸಲು ಒಂದು ಹೆಜ್ಜೆ ಮುಂದೆ ಇಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕಾರ್ಮಿಕ ಇಲಾಖೆಯ ಬಗ್ಗೆ ವಿಚಾರ ಮಾಡುವುದಾದರೆ ಈ ಇಲಾಖೆಗೆ ಬಡ್ಜೆಟ್‌ನಲ್ಲಿ ಇಟ್ಟುಕೊಂಡಂಥ ಹಣವನ್ನು ನೋಡಿದರೆ ಅದು ತೀರ ಕಡಿಮೆಯಾಗಿದೆ. ಈ ಒಂದು ದೊಡ್ಡ ಇಲಾಖೆಗೆ ಕೇವಲ ೩ ಕೋಟಿ ೧೭ ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟುಕೊಂಡಿದ್ದಾರೆ. ೧೯೭೪ನೇ ಇಸವಿಯಲ್ಲಿ ನನಗೆ ತಿಳಿದಹಾಗೆ ೨ ಕೋಟಿ ೮೯ ಲಕ್ಷ ರೂಪಾಯಿಗಳನ್ನು ಈ ಇಲಾಖೆಗಾಗಿ ಇಟ್ಟುಕೊಂಡಿದ್ದರು. ಅದು ಸಹ ಕಡಿಮೆ ಎಂದು ಅನೇಕ ಮಾನ್ಯಸದಸ್ಯರು ಹೇಳಿದ್ದಾರೆ. ಈ ವರ್ಷ ಈ ಡಿಪಾರ್ಟ್‌ಮೆಂಟಿಗೆ ೩ ಕೋಟಿ ೧೭ ಲಕ್ಷ ರೂಪಾಯಿಗಳಷ್ಟು ಹಣವನ್ನು ಅಲ್ಪಪ್ರಮಾಣದಲ್ಲಿ ಕೊಟ್ಟಿರುವುದಕ್ಕೆ ಕಾರಣ ಏನೆಂದರೆ ಈ ಡಿಪಾರ್ಟ್‌ಮೆಂಟ್ ಸರಿಯಾದ ರೀತಿಯಲ್ಲಿ ಬೆಳೆಯದೇ ಇರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಆಮೇಲೆ ೧೯೭೪–೭೫ನೇ ಇಸವಿಯಲ್ಲಿ ಇಂತಹ ಒಂದು ದೊಡ್ಡ ಸಂಸ್ಥೆಯಲ್ಲಿ ಕೇವಲ ೭೮ ಲೇಬರ್ ಇನ್ಸ್‌ಪೆಕ್ಟರ್ಸ್ ಇದ್ದರು. ಈ ಸಂಖ್ಯೆ ಕಡಿಮೆ ಎಂದು ಹೇಳಬಹುದು. ಒಟ್ಟು ೮ ಲಕ್ಷ ಜನ ಕಾರ್ಮಿಕರು ಇರತಕ್ಕಂಥ ಈ ರಾಜ್ಯದಲ್ಲಿ ಕೇವಲ ೭೮ ಜನ ಲೇಬರ್ ಇನ್ಸ್‌ಪೆಕ್ಟರ್ ಇದ್ದಾರೆ ಎಂದರೆ ಈ ಒಂದು ಸಂಖ್ಯೆ ತೀರ ಕಡಿಮೆ ಎನಿಸುತ್ತದೆ. ಈ ವರ್ಷದಲ್ಲಿ ೭೯ ಜನ ಲೇಬರ್ ಇನ್ಸ್‌ಪೆಕ್ಟರ್ಸ್ ಇದ್ದಾರೆ. ಈ ೪ ವರ್ಷಗಳಲ್ಲಿ ಒಬ್ಬರ ಸಂಖ್ಯೆ ಜಾಸ್ತಿಯಾಗಿದೆ. ಈ ಕಾರ್ಖಾನೆಯ ಡೆಫನೆಷನ್ ಬದಲಾವಣೆ ಆದನಂತರ ನೌಕರರ ಸಂಖ್ಯೆ ೫ ಸಾವಿರ ಇದ್ದದ್ದು ಈಗ ೫೦ ಸಾವಿರಕ್ಕೆ ಬಂದದ್ದರಿಂದ ಇದು ಡಬಲ್ ಆಗಿದೆ. ಆಮೇಲೆ ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್ ಮತ್ತು ಇನ್ಸ್‌ಪೆಕ್ಟರ್ ಆಫ್ ಬಾಯ್ಲರ್ಸ್ ಸಂಖ್ಯೆ ಕಳೆದ ನಾಲ್ಕೈದು ವರ್ಷಗಳಿಂದ ಆದೇ ಸಂಖ್ಯೆಯಲ್ಲಿ ಇದೆ.

There are 4 Inspectors of Factories and 4 Inspectors of Boilers ಎಂದು ಹೇಳಿ ಆ ಒಂದು ವಿಷಯವನ್ನು ತಿಳಿಸಬೇಕಾಗಿದೆ. ಇದರಿಂದ ಕಾರ್ಮಿಕರಿಗೆ ಸರಿಯಾದ ರೀತಿಯಲ್ಲಿ ಉಪಯೋಗ ಸಿಗುತ್ತಿಲ್ಲ. ಇದರ ಬಗ್ಗೆ ಅನೇಕ ಕಾರಣಗಳಿವೆ. ಇದನ್ನು ಪರಿಶೀಲಿಸಬೇಕಾದ ಈ ವಿಚಾರದಲ್ಲಿ ಬಹುಶಃ ಇಲಾಖೆಯವರು ನಿರುತ್ಸಾಹರಾಗಿದ್ದಾರೆ. ಅವರ ಬಗ್ಗೆ ಮೂಕ ಪ್ರೇಕ್ಷಕರಾಗಿದ್ದಾರೆಂದು ನಾನು ಹೇಳಬೇಕಾಗಿದೆ. ಅವರು ಮಾಡುವಂತಹ ಕೆಲಸ ಸಾಕಷ್ಟು ಪರಿಣಾಮಕಾರಿಯಾಗಿ ಆಗುತ್ತಿಲ್ಲ. ಉದಾಹರಣೆಗೆ ಲಾಕೌಟ್ ಮತ್ತು ಸ್ಟ್ರೈಕ್ಸ್. To prevent strikes and lockouts. ಮೊದಲನೆ ಪ್ರಶ್ನೆ ಸ್ಟ್ರೈಕ್ ಏಕೆ ಆಗಬೇಕು? ಲಾಕೌಟ್ ಏಕೆ ಆಗಬೇಕು? ಪ್ರತಿಯೊಬ್ಬರಿಗೂ ಸಮಾನ ಅನುಕೂಲ ಸಿಗುವುದಕ್ಕಾಗಿ ಈ ರೀತಿಯ ಸ್ಟ್ರೈಕ್ ಆಗುತ್ತವೆ. ಅದೇ ರೀತಿ ಇನ್ನು ಅನೇಕ ರೀತಿಯ ಕುಂದು ಕೊರತೆಗಳನ್ನೂ ಕ್ರೋಢೀಕರಿಸಿಕೊಂಡರೂ ಕೂಡ ಸರಿಯಾದ ಸಮಯದಲ್ಲಿ ಕಾರ್ಮಿಕರಿಗೆ ಸಹಾಯ ಸಿಗುವುದಿಲ್ಲ. ಬಹಳ ವಿಳಂಬ ಮಾಡುತ್ತಾರೆ. ಅವರಿಗೆ ಸರಿಯಾದ ಪ್ರಮೋಷನ್ ಇಲ್ಲ. ಅನಾವಶ್ಯಕವಾಗಿ ಅವರನ್ನು ವರ್ಗ ಮಾಡುತ್ತಾರೆ. ಅಂದರೆ ಒಂದು ಸಂಸ್ಥೆಯಿಂದ ಇನ್ನೊಂದು ಸಂಸ್ಥೆಗೆ ವರ್ಗ ಮಾಡುತ್ತಾರೆ. ಹೀಗೆ ನಾನಾ ರೀತಿಯಲ್ಲಿ ಕಾರ್ಮಿಕರಿಗೆ ತೊಂದರೆಗಳಾಗುತ್ತವೆ. ಇದರಿಂದ ಕಾರ್ಮಿಕರು ಅಸಮಾಧಾನಗೊಂಡು, ಅಶುದ್ಧ ವಾತಾವರಣ ನಿರ್ಮಾಣವಾಗಿ ಘರ್ಷಣೆಗೆ ಅವಕಾಶವಾಗುತ್ತದೆ. ಸರಿಯಾದ ಸಮಯದಲ್ಲಿ ಕಾರ್ಮಿಕ ಇಲಾಖೆಯವರು ಇಂತಹ ವಿಚಾರದಲ್ಲಿ ಆಸಕ್ತಿ ತೋರುವುದಿಲ್ಲ. ಅವರ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದ್ದೇ ಆದರೆ ಬಹುಮಟ್ಟಿಗೆ ಆಗುತ್ತಿರುವ ಸ್ಟ್ರೈಕ್ ಹಾಗೂ ಲಾಕೌಟ್‌ಗಳು ಕಡಿಮೆಯಾಗಬಹುದೆಂದು ನನ್ನ ಅಭಿಪ್ರಾಯ. ಸ್ಟ್ರೈಕ್ ಆಗುವುದರಿಂದ ಲಾಸಾಗುತ್ತದೆ ನಿಜ. ತುರ್ತು ಪರಿಸ್ಥಿತಿ ಇದ್ದಾಗ ಈ ರೀತಿಯ ಸ್ಟ್ರೈಕ್ ಮತ್ತು ಲಾಕೌಟ್ಸ್‌ಗಳು ಕಡಿಮೆಯಾಗಿತ್ತು ಅಂದರೆ ಅದು ಭಯದಿಂದ ಕಡಿಮೆಯಾಗಿತ್ತೆಂದು ನಾವೆಲ್ಲರೂ ತಿಳಿದುಕೊಳ್ಳಬೇಕಾಗಿದೆ. ಪುನಃ ಹೆಚ್ಚಾಗಿದೆ ಎಂಬುದನ್ನು ನಿಮ್ಮ ವರದಿಯಲ್ಲೇ ಹೇಳಿದ್ದೀರಿ. ತಾವೇ ಹೇಳಿದಹಾಗೆ ಬೋನಸ್ ಬಗ್ಗೆ ಅನೇಕ ಸ್ಟ್ರೈಕ್ಸ್‌ಗಳು ಆಗುತ್ತಿವೆ. ಕಳೆದ ವರ್ಷ ಸುಮಾರು ೪,೧೪,೦೦೦ ಮ್ಯಾನ್‌ಡೇಸ್ ಲಾಸಾಗಿದೆ. ಇದರಿಂದ ಎಷ್ಟು ಸ್ಟ್ರೈಕ್‌ಗಳು ಆಗಿವೆ ಎಂಬ

ಕ್ಲಿಯರ್ ಪಿಚ್ಚರ್ ಗೊತ್ತಾಗುವುದಿಲ್ಲ. What is the percentage of the total man-days lost? ಅದನ್ನು ನಿಮ್ಮ ಇಲಾಖೆಯ ಬೇಡಿಕೆಯ ಮೇಲೆ ನಮಗೆ ಏನು ವಿವರವನ್ನು ಒದಗಿಸಿದ್ದೀರಿ ಅದರಲ್ಲಿ ಇದನ್ನೂ ತಿಳಿಸಿದ್ದರೆ ಇವೆರಡನ್ನೂ ಕಂಪೇರ್ ಮಾಡಿ ಹೇಳಬಹುದಿತ್ತು. ನಮ್ಮ ರಾಜ್ಯದಲ್ಲಿ ಕಾರ್ಮಿಕರ ಫ್ಯಾಕ್ಟರಿಯ ವಾತಾವರಣ ಹೇಗಿದೆ ಎಂಬುದನ್ನು ನಾವು ಹೇಳುವುದಕ್ಕೆ ಸಾಧ್ಯವಾಗುತ್ತದೆ. ತಮ್ಮ ವರದಿಯ ಪ್ರಕಾರ ನಾವು ಏನೂ ಹೇಳುವ ಹಾಗೆ ಇಲ್ಲ. ಈ ವಿಚಾರಗಳಲ್ಲಿ ಕಾರ್ಮಿಕ ಇಲಾಖೆಯೂ ಕೂಡ ಆಸಕ್ತಿ ತೋರಿಸಬೇಕಾಗಿದೆ. ಇದರ ಬಗ್ಗೆ ನನ್ನ ಸಲಹೆಯೇನೆಂದರೆ wage level must be standardised. ಇವತ್ತು ಅನೇಕ ಜಾಗದಲ್ಲಿ ಚಿಕ್ಕಪುಟ್ಟ ಕಾರ್ಖಾನೆಗಳಲ್ಲಿ ಹೆಚ್ಚಾಗಿ ಕನ್‌ಸಾಲಿಡೇಟೆಡ್ ವೇಜಸ್ ಕೊಡುತ್ತಿದ್ದಾರೆ. ಅದೂ ಬಹಳ ಕಡಿಮೆ ದರದಲ್ಲಿ ಕೊಡುತ್ತಿದ್ದಾರೆ. ಅಲ್ಲಿ ಡಿ.ಎ. ನೀತಿಯೇ ಇಲ್ಲ. ಡಿ.ಎ.ಯನ್ನು ಕಡ್ಡಾಯವಾಗಿ ಕಾರ್ಮಿಕರಿಗೆ ಕೊಡಬೇಕು. Under Government order every employees must be paid Dearness Allowance. ಅಲ್ಲಿ ಒಂದು ಅಗ್ರಿಮೆಂಟ್ ಆಗಿರುತ್ತದೆ. ಒಂದು ವರ್ಷದೊಳಗೆ ಕಾಸ್ಟ್ ಆಫ್ ಲಿವಿಂಗ್ ಡಬಲ್ ಆಗಿರುತ್ತದೆ. ಇವರ ವೇಜಸ್ ಆ ಲೆವೆಲ್ಲಿನಲ್ಲಿರಬೇಕು. ಅನೇಕ ಖಾಸಗಿ ಕಾರ್ಖಾನೆಯವರೊಂದಿಗೆ ವೇಜಸ್ ಅಗ್ರಿಮೆಂಟ್ ಆಗಿದೆ ಹೆಚ್ಚಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳುತ್ತಾರೆ. ಆದರೆ ಕಾಸ್ಟ್ ಆಫ್ ಲಿವಿಂಗ್ ಜಾಸ್ತಿ ಇರುತ್ತದೆ. ನಿಮಗೆ ಡಿ.ಎ. ಇಲ್ಲವೆಂದು ಹೇಳುತ್ತಾರೆ. ಇದರಿಂದ ಮೆಟಲ್ ಲ್ಯಾಂಪ್ ವರ್ಕ್ಸ್‌ನಲ್ಲಿ ಎರಡು ಸಲ ಲಾಕೌಟ್ ಆಯಿತು. ಎರಡು ಸಲ ಸ್ಟ್ರೈಕ್ ನಡೆಯಿತು. ಅಲ್ಲಿ ಒಳ್ಳೆಯ ಆದಾಯ ಇದ್ದರೂ ಕೂಡ ಕಾರ್ಮಿಕರಿಗೆ ಕನ್‌ಸಾಲಿಡೇಟೆಡ್ ವೇಜಸ್ ಕೊಡುತ್ತಿದ್ದಾರೆ. ಅಲ್ಲಿ ಡಿ.ಎ. ಪದ್ಧತಿಯೇ ಇಲ್ಲ. ಅಲ್ಲಿ ಡಿ.ಎ. ಪದ್ಧತಿಯನ್ನು ಇಟ್ಟುಕೊಳ್ಳಬೇಕಾಗಿದೆ. ಈ ವಿಚಾರದಲ್ಲಿ ನನ್ನ ಅಭಿಪ್ರಾಯದಲ್ಲಿ ಸರ್ಕಾರದವರು ಹೊಸ ಮಾದರಿಯನ್ನು ಮಂಡಿಸಿದ್ದಾರೆ. ಅದಕ್ಕೆ ಬವಣೆ ಭತ್ಯ (ಹಾರ್ಡ್‌ಷಿಪ್ ಅಲೋಯೆನ್ಸ್) ಎಂಬುದಾಗಿ ಹೊಸ ಹೆಸರನ್ನು ಮಾಡಿ ಸ್ವಲ್ಪ ಗೊಂದಲ ಉಂಟಾಗಿದೆ. Why Government felt shy to call dearness allowance as dearness allowance. Why should they call it as hardship allowance? ಮತ್ತೆ ಓವರ್ ಟೈಂ ಬಗ್ಗೆ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯದ ವಿಚಾರದಲ್ಲಿ ಸರ್ಕಾರ ಸರಿಯಾದ ದಾಖಲೆಯನ್ನು ಮಾಲೀಕರ ಮುಂದೆ ಇಡುತ್ತಿಲ್ಲ. ಮಾಲೀಕರ ಮುಂದೆ ಸರಿಯಾದ ದಾಖಲೆಯನ್ನು ಸರ್ಕಾರದವರಿಗೆ ತಿಳಿಸಬೇಕು. ಇದು ಕಾರ್ಮಿಕರಿಗೆ ಸಿಕ್ಕುವ ಹಾಗೆ ಮಾಡಿದಲ್ಲಿ ಅನೇಕ ರೀತಿಯ ಸ್ಟ್ರೈಕ್ ಆಗುವ ಸಂದರ್ಭ ಕಡಿಮೆಯಾಗಬಹುದು. ಕಾನೂನು ಬಾಹಿರವಾಗಿ ಅಗ್ರಿಮೆಂಟನ್ನು ಮಾಡಿಕೊಂಡಿದ್ದರೆ ಅಂತಹ ಮಾಲೀಕರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬಹುದೆಂದು, ಕಾರ್ಮಿಕರ ಬಗ್ಗೆ ಅನುಕಂಪ ಇಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಚಿಕ್ಕ ಪುಟ್ಟ ಸಂಸ್ಥೆಗಳಲ್ಲಿ ಹೀಗೆ ಆಗಬಹುದು, ಕೆಲವು ಸಂಸ್ಥೆಗಳಲ್ಲಿ ಇಂತಹ ಒಂದು ಅಗ್ರಿಮೆಂಟ್ ಇರಬಹುದು. ಆದರೆ ಮಿನಿಮಮ್ ವೇಜಸ್‌ಗಿಂತ ಕಡಿಮೆ ವೇಜಸ್‌ನ ಅಗ್ರಿಮೆಂಟ್‌ಗೆ ಸಹಿ ಹಾಕಿಸಿಕೊಳ್ಳುತ್ತಿದ್ದಾರೆ. ಅಂತಹವುಗಳು ಬೆಂಗಳೂರಿನಲ್ಲೇ ಇವೆ. ಹೆಗ್ಡೆ ಮತ್ತು ಗೋಲೆ ಎಂಬ ಸಂಸ್ಥೆಯಲ್ಲಿ ೬೦ ರೂಪಾಯಿಗಳನ್ನು ಕನ್‌ಸಾಲಡೇಟ್ ಸ್ಯಾಲರಿ. ೨ ವರ್ಷ ಟ್ರೈನಿಂಗ್ ಮಾಡಬಹುದು. ಮತ್ತೆ ಎರಡು ವರ್ಷ ಆದಮೇಲೆ ಆತನನ್ನು ಪರ್ಮನೆಂಟ್ ಎಂಬುದಾಗಿ ತೆಗೆದುಕೊಳ್ಳುತ್ತಾರೆ. ಮಧ್ಯೆ ಆತನೇನಾದರೂ ಕೆಲಸವನ್ನು ಬಿಟ್ಟರೆ ಆತನು ತನ್ನ ಸರ್ವೀಸ್‌ನಲ್ಲಿ ತೆಗೆದುಕೊಂಡಿದ್ದಂತಹ ಪೂರ್ತಾ ಹಣವನ್ನು ವಾಪಸ್ಸು ಕಟ್ಟಬೇಕು. ಈ ರೀತಿ ಇದೆ. ಟ್ರೈನಿಂಗ್ ಒಂದು ವರ್ಷ ಮಾಡಿದರೆ ಆ ಟ್ರೈನಿಂಗ್ ಸಮಯದಲ್ಲಿ ತೆಗೆದುಕೊಂಡಿರುವಂತಹ ಸಂಬಳವನ್ನು ವಾಪಸ್ಸು ಕೊಡಬೇಕು ಇದು ನ್ಯಾಯ. ಮತ್ತು ೨ ವರ್ಷ ಕೆಲಸಮಾಡಿದರೂ ಟ್ರೈನಿಂಗ್ ಸಮಯದಲ್ಲಿ ತೆಗೆದುಕೊಂಡಿದ್ದಂತಹ ೨/೩ರಷ್ಟನ್ನು ವಾಪಸ್ಸು ಕೊಡಬೇಕು. ಆದರೆ ಎರಡು ವರ್ಷದ ಟ್ರೈನಿಂಗ್ ಪೀರಿಯಡ್ ಮತ್ತು ಸರ್ವೀಸ್ ಪೀರಿಯಡ್‌ನಲ್ಲಿ ತೆಗೆದುಕೊಂಡಿರುವಂತ ಸಂಬಳವನ್ನು ವಾಪಸ್ಸು ಕೊಡಬೇಕು. ಈ ರೀತಿಯ ಅಗ್ರಿಮೆಂಟ್ ಆಗಿದೆ. ಇದು ಕಾರ್ಮಿಕ ಇಲಾಖೆಯಲ್ಲಿ ರಿಜಿಸ್ಟರ್ ಕೂಡ ಆಗಿದೆ. ಇದಕ್ಕೆ ಯಾರು ಅವಕಾಶ ಕೊಟ್ಟರು? ಇಂತಹ ಮಾಲೀಕರನ್ನು ಏಕೆ ಇಲಾಖೆಯವರು ಕಂಟ್ರೋಲ್ ಮಾಡುತ್ತಿಲ್ಲವೋ ಅದು ಬಹಳ ಶೋಚನೀಯ ಪಡಬೇಕಾದ ವಿಚಾರ. ಮತ್ತೆ ಇತ್ತೀಚೆಗೆ ಬೆಂಗಳೂರಿನ ಸುತ್ತ ಮುತ್ತ ಇಂತಹ ಸಂಸ್ಥೆಗಳು ಜಾಸ್ತಿಯಾಗಿವೆ. ಇಂತಹ ಅನ್ಸಿಲರಿ ಯೂನಿಟ್ಸ್‌ಗಳಿವೆ. ಪಬ್ಲಿಕ್ ಸೆಕ್ಟಾರ್‌ಗೆ ಸಂಬಂಧಪಟ್ಟ ಮಾಲೀಕರು ಮದರ್ ಇಂಡಸ್ಟ್ರೀಸ್ ಅದರಲ್ಲಿರತಕ್ಕಂಥ ಸಂಬಂಧಿಕರು ಇವುಗಳನ್ನು ಇಟ್ಟುಕೊಂಡಿರುತ್ತಾರೆ. ಅಲ್ಲಿ ಬಹಳ ಕಡಿಮೆ ಸಂಬಳ. ಈ ರೀತಿ ಏಕೆ ಆಗುತ್ತಿದೆ ಎಂಬುದನ್ನು ನಾವು

ಕಾರ್ಮಿಕ ಇಲಾಖೆಯನ್ನು ಪ್ರಶ್ನಿಸಬೇಕಾಗಿದೆ. ಅವರಿಗೆ ಅಷ್ಟು ಸಂಬಳ ಕಡಿಮೆ ಕೊಡುತ್ತಿದ್ದಾರೆ. ತಮ್ಮ ಪಕ್ಷದ ೨೦ ಅಂಶದ ಕಾರ್ಯಕ್ರಮದ ಪ್ರಕಾರ ಮಿನಿಮಂ ವೇಜಸ್ ಎಂಬುದಾಗಿ ಏನು ಹೇಳುತ್ತೀರಿ. ಆದರೆ ಇಲ್ಲಿ ಕಡಿಮೆ ಸಂಬಳವನ್ನು ಕೊಟ್ಟು ಆ ಕಾರ್ಮಿಕನಿಂದ ಪೆನ್ಸಿಲ್‌ನಲ್ಲಿ ರುಜು ಹಾಕಿಸಿಕೊಂಡು ನಂತರ ಅದನ್ನು ಅಳಿಸಿ ಹೈಯರ್ ಸ್ಕ್ಯಾಲರಿಯನ್ನು ಲೆಕ್ಕದಗೆ ತೋರಿಸುತ್ತಾರೆ. ಇದು ಸರ್ಕಾರದ ಕಾನೂನು ಪ್ರಕಾರ ನಡೆಯಬೇಕೆಂದು ಏನಿದೆ ಅದರಂತೆ ಇದು ಸರಿ ಇರುತ್ತದೆ. ಆದರೆ ಆ ಕಾರ್ಮಿಕನ ಕೈಗೆ ಸಿಗುವ ಸಂಬಳ ಬಹಳ ಕಡಿಮೆ. ಆದ್ದರಿಂದ ಎಲ್ಲ ಕಾರ್ಮಿಕರೂ ಚೆಕ್ ಮೂಲಕ ಸಂಬಳವನ್ನು ಪಡೆಯುವುದಕ್ಕೆ ಇಷ್ಟಪಡುತ್ತಾರೆ. ಆದ್ದರಿಂದ ಚೆಕ್ ಮೂಲಕ ಅವರ ಸಂಬಳವನ್ನು ಕೊಡುವಹಾಗೆ ಕಾನೂನನ್ನು ಮಾಡಬೇಕೆಂದು ಹೇಳುತ್ತಿದ್ದೇನೆ. ಇದು ಕಾರ್ಮಿಕ ಇಲಾಖೆಯ ಮೂಲಕ ಜಾರಿಯಾಗಬೇಕು. Industrial relation, Labour relation this should be the job of the Labour Department. It has become the prerogative of the police department. ಎಲ್ಲ ವಿಚಾರದಲ್ಲೂ ಪೋಲೀಸ್ ಇಲಾಖೆ ಕೈಹಾಕುತ್ತಿದೆ. ತುರ್ತುಪರಿಸ್ಥಿತಿಯಲ್ಲಿ ಈ ರೀತಿ ಇತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಆದರೆ ಪೋಲೀಸ್ ಇಲಾಖೆಯವರು ಬದಲಾಗಿಲ್ಲ. ಐ.ಟಿ.ಐ.ನಲ್ಲಿ ೩೦ವರ್ಷಗಳ ಚರಿತ್ರೆಯಲ್ಲಿ ಯಾರೂ ಕಾರ್ಖಾನೆಯ ಒಳಗೆ ಹೋಗಿರಲಿಲ್ಲ. ಆದರೆ ೧೯೭೫ರಲ್ಲಿ ಪೋಲೀಸಿನವರು ಕಾರ್ಖಾನೆಯ ಒಳಗಡೆಗೆ ಹೋಗಿ ಅಲ್ಲಿ ಟಿಯರ್ ಗ್ಯಾಸ್ ಷೆಲ್‌ನ್ನು ಬರ್ಸ್ಟ್ ಮಾಡಿ ಕೆಲವು ಕಾರ್ಮಿಕರಿಗೆ ಗಾಯವಾಗಿ ಸುಮಾರು ೯೪ ಜನರು ಕಾರ್ಮಿಕರನ್ನು ಅಕ್ರಮವಾಗಿ ಜೈಲಿನಲ್ಲಿ ಒಂದು ವಾರ ಕಾಲ ಇಟ್ಟುಕೊಂಡಿದ್ದರು. ಅದು ಬಹುಶಃ ತುರ್ತು ಪರಿಸ್ಥಿತಿ ಕಾಲದಲ್ಲಿ ಆದದ್ದು. ಇವತ್ತು ಅನೇಕ ಕಾರ್ಖಾನೆಗಳಲ್ಲಿ ಅದರಲ್ಲೂ ಬೆಂಗಳೂರಿನ ಸುತ್ತಮುತ್ತಲಿರುವ ಅನೇಕ ಕಾರ್ಖಾನೆಗಳಲ್ಲಿ ಪೋಲೀಸರ ದಬ್ಬಾಳಿಕೆ ಜಾಸ್ತಿಯಾಗಿದೆ. ಅಲ್ಲಿ ಹೋಗಿ ಮಾಲೀಕರ ಪರವಾಗಿ ಕಾರ್ಮಿಕರ ವಿರುದ್ಧವಾಗಿ ಕ್ರಮ ತೆಗೆದುಕೊಳ್ಳುವುದು ಜಾಸ್ತಿಯಾಗಿದೆ. ಇಂತಹ ವಿಚಾರದಲ್ಲಿ ಕಾರ್ಮಿಕ ಇಲಾಖೆಯವರ ಹತ್ತಿರ ಹೋದರೆ ನಾವು ಏನು ಮಾಡುವ ಹಾಗೆ ಇಲ್ಲ. ಮಿನಿಸ್ಟರ್ ಹತ್ತಿರ ಹೋಗಿ ಎಂಬುದಾಗಿ ಹೇಳುತ್ತಾರೆ. ಸಾಧಾರಣವಾಗಿ ಆತನಿಗೆ ಹಕ್ಕು ಇದ್ದರೂ ಅದನ್ನು ಅವರು ಉಪಯೋಗಿಸುವುದಿಲ್ಲ. ಗಾರ್ಮೆಂಟ್ ವರ್ಕರ್ಸ್ ಬೆಂಗಳೂರಿನಲ್ಲಿದ್ದಾರೆ. The Garment workers are one of the most exploited workers.........

೪-೦೦ ಪಿ.ಎಂ.

ಇತ್ತೀಚೆಗೆ ಸರ್ಕಾರದಿಂದ ಮಿನಿಮಮ್ ವೇಜಸ್‌ನ್ನು ನಿಗದಿ ಮಾಡಿರುವ ಬಗ್ಗೆ ಒಂದು ನೋಟಿಫಿಕೇಷನ್ ಬಂದಿದೆ. ಅದರ ಪ್ರಕಾರ ೫ರೂ, ಕೂಲಿ ಕೊಡಬೇಕಾಗುತ್ತದೆ. ನಿಮ್ಮ ೨೦ ಪಾಯಿಂಟ ಪ್ರೋಗ್ರಾಮಿನ ಪ್ರಕಾರವಾದರೆ ೬-೭ ರೂ.ಗಳನ್ನು ಕೊಡಬೇಕಾಗುತ್ತದೆ. ಒಂದು ಕಾರ್ಖಾನೆಯಲ್ಲಿ ೨-೩ರೂ. ಕೂಲಿ ಕೊಡುತ್ತಿದ್ದ ಕಾರಣ ಅದನ್ನು ಹೆಚ್ಚು ಮಾಡಬೇಕೆಂದು ಕೇಳಿದರು. They are a group of sweated labour ; Even som five of six Muslim women n purdah were arrested by the police among others. Kamanis ನಲ್ಲಿ ಸುಮಾರು ೧೦೦ ಜನರನ್ನು ಅರೆಸ್ಟ್ ಮಾಡಿದ್ದಾರೆ. ಐ.ಟಿ.ಐ.ನಲ್ಲಿ ೪೦ ಮಹಿಳೆಯರನ್ನು ಮತ್ತು ೧೦೦ ಜನ ಗಂಡಸರನ್ನು ಒಂದೇ ದಿವಸದಲ್ಲಿ ಅರೆಸ್ಟ್ ಮಾಡಿದ್ದಾರೆ Bharath Fritz Co.,ಯಲ್ಲಿ ೪೦ ಕಾರ್ಮಿಕರನ್ನು ಅರೆಸ್ಟ್ ಮಾಡಿದ್ದಾರೆ ಇಲ್ಲೆಲ್ಲಾ ಕಾರ್ಮಿಕರು agitational approach ಮಾಡುತ್ತಿದ್ದರು. ಆದರೂ ಅರೆಸ್ಟ್ ಮಾಡಿದ್ದಾರೆ. ಇದರ ಜೊತೆಗೆ ಹೋಟೇಲ್ ಮಾಲೀಕರು ಹೇಳಿದರೆಂದು ಹೋಟೇಲ್ ಕಾರ್ಮಿಕರನ್ನು ಅರೆಸ್ಟ್ ಮಾಡುತ್ತಿದ್ದಾರೆ. ಕಾರ್ಮಿಕರು ಏನೂ ಮಾಡದಿದ್ದರೂ ಸಹ ಮಾಲೀಕರೇ ಗೊಂದಲ ಮಾಡುತ್ತಾರೆ, ಇವರು ಬೇಕಾಗಿಯೇ ನಷ್ಟವಾಗಿದೆ ಎಂದು ತೋರಿಸುತ್ತಾರೆ. ಆದನ್ನು ಕಾರ್ಮಿಕರ ಮೇಲೆ ಹಾಕುತ್ತಾರೆ. ಈ ಕಾರಣದಿಂದ ೧೪೦ ಜನ ಕಾರ್ಮಿಕರನ್ನು ಅರೆಸ್ಟ್ ಮಾಡಿ ಜೈಲಿನಲ್ಲಿಟ್ಟಿದ್ದಾರೆ. ಇವರ ಬಗ್ಗೆ ಸರ್ಕಾರದವರೇ ಆಗಲೀ, ಕಾರ್ಮಿಕ ಇಲಾಖೆಯವರೇ ಆಗಲೀ ಆಸಕ್ತಿ ತೋರಿಸುತ್ತಿಲ್ಲ. ಸ್ಟ್ರೈಕ್ ಮಾಡಿದರೆ ಅರೆಸ್ಟ್ ಮಾಡುತ್ತಾರೆ. ಹಂಗರ್-ಸ್ಟ್ರೈಕ್ ಮಾಡಿದರೂ ಸಹ ಅರೆಸ್ಟ್ ಮಾಡಿ ಆಸ್ಪತ್ರೆಗೆ ಅಡ್ಮಿಟ್ ಮಾಡುತ್ತಾರೆ. ಮಾಲೀಕರಾದವರು ಪೋಲೀಸರ ಸಹಾಯದಿಂದ ತಮ್ಮಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಅರೆಸ್ಟ್ ಮಾಡಿಸುತ್ತಾರೆ, ಈ ಬಗ್ಗೆ ಕಾರ್ಮಿಕ ಇಲಾಖೆಗೆ ತಿಳಿಸಿದಾಗ, ಅವರು ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ನಮಗೆ ಅಧಿಕಾರವಿಲ್ಲವೆಂದು ಹೇಳುತ್ತಾರೆ. ಕಾರ್ಮಿಕ ಇಲಾಖೆಗೆ ಈ ವಿಷಯದಲ್ಲಿ ಒಂದು ಮುಖ್ಯವಾದಂಥ ಪಾತ್ರವನ್ನು ಕೊಡಬೇಕು, ಇಲ್ಲದಿದ್ದರೆ ಕಾರ್ಮಿಕರು ಏನು ತಿಳಿದು

ಕೊಳ್ಳುತ್ತಾರೆಂದರೆ. ಸರ್ಕಾರದವರೇ ಉದ್ದೇಶಪೂರ್ವಕವಾಗಿ ಮಾಲೀಕರಿಗೆ ಸಹಾಯ ಮಾಡುತ್ತಿದ್ದಾರೆ, ಪೋಲೀಸಿನವರು ಕಾರ್ಖಾನೆಯೊಳಕ್ಕೆ ಹೋಗಲು ಬಿಡುತ್ತಿದ್ದಾರೆಂದು ಮತ್ತು ಮಂತ್ರಿಗಳ ಆದೇಶದ ಮೇರೆಗೆ ಪೋಲೀಸಿನವರು ಈ ರೀತಿ ವರ್ತಿಸುತ್ತಿದ್ದಾರೆಂದು ಕಾರ್ಮಿಕರು ಅನಾವಶ್ಯಕವಾಗಿ ಸಂದೇಹ ಪಡುತ್ತಾರೆ. ಇದನ್ನು ನನ್ನ ಒಂದು ಅನುಭವದಲ್ಲಿ ಹೇಳಬಹುದು. ಭಾರತ್ ಫ್ರೀಜ್ ಕಂಪನಿಯಲ್ಲಿ ಗಲಾಟೆಯಾದಾಗ ಅದರ ಮಾಲೀಕರನ್ನು ಮಾತುಕತೆ ನಡೆಸಲು ಲೇಬರ್ ಇಲಾಖೆಯವರು ಕರೆಸಿದಾಗ ಅವರು ಬರಲಿಲ್ಲ. ನಾನು ಈ ಕಂಪನಿಗೆ ಸಂಬಂಧಪಟ್ಟ ಕಾರ್ಮಿಕರ ಸಂಘಕ್ಕೆ ರಾಜಿನಾಮೆ ಕೊಟ್ಟಮೇಲೆ ಮುಖ್ಯಮಂತ್ರಿಗಳ ಸಂಬಂಧೀಕರು ಅದರ ಅಧ್ಯಕ್ಷರಾದರು. ಅವರ ಮನೆಗೆ ಈ ಕಂಪನಿಯ ಮಾಲೀಕರು ಮಾತುಕತೆನಡೆಸಲು ಹೋದರು ಲೇಬರ್ ಇಲಾಖೆಯವರು ಕರೆದಾಗ ಮಾತ್ರ ಬರಲಿಲ್ಲ. ಇಂತಹ ಮಾಲೀಕರ ಮೇಲೆ ಕ್ರಮ ಕೈಕೊಳ್ಳುವ ಹಕ್ಕು ಲೇಬರ್ ಇಲಾಖೆಗೆ ಇಲ್ಲ. ಇನ್ನು ಮುಂದೆಯೊದರೂ ಸಹ ಮಾಲೀಕರಾದವರು ಕನ್ಸಿಲಯೇಷನ್‌ಗೆ ಬರದಿದ್ದರೆ ಅಂತಹವರನ್ನು ಅರೆಸ್ಟ್ ಮಾಡಿಸುವಂತಹ ಹಕ್ಕನ್ನು ಈ ಇಲಾಖೆಗೆ ಕೊಡಬೇಕು. ಇದಕ್ಕೆ ಸೂಕ್ತವಾದ ತಿದ್ದುಪಡಿಯನ್ನು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟಿಗೆ ಮಾಡಬಹುದು.

ಇನ್ನು ಲೇಬರ್ ಕೋರ್ಟಿನಲ್ಲಿಯೇ ಅಗಲೀ. ಇಂಡಸ್ಟ್ರಿಯಲ್ ಟ್ರಿಬ್ಯುನಲ್ಸ್‌ನಲ್ಲಿಯೇ ಆಗಲೀ. ಕೇಸ್‌ಗಳು ಜಾಗ್ರತೆ ಇತ್ಯರ್ಥವಾಗುತ್ತಿಲ್ಲ. ಯಾವ ಸಮಯದಲ್ಲಿ ನೋಡಿದರೂ ಸಹ ೨ ಸಾವಿರ ಕೇಸ್‌ಗಳು ಪೆಂಡಿಂಗ್‌ನಲ್ಲಿರುತ್ತವೆ. ಇದಕ್ಕೆ ಕಾರಣವೇದರೆ, ಈ ಕೋರ್ಟುಗಳ ಸಂಖ್ಯೆ ಸಾಲದು. ಮತ್ತು ಪ್ರಿಸೈಡಿಂಗ್ ಆಫೀಸರ್ಸ್ ಪೋಸ್ಟ್ ಖಾಲಿ ಇದ್ದರೂ ಪೋಸ್ಟ್ ಮಾಡುತ್ತಿಲ್ಲ. ಯಾವಾಗ ಇಂಡಸ್ಟ್ರಿಗಳು ಜಾಸ್ತಿಯಾಗುತ್ತವೋ ಮತ್ತು ಕಾರ್ಮಿಕರ ಸಂಖ್ಯೆ ಜಾಸ್ತಿಯಾಗುತ್ತದೋ, ಆಗ ಈ ಕೋರ್ಟುಗಳ ಸಂಖ್ಯೆಯೂ ಜಾಸ್ತಿಯಾಗಬೇಕಾಗುತ್ತದೆ. ಮತ್ತು There is no separate judiciary for labour matters ; ಈಗ ಬೇರೆ ಕಡೆಗಳಿಂದ ಇಲ್ಲಿಗೆ ಪೋಸ್ಟ್ ಮಾಡುತ್ತೀರಿ. ಇದಕ್ಕೆ ಬದಲು separate cadre of Labour judiciary ಇರಬೇಕೆಂದು ಹೇಳುತ್ತೇನೆ. ಈಗ ಒಂದು ಲೇಬರ್ ಕೋರ್ಟಿದೆ. ಅದು ಸಾಲದು. ಹೆಚ್ಚು ಮಾಡಬೇಕು. ಮತ್ತು ಇದಕ್ಕೇ ಒಂದು ಸಪರೇಟ್ ಕೇಡರ್ ಇರಬೇಕು. Independent labour judiclary ಒಂದನ್ನು ನಿರ್ಮಾಣ ಮಾಡಬೇಕು. ಇದರಲ್ಲಿ ಯಾರು ಲೇಬರ್ ಇಲಾಖೆಯಲ್ಲಿ ಕೆಲಸ ಮಾಡಿ ಅನುಭವ ಪಡೆದಿರುತ್ತಾರೋ, ಲೇಬರ್ ಲಾ ವಿಚಾರದಲ್ಲಿ ಮಾಹಿತಿ ಪಡೆದಿರುತ್ತಾರೋ, ಲೇಬರ್ ವಿಚಾರವನ್ನು ತಿಳಿದು ಕೊಂಡಿರುತ್ತಾರೋ, ಬ್ಯಾಲೆನ್ಸ್‌ಷೀಟನ್ನು ಓದಿ ಅನುಭವ ಪಡೆದಿರುತ್ತಾರೋ, ಕಾರ್ಮಿಕರ ಸೈಕಾಲಜಿ ಯನ್ನು ತಿಳಿದುಕೊಂಡಿರುತ್ತಾರೋ, ಅಂತಹವರನ್ನು ಜಡ್ಜ್ ಆಗಿ ನೇಮಕ ಮಾಡಿದರೆ, ಅವರು ಕೇಸ್‌ಗಳನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿ ಮಾಡದೆ ಬೇರೆ ಕಡೆಯಿಂದ ಜಡ್ಜ್ ಗಳನ್ನು ಇಲ್ಲಿಗೆ ವರ್ಗ ಮಾಡಿದರೆ, ಅವರು ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ. ಆದಕಾರಣ Independent labour judiciary ಒಂದನ್ನು ನಿರ್ಮಾಣ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದರಿಂದ ಕೇಸ್‌ಗಳನ್ನು ಜಾಗ್ರತೆ ಇತ್ಯರ್ಥಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ತಾತ್ಕಾಲಕ್ಕೆ ಇನ್ನೊಂದು ಟ್ರಿಬ್ಯುನಲ್‌ನ್ನು ಟೆಂಪರರಿ ಬೇಸಿಸ್ ಮೇಲೆ ರಚನೆ ಮಾಡಿ ಪೆಂಡಿಂಗ್ ಇರತಕ್ಕಂಥ ಕೇಸ್‌ಗಳನ್ನೆಲ್ಲಾ ಇತ್ಯರ್ಥಪಡಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈ ಕಾರ್ಮಿಕ ಇಲಾಖೆಯಲ್ಲಿ ಇತ್ತೀಚೆಗೆ ಕಾರ್ಮಿಕರ ವಿವಾದದ ಬಗ್ಗೆ ಒಂದು ಹೊಸ ರೀತಿಯ ಧೋರಣೆಯನ್ನು ಅನುಸರಿಸುತ್ತಿರುವುದು ಕಂಡುಬಂದಿದೆ. ಏನೆಂದರೆ ಯಾವುದೇ ಒಂದು ವಿವಾದ ಸರ್ಕಾರದ ಮುಂದೆ ಬಂದಾಗ Not fit for reference ಎಂದು ಹೇಳತಕ್ಕದ್ದು ಜಾಸ್ತಿ ಯಾಗುತ್ತಿದೆ. ಕಾರ್ಮಿಕರಿಗೆ ನ್ಯಾಯವನ್ನು ಸರ್ಕಾರದ ಮಟ್ಟದಲ್ಲಿಯೇ ದೊರಕಿಸಿಕೊಟ್ಟರೆ ಈ ಕೋರ್ಟುಗಳೇ ಬೇಕಾಗುವುದಿಲ್ಲ. ಕೆಲವು ಸಲ ಮಾಲೀಕರು ಏನೂ ಕಾರಣವಿಲ್ಲದೆ ನೌಕರರನ್ನು ಡಿಸ್‌ಮಿಸ್ ಮಾಡುತ್ತಾರೆ, ಅಂತಹ ಸಂದರ್ಭಗಳಲ್ಲಿ ನ್ಯಾಯ ಒದಗಿಸಿಕೊಡಬೇಕೆಂದು ಸರ್ಕಾರದ ಹತ್ತಿರ ಬರುತ್ತಾರೆ. ಮತ್ತು ಕೋರ್ಟು ಮೂಲಕ ನ್ಯಾಯ ದೊರಕಿಸಿಕೊಡಬೇಕೆಂದು ಅವರು ಕೇಳಿಕೊಂಡರೂ ಸಹ ಸರ್ಕಾರದವರು not fit for reference ಎಂದು ಹೇಳುತ್ತಾರೆ. ಈ ಒಂದು ಧೋರಣೆಯನ್ನು ಬದಲಾಯಿಸಬೇಕೆಂದು ಹೇಳುತ್ತೇನೆ, ಇಂದು ಅನೇಕ ಮಾಲೀಕ ವರ್ಗದವರು ಅವಾರ್ಡ್ಸ್‌ನ್ನು ಇಂಪ್ಲಿಮೆಂಟ್ ಮಾಡುವುದಿಲ್ಲ. Bipartite ; tripartite ಅಗ್ರಿಮೆಂಟ್ ಏನಾಗಿರುತ್ತದೆ, ಅದನ್ನು ಮಾಲೀಕರು ಇಂಪ್ಲಿಮೆಂಟ್ ಮಾಡುವುದಿಲ್ಲ. ಇದರಿಂದ ಕಾರ್ಮಿಕರಿಗೆ ತೊಂದರೆಯಾಗುತ್ತದೆ, ಆಗ

ಅವರು ಸ್ಟ್ರೈಕ್ ಮಾಡುತ್ತಾರೆ. ಈಗ ತಮಗೆ ಉದಾಹರಣೆಗೆ ಹೇಳಬೇಕೆಂದರೆ. ಎಸ್.ಕೆ.ಎಫ್.ನಲ್ಲಿ ಕಳೆದವರ್ಷ ಸ್ಟ್ರೈಕ್ ಆಯಿತು. ನಂತರ ಒಂದು ಒಪ್ಪಂದವಾಯಿತು. ಆ ಒಂದು ಒಪ್ಪಂದದ ಪ್ರಕಾರ. ಕಂಪನಿಯವರು ಯಾರನ್ನು ಡಿಸ್‌ಮಿಸ್ ಮಾಡಬೇಕೆಂದಿದ್ದರೋ ಅಂತಹವರ ವಿಚಾರದಲ್ಲಿ ಕಾರ್ಮಿಕ ಸಂಘದವರ ಹತ್ತಿರ ಮಾತುಕತೆ ನಡೆಸಿ ನಂತರ ಕ್ರಮ ಕೈಕೊಳ್ಳಬೇಕೆಂದು ತೀರ್ಮಾನವಾಗಿತ್ತು. ಆದರೆ ಮಾಲೀಕರು ಆ ರೀತಿ ನಡೆದುಕೊಳ್ಳದ ಕಾರಣ ಅಲ್ಲಿಯ ಕಾರ್ಮಿಕರು ಪುನಃ ಚಳುವಳಿ ಮಾಡಿದರು. ಆಗ ಮಾಲೀಕರು ಲಾಕೌಟ್ ಮಾಡಿದರು. ನಂತರ ೨೪ ಜನ ಕಾರ್ಮಿಕ ಮುಖಂಡರನ್ನು ಡಿಸ್‌ಮಿಸ್ ಮಾಡಿದರು. ೧೭ ಜನರನ್ನು ಸಸ್ಪೆಂಡ್‌ನಲ್ಲಿಟ್ಟರು. ಈ ಬಗ್ಗೆ ಎನ್‌ಕ್ವೈರಿ ಮಾಡಿಸಲಿಲ್ಲ, ಈ ಕಾರ್ಮಿಕ ಸಂಘದವರು ಮಾನ್ಯ ಮಂತ್ರಿಯವರಿಗೂ ಸಹ ತಮ್ಮ ಬೇಡಿಕೆಗಳನ್ನು ಕಳುಹಿಸಿದ್ದಾರೆ ಆದರೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. You must prosecute such managements for refusing to implement the agreement. ಮತ್ತು ಕಾನೂನಿಗೆ ವಿರುದ್ಧವಾಗಿ ಯಾರು ನಡೆದುಕೊಳ್ಳುತ್ತಾರೋ ಅಂತಹ ಮಾಲೀಕರನ್ನು ಸಹ ಪ್ರಾಸಿಕ್ಯೂಟ್ ಮಾಡಬೇಕೆಂದು ಹೇಳುತ್ತೇನೆ. ಆದರೆ ಇಲ್ಲಿಯವರೆಗೆ ಯಾವುದೇ ಒಂದು ಯೂನಿಯನ್ನಿನ ಸಮಸ್ಯೆಗಳು ಸರ್ಕಾರದ ಬಳಿ ಬಂದಾಗ, ಅದರಲ್ಲಿ ಸತ್ಯಾಂಶವಿದ್ದರೂ ಸಹ ಸಂಬಂಧಪಟ್ಟ ಮಾಲೀಕರನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದನ್ನು ನಾನು ಕಂಡಿಲ್ಲ.

ಶ್ರೀ ಆರ್. ಎಸ್. ಪಾಟೀಲ್.—ಹೋಟೇಲ್ ವರ್ಕರ್‍ಸ್ ಮತ್ತು ಎಸ್.ಕೆ.ಎಫ್.ನವರು ನನ್ನನ್ನು ಬಂದು ಭೇಟಿ ಮಾಡಿದ್ದರು. ಅವರ ಸಮಸ್ಯೆಗಳನ್ನು ಬಗೆಹರಿಸಲು ಸ್ವಲ್ಪ ಸಮಯ ಬೇಕಾಗುತ್ತದೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ತಾವು ಆದಷ್ಟು ಬೇಗ ಕ್ರಮ ಕೈಕೊಂಡರೆ ಬೇರೆಮಾಲೀಕರಿಗೂ ಭಯ ಬರುತ್ತದೆ. ಇಂತಹ ಅನೇಕ ಉದಾಹರಣೆಗಳಿವೆ. In violation of the country's laws they are exporting knowhow. ಮಾಲೀಕವರ್ಗದವರು ಇನ್ನೊಂದು ಏನು ಮೋಸ ಮಾಡುತ್ತಾರೆಂದರೆ ಒಂದೇ ಜಾಗದಲ್ಲಿ ತಯಾರುಮಾಡುವ ಪದಾರ್ಥಗಳನ್ನು ಮೂರು ನಾಲ್ಕು ಜಾಗದಲ್ಲಿ ಅಲ್ಲಿ ಇಷ್ಟು ಇಲ್ಲಿ ಅಷ್ಟು ಎಂದು ಕೆಲಸಗಳನ್ನು ಮಾಡಿಸುವುದು ಒಂದೇ ಜಾಗದಲ್ಲಿ ಎಲ್ಲಾ ಕೆಲಸವನ್ನು ಮಾಡಿಸಿದರೆ ೧೦ ಅಥವಾ ೨೦ ಜನರ ಮೇಲೆ ಒಂದೇ ಜಾಗದಲ್ಲಿ ಕೆಲಸಮಾಡುವುದಾದರೆ ಫ್ಯಾಕ್ಟರೀಸ್ ಆಕ್ಟ್ ಅದೇ ಪ್ರಕಾರ ಬೋನಸ್ ಆಕ್ಟ್ ಅಪ್ಲೈ ಆಗುತ್ತದೆ. ಆದರೆ ಯಾವುದೇ ಬೋನಸ್ ಆಕ್ಟ್ ಇರಲಿ ಅಥವಾ ಅಲ್ಲಿ ಲೇಬರ್ ಲಾಸ್ ಇರಲಿ ಅದು ಈಗ ಇವರಿಗೆ ಅನ್ವಯಿಸುವುದಿಲ್ಲ. ಈ ರೀತಿ ಮಾಡುವುದರಿಂದ ಈ ಕಾರ್ಮಿಕರಲ್ಲಿ ಒಂದು ಅಸಮಾಧಾನ ಉಂಟಾಗಿದೆ. ಆದುದರಿಂದ ಸಂಬಂಧಪಟ್ಟ ಕಾನೂನುಗಳಿಗೆ ಬೇಕಾದಂತಹ ತಿದ್ದುಪಡಿಯನ್ನು ಮಾಡಿ ಆ ರೀತಿ ಮೋಸಮಾಡುವುದಕ್ಕೆ ಅವಕಾಶವಿಲ್ಲದಂತೆ ಎಲ್ಲಾ ಕೆಲಸಗಳನ್ನು ಒಂದೇ ಕಡೆ ಫೈನಲ್ ಅಸೆಂಬಲ್ ಮಾಡುವ ರೀತಿಯಲ್ಲಿ ಮಾಡಿ ಅಥವಾ ಕೆಲಸಗಳು ಬೇರೆ ಬೇರೆ ಜಾಗಗಳಲ್ಲಿ ಮಾಡಿದ್ದರೂ ಸಹ ಅವೆಲ್ಲ ಒಂದೇ ಕಾರ್ಖಾನೆಯೆಂದು ಪರಿಗಣಿಸುವ ಹಾಗೆ ಸರ್ಕಾರದವರು ಒಂದು ಕ್ರಮವನ್ನು ತೆಗೆದುಕೊಳ್ಳಬೇಕು, ಈಗ ಇನ್ನು ಒಂದು ವಿಚಾರ ಏನು ಎಂದರೆ ಫವರ್‌ಲೂಮ್ಸ್ ಏನು ಇವೆ ಅವು ಹೆಚ್ಚಾಗಿ ಕಾಟೇಜ್ ಇಂಡಸ್ಟ್ರೀಸ್ ಆಗಿ ಕೆಲಸಮಾಡುತ್ತಿವೆ ಅಲ್ಲಿ ಏನು ನಡೆಯುತ್ತಿದೆಯೆಂದರೆ ಅಲ್ಲಿ ಒಬ್ಬರು ಪರಮೆನೆಂಟ್ ಕಾರ್ಮಿಕರಾಗಿ ಇರುವುದಿಲ್ಲ. ಕಾರಣವಾದರೂ ಇಷ್ಟೆ; ಪರಮನೆಂಟ್ ಎಂದು ಮಾಡಿದರೆ ಅವನಿಗೆ ಎಲ್ಲಾ ರೀತಿಯಾದ ಸೌಲತ್ತುಗಳನ್ನು ಕೊಡಬೇಕಾಗುತ್ತದೆಂದು ಕ್ಯಾಸುಯಲ್ ಲೇಬರ್ ಆಗಿ ವರ್ಷಾನುಗಟ್ಟಲೆ ಕೆಲಸಮಾಡಿದರು ಅವನನ್ನು ಪರಮನೆಂಟ್ ಮಾಡುವುದಿಲ್ಲ. ಅದರಲ್ಲಿ ಒಂದು ಕೇಸು ನನ್ನ ಗಮನಕ್ಕೆ ಬಂದಿದೆ. ಒಬ್ಬ ೧೩–೧೪ ವರ್ಷದಿಂದ ಬಂದು ಇಂತಹ ಚಿಕ್ಕ ಕಾರ್ಖಾನೆಯಲ್ಲಿ ಕೆಲಸಮಾಡುತ್ತಾ ಬಂದಿದ್ದಾನೆ. ಆದರೆ ಅವನಿಗೆ ೬ ತಿಂಗಳಿಗೊಮ್ಮೆ ಬೇರೆ ಹೆಸರುಗಳನ್ನು ಕೊಡುತ್ತಾ ಹೋಗಿದ್ದಾರೆ, ಅವನು ಎಂದಿಗೂ ಒಂದು ಹೆಸರಿನಲ್ಲಿ ೬ ತಿಂಗಳಮೇಲೆ ಕೆಲಸಮಾಡಿಲ್ಲ. ಬೇರೆ ಬೇರೆ ಹೆಸರಿನಲ್ಲಿ ಅವನಿಂದ ಕೆಲಸಮಾಡಿಸಿಕೊಳ್ಳುತ್ತಾರೆ. ಇವನಿಗೆ ಇಎಸ್‌ಐ ಅಥವಾ ಪ್ರಾವಿಡೆಂಟ್ ಫಂಡ್ ಮತ್ತಿತರ ಯಾವ ಸೌಲತ್ತುಗಳನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಸರ್ಕಾರದ ಗಮನಕ್ಕೆ ತಂದರು ಏನೂ ಆಗುತ್ತಾ ಇಲ್ಲ. ನಾವು ಏನಾದರೂ ಇದನ್ನು ಮಾಲೀಕನ ಅಥವಾ ಸರ್ಕಾರದ ಗಮನಕ್ಕೆ ತಂದರೆ ಅದೇ ದಿವಸ ಅವನು ಡಿಸ್‌ಮಿಸ್ ಆಗುತ್ತಾನೆ. ಅಥವಾ ಚಿಕ್ಕ ಉದ್ದಿಮೆಗಳಲ್ಲಿ ಒಂದು ಸಂಘವನ್ನು ಕಟ್ಟಿದ ಮಾರನೇ ದಿವಸವೇ ಕಾರ್ಮಿಕನನ್ನು ಡಿಸ್‌ಮಿಸ್ ಮಾಡುತ್ತಾರೆ. ಇಂತಹ ವಿಚಾರದಲ್ಲಿ ಸರ್ಕಾರದವರು ಆಸಕ್ತಿ ತೋರಿಸಬೇಕಾಗುತ್ತದೆ. ಇನ್ನು ಕಾಂಟ್ರಾಕ್ಟ್ ವರ್ಕರ್‍ಸ್ ಏನು ಇದ್ದಾರೆ ಅವರಿಗೂ ಇದೇ ರೀತಿಯ

ಟ್ರೀಟ್‌ಮೆಂಟ್ ಸಿಕ್ಕುತ್ತದೆ. ಉದಾಹರಣೆಗೆ ಎಮರ್ಜೆನ್ಸಿ ಕಾಲದಲ್ಲಿ ಒಬ್ಬ ಕ್ವಾರಿ ಮಾಲೀಕನನ್ನು ಒಂದು ತಪ್ಪಿಗಾಗಿ ಜೈಲಿಗೆ ಹಾಕಿದ್ದರು. ಅಲ್ಲಿಯ ಕಾರ್ಮಿಕರಿಗಾಗಿ ಒಂದು ಸೊಸೈಟಿ ಸೆಟ್ ಅಫ್ ಮಾಡಿದರೆ ಅದಕ್ಕೆ ಪ್ರೈವೇಟ್ ಕಂಟ್ರಾಕ್ಟರ್‌ಗಳಿಗೆ ಕೆಲಸ ಕೊಡುವ ರೀತಿಯಲ್ಲಿ ಕೆಲಸ ಕೊಡುತ್ತಿಲ್ಲ ಕೋ ಆಪರೇಟೀವ್ ಬೇಸಿಸ್‌ನಲ್ಲಿ ಇವನ್ನು ನಡೆಸಿದರು ಸಹಾ ಅವರಿಗೆ ಪ್ರೋತ್ಸಾಹ ಸಿಕ್ಕುತ್ತಿಲ್ಲ. ಅದೇ ಪ್ರೈವೇಟ್‌ನವರು ಯಾರಾದರೂ ಕಾಂಟ್ರಾಕ್ಟ್ ಮಾಡಿದರೆ ಅವರಿಗೆ ಪ್ರೋತ್ಸಾಹ ಸಿಕ್ಕುತ್ತಿದೆ. ಅದ್ದರಿಂದ ಇದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮ ಹಾಕಿಕೊಂಡು ಕಾರ್ಮಿಕರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಆರ್ಥಿಕಸಚಿವರು ತಮ್ಮ ಬಡ್ಜೆಟ್ ಸ್ಪೀಚ್‌ನಲ್ಲಿ ವರಮಾನದಲ್ಲಿ ಬಹಳ ತಾರತಮ್ಯವಿದ್ದುದ್ದನ್ನು ಬದಲಾಯಿಸಿದ್ದೇವೆಂದು ಹೇಳಿದ್ದಾರೆ. ಇವರಲ್ಲಿ ಒಂದು ನೋಡುವುದು ಏನು ಎಂದರೆ ಒಂದು ಗೌರ್ನಮೆಂಟ್ ಆಪ್ ಇಂಡಿಯಾ ಪಬ್ಲಿಕೇಷನ್ ಇದೆ. Pocket Book of Labour Statistics 1977, ಎಂಬುದು. ೧೦೭ನೇ ಪುಟದಲ್ಲಿರುವಹಾಗೆ, ರೇಂಜ್ ಆಫ್ ಮಿನಿಮಮ್ ವೇಜಸ್ ಅದರಲ್ಲಿ ಮಿನಿಮಮ್ ವೇಜಸ್ ಒಂದು ರೂಪಾಯಿ ಹಾಗೂ ಮ್ಯಾಕ್ಸಿಮಮ್ ವೇಜಸ್ ೫ ರೂಪಾಯಿ ೬೦ ಪೈಸೆ ಎಂದು ೧೯೭೬ರ ಲೇಟೆಸ್ಟ್ ಸ್ಟಾಟಿಸ್ಟಿಕ್ಸ್ ಆಗಿದೆ. ಅಂವ ಮೇಲೆ ಡಿಸ್‌ಪ್ಯಾರಿಟಿ ಕಡಿಮೆ ಇರುವುದು ಎಲ್ಲಿ ಕಡಿಮೆಯಾಗಿದೆ.? ರೂ. ೧ ರಿಂದ ರೂ. ೫-೬೦ರವರೆಗೆ ಮಿನಿಮಮ್ ವೇಜ್ ಅನ್‌ಸ್ಕಿಲ್ಡ್ ವರ್ಕರ್‌ಗೆ ಎಂದು ನಾವು ಈ ಪುಸ್ತಕದಿಂದ ತಿಳಿಯಬಹುದು. ಆದರೆ ಇನ್ನು ಒಂದು Statistical Outline of Karnataka ೧೯೭೫, ಪುಟ ೧೬೩, ಇದರೊಳಗೆ ಅಗ್ರಿಕಲ್ಚರಲ್ ವೇಜ್ ಟೋಟಲ್‌ನಲ್ಲಿ ಫೀಲ್ಡ್ ಲೇಬರ್, ೧೯೭೪ರಲ್ಲಿ ಗಂಡಸರಿಗೆ ರೂ. ೩-೫೪ ಮತ್ತು ಹೆಂಗಸರಿಗೆ ರೂ. ೨-೨೬ ಎಂದು ಆದರೆ ಅಗ್ರಿಕಲ್ಚರಲ್ ಲೇಬರ್ ಗಂಡಸರಿಗೆ ರೂ. ೩-೩೫ ಮತ್ತು ಹೆಂಗಸರಿಗೆ ರೂ ೨-೪೩ ಎಂದಿದೆ. ಕಾರ್ಮಿಕರು ಹೆಂಗಸರು ಆಗಲಿ, ಗಂಡಸರು ಆಗಲಿ, ಅವರು ಒಂದೇ ಕಾರ್ಮಿಕ ವರ್ಗಕ್ಕೆ ಸೇರಿದವರು. ಅವರು ಒಂದೇ ಕೆಲಸ ಮಾಡುತ್ತಿರುವಾಗ್ಯೂ ಕೂಲಿ ಒಂದೇ ದರದಲ್ಲಿ ಇಲ್ಲ ಇದರಲ್ಲೂ ತಾರತಮ್ಯ ಇದೆ. ಇದೇ ತರಹ ಫೀಲ್ಡ್ ವರ್ಕರ್ಸ್‌ಗೂ ಹೆಚ್ಚಿನ ಕೂಲಿಗೆ ಕ್ಲೈಮ್ ಇರಬೇಕು ಎಂದು ಸರ್ಕಾರದವರು ಸಮರ್ಥಿಸಬೇಕಾಗುತ್ತದೆ ಏಕೆಂದರೆ ೨೦ ಪ್ಯಾಯಿಂಟ್ ಪ್ರೊಗ್ರಾಮ್ ಪ್ರಕಾರ ಹೆಚ್ಚಿನ ಕೂಲಿ ಕೊಡುತ್ತೇವೆಂದು ಹೇಳಲಾಗಿದೆ. ಇನ್ನು ರೂರಲ್ ಸೆಕ್ಟಾರ್ ಬಗ್ಗೆ ಸರ್ಕಾರಕ್ಕೆ ಸ್ವಲ್ಪವೂ ತಿಳುವಳಿಕೆ ಇಲ್ಲವೆಂದು ತೋರುತ್ತದೆ, ಅಲ್ಲಿಯೂ ಕೂಡಾ ಅಗ್ರಿಕಲ್ಚರ್ ಲೇಬರ್‌ರ್ಸ್ ಇದ್ದಾರೆ, ಆದರೆ ಅವರ ಬಗ್ಗೆ ಸರ್ಕಾರವು ಯಾವರೀತಿಯ ಅನುಕಂಪ ತೋರಿಸುವುದು ಇಲ್ಲ. ಅವರಿಗೆ ಪ್ರಾವಿಡೆಂಟ್ ಫಂಡ್ ಅನುಕೂಲವಿಲ್ಲ ಹಾಗೂ ಕಂಪಲ್ಸರಿ ಹೆಲ್ತ್ ಇನ್ಸೂರೆನ್ಸ್ ಇಲ್ಲ. ಆಕಸ್ಮಾತ್ತಾಗಿ ಆಕ್ಸಿಡೆಂಟ್ ಆದಲ್ಲಿ ಅವರಿಗೆ ಕಾಂಪನ್‌ಸೇಷನ್ ಕೊಡುವ ಬಗ್ಗೆ ಏನೂ ಕ್ರಮವಿಲ್ಲ. ಈ ಬಗ್ಗೆ ಸರ್ಕಾರದವರು ಕೂಡಾ ಆಸಕ್ತಿ ತೋರಿಸಬೇಕಾಗುತ್ತದೆ. ಇನ್ನು ಬಾಂಡೆಡ್ ಲೇಬರ್ ವಿಚಾರದಲ್ಲಿ ೭೬-೭೭ರ ರಿಪೋರ್ಟಿನಲ್ಲಿ ಕೆಲವು ಕೇಸಸ್‌ಗಳು ತೀರ್ಮಾನವಾಗಿವೆಯೆಂದು ಬರೆದಿದ್ದೀರಿ. ಆದರೆ ೫೮೩ ಕೇಸಸ್ ರಿಜಿಸ್ಟರ್ ಆಗಿದೆ ಅದರಲ್ಲಿ ೪೩೭ ಕೇಸಸ್ ಇನ್ನು ಹಾಗೆ ಇವೆ. ಅವು ಏನಾಗಿವೆಯೆಂದು ೧೯೭೭-೭೮ರ ವಾರ್ಷಿಕವರದಿಯಲ್ಲಿ ತಿಳಿಸಿಲ್ಲ.

ಶ್ರೀ ಜಿ. ಎಚ್. ಪಟೇಲ—ಬಾಂಡೆಡ್ ಲೇಬರರ್ಸ್ ಹೋದರು. ಈಗ ಇಲ್ಲವೆಂದು ಹೇಳುತ್ತಿದ್ದಾರೆ. ಅವರು ಎಲ್ಲಿಗೆ ಹೋಗಿದ್ದಾರೆ ? ನಮ್ಮ ಎದುರುಗಡೆ ಇರುವ ಜನ ಅಸೆಂಬ್ಲಿಯಲ್ಲಿ ಮತ್ತೆ ಅವರೇ ಆರಿಸಿ ಬಂದಿದ್ದಾರೆ !

ಶ್ರೀ ಮೈಕೇಲ್ ಬಿ. ಪರ್ನಾಂಡಸ್—ವರ್ಕರ್ಸ್ ಪಾರ್ಟಿಸಿಪೇಷನ್ ಇನ್ ಮ್ಯಾನೇಜ್‌ಮೆಂಟ್ ಎಂದು ೨೦ ಪಾಯಿಂಟ್ ಪ್ರೋಗ್ರಾಂನಲ್ಲಿತ್ತು, ಇದು ಕೇವಲ ಸ್ಲೋಗನ್ ಆಗಿ ಇಟ್ಟುಕೊಂಡಿದ್ದಾರೆ ವಿನಹ ಕಾರ್ಮಿಕರಿಗೆ ಅದರಿಂದ ಯಾವರೀತಿಯಿಂದಲೂ ಪ್ರಯೋಜನವಾಗಿಲ್ಲ. ನಾನು ಕೇಳುವುದು ಇಷ್ಟು. ಬೇರೆ ಯಾವ ವಿಷಯಗಳಲ್ಲೂ ಕಾರ್ಮಿಕರ ಪಾರ್ಟಿಸಿಪೇಷನ್ ಇಲ್ಲದಿದ್ದರೂ ಸದ್ಯಕ್ಕೆ ಕೇವಲ ಪ್ರೋಮೋಷನ್ ಹಾಗೂ ಟ್ರಾನ್ಸ್‌ಫರ್ಸ್‌ನಲ್ಲಿ ಹಾಗೂ ರಿಕ್ರೂಟ್‌ಮೆಂಟ್‌ನಲ್ಲಿ ಇವರಿಗೆ ಪಾರ್ಟಿಸಿಪೇಷನ್ ಕೊಟ್ಟರೆ ಈ ವಿಚಾರಗಳಲ್ಲಿ ಅನ್ಯಾಯವಾಗುವುದಿಲ್ಲ. ಪ್ರೋಮೋಷನ್ ಮತ್ತು ಟ್ರಾನ್ಸ್‌ಫರ್‌ಗಳು ಆಡಳಿತ ವರ್ಗದ ಪ್ರೊರ್‌ಗೆಟೀವ್ ಏತಕ್ಕೆ ಆಗಬೇಕು. ಇಂತಹ ವಿಚಾರದಲ್ಲಿ ಕಾರ್ಮಿಕರ ಒಂದು ಪಾರ್ಟಿಸಿಪೇಷನ್ ಇರಬೇಕೆಂದು ಹೇಳುತ್ತೇನೆ. ಇದಕ್ಕೆ ಸರ್ಕಾರದವರು ಇದನ್ನು ಅನುಸರಿಸುವಂತೆ ಮಾಡಬೇಕು. ಅದು ಪಬ್ಲಿಕ್‌ಸೆಕ್ಟಾರ್ ಆಗಲಿ ಅಥವಾ ಪ್ರೈವೇಟ್ ಸೆಕ್ಟಾರ್‌ನಲ್ಲಿ ಕೂಡ ಇದನ್ನು ಅನುಸರಿಸಬೇಕು. ಇದನ್ನು ಏತಕ್ಕೆ ಹೇಳುತ್ತಾ ಇದ್ದೇನೆ ಎಂದರೆ ಟ್ರಾನ್ಸ್‌ಫರ್ ಮಾಡುವಾಗ ಅನೇಕ ರೀತಿಯಿಂದ ಅನ್ಯಾಯ ಮಾಡ್ತು

ತ್ತಾರೆ. ಅನೇಕ ರೀತಿ ತೊಂದರೆಗಳು ಆಗುತ್ತವೆ, ಅನೇಕರೀತಿ ಫ್ಯಾಮಿಲಿ ಲ್ಯಾಫ್ ಡಿಸ್‌ಲೊಕೇಟ್ ಕೂಡಾಆಗುತ್ತದೆ ಟ್ರಾನ್ಸ್‌ಫರ್ಸ್ ಮತ್ತು ಪ್ರೋಮೋಷನ್ಸ್ ತೀರ್ಮಾನಮಾಡುವುದರಲ್ಲಿ ಕಾರ್ಮಿಕರಿಗೆ ಅವಕಾಶ ಕೊಟ್ಟರೆ ಅನ್ಯಾಯವನ್ನು ತಪ್ಪಿಸುವುದಕ್ಕೆ ಅನುಕೂಲವಾಗುತ್ತದೆ. ಇನ್ನು ಇ ಎಸ್ ಐ ಸ್ಕೀಮ್ ನಲ್ಲಿ ಕಾರ್ಮಿಕರು ಹಣವನ್ನು ಕೊಡಬೇಕು, ಆದರೆ ಸರಿಯಾದ ಪ್ರತಿಫಲ ಸಿಕ್ಕುತ್ತಿಲ್ಲಾ. ಇಂತಹ ಸನ್ನಿವೇಶ ದಲ್ಲಿ ಕಾರ್ಮಿಕರು ಇಲ್ಲಿ ಎಕ್ಸ್‌ಮಷನ್ ಕೇಳುತ್ತಾರೆ ಅವರಿಗೆ ಸುಲಭವಾಗಿ ಸರ್ಕಾರದವರು ಕೊಡಬಹುದು. ಇನ್ನು ಕಾರ್ಮಿಕಸಂಘಗಳ ಬಗ್ಗೆ ಹೇಳಬೇಕು ಎಂದರೆ ಇದರಲ್ಲಿ ಒಂದು ಹೊಸ ಪ್ರವೃತ್ತಿ ಕಂಡುಬರುತ್ತಿದೆ. Hitler's strong methods ಏನು ಎಂದರೆ rowdy methods ಇವೊತ್ತು ಗೂಂಡಾಗಿರಿ ಮಾಡುವುದು, ಸುಳ್ಳು ಹೇಳುವುದು, ವಂಚನೆ ಮಾಡುವುದು, ಸಂಘಗಳಿಗೆ ನುಗ್ಗಿ ವಶಪಡಿಸಿಕೊಳ್ಳು ವುದು ಇದೆ. ರೌಡಿಸಂನಿಂದ, ಜಬರ್‌ದಸ್ತಿನಿಂದ ಕಾರ್ಮಿಕರಿಗೆ ಹೆದರಿಸಿ ಸಂಘಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನ ಇದೆ. ಇವರಲ್ಲಿ ನಾವು ಮುಖ್ಯಮಂತ್ರಿಗಳ ಸಂಬಂಧ ಎಂದು ಹೇಳಿಕೊಂಡು ಹೋಗುವುದು ನಡೆದುಕೊಂಡು ಬರುತ್ತಾ ಇದೆ.

ಶ್ರೀ ಆರ್. ಎಸ್. ಪಾಟೀಲ್.—ಮಾನ್ಯ ಸದಸ್ಯರಾದ ಫರ್‌ನಾಂಡೀಸ್ ಅವರನ್ನು ಹೆದರಿಸತಕ್ಕ ಶಕ್ತಿ ಯಾರಿಗೆ ಇದೆ ?

ಶ್ರೀ ಐ. ಪಿ ಡಿ. ಸಾಲಪ್ಪ.—ಸ್ವಾಮಿ, ಈಗ ಮಾನ್ಯ ಸದಸ್ಯರು ರೌಡಿ ಎಂದು ಹೇಳುತ್ತಿದ್ದಾರೆ ಅದು ಯಾರು ಮಾಡಿದರು ಎಂದು ಹೇಳಬೇಕು.

SRI MICHAEL B. FERNANDES.—I cannot match rowdy methods by rowdy methods. Your good sense necessarily is not always a match to evil. ಭಾರತ್ ಫ್ರಿಡ್ಜ್‌ವರ್ಕ್ಸ್‌ನಲ್ಲಿ ಆ ರೀತಿ ಆಗಿದೆ.

ಶ್ರೀ ಕೆ. ಲಕ್ಷ್ಮಣ್.—ನಾನು ಹೋಗಿದ್ದೆ. ಆದರೆ ನಾನು ಮುಖ್ಯ ಮಂತ್ರಿಗಳ ಸಂಬಂಧಿಯಲ್ಲ ಅವರು ಸರಿಯಾಗಿ ತಿಳಿಸಬೇಕು.

ಶ್ರೀ ಮೈಕೇಲ್ ಬಿ. ಫರ್‌ನಾಂಡೀಸ್.—ನಾನು ಹೇಳುವ ವಿಚಾರ ನಿಮಗೆ ಅನ್ವಯಿಸುತ್ತದೆಯೋ ಇಲ್ಲವೋ ನಿಮಗೆ ಏತಕ್ಕೆ ಭಯ ?

ಶ್ರೀ ಜಿ. ಹೆಚ್. ಪಾಟೀಲ್.—ಮೊದಲು ಸ್ವಲ್ಪ ಅನುಮಾನ ಇತ್ತು. ಈಗ ಖಾಯಂ ಆಗುತ್ತಿದೆ.

ಶ್ರೀ ಐ. ಡಿ. ಪಿ. ಸಾಲಪ್ಪ.—ಹಾಗಾದರೆ ಕಾರ್ಮಿಕರ ನಾಯಕರಾಗಿ ಯಾರೂ ಕೆಲಸ ಮಾಡ ಬಾರದು ಎಂದು ಇದೆಯೇ ?

MR. SPEAKER.—It is a general reference.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಈಗ ನಾನು ಮಾನ್ಯ ಸದಸ್ಯರಾದ ಲಕ್ಷ್ಮಣ ಅವರಿಗೆ ಹೇಳಬೇಕು ಎಂದರೆ ನಾನು ಮಾಲೀಕರ ಬಗ್ಗೆ ಮಾತನಾಡುತ್ತಾ ಇಲ್ಲ. ಕಾರ್ಮಿಕರ ಮುಖಂಡರ ಬಗ್ಗೆ ಮಾತನಾಡುತ್ತಿದ್ದೇನೆ. ಇವೊತ್ತು ಭಾರತ್ ಫಿಟ್ಟ್‌ವರ್ಕ್ಸ್‌ನಲ್ಲಿ ಯಾವ ತರಹ ಮೋಸ, ವಂಚನೆ ನಡೆದಿದೆ ಅದನ್ನು ಹೇಳಲಿಕ್ಕೆ ಒಂದು ಗಂಟೆ ಬೇಕಾಗುತ್ತದೆ ಆದ್ದರಿಂದ ನಾನು ಈಗ ಅದನ್ನು ಹೇಳಲಿಕ್ಕೆ ಹೋಗುವುದಿಲ್ಲ. ಇನ್ನು ಲೇಬರ್ ಡಿಪಾರ್ಟ್‌ಮೆಂಟಿಗೆ ಒಂದು ಇನ್‌ವೆಸ್ಟಿಗೇಷನ್‌ಪವರ್ ಕೊಡಿ ಸತ್ಯ ಕಂಡು ಹಿಡಿಯಲಿಕ್ಕೆ ಪ್ರಜಾಪ್ರಭುತ್ವ ರೀತಿಯಿಂದ ಒಂದು ತೀರ್ಮಾನ ತೆಗೆದುಕೊಳ್ಳುವ ಹಕ್ಕನ್ನು ಕೊಡಿ. ತಾವು ಅವರಿಗೆ ಈ ತರಹ ಪವರ್ ಕೊಟ್ಟರೆ ತೊಂದರೆ ಬರುವುದಿಲ್ಲ. ಇಲ್ಲದೇ ಹೋದರೆ ಇದರ ಬಗ್ಗೆ ರಕ್ತಪಾತ ಆಗುವ ಸಂದರ್ಭ ಬರುತ್ತದೆ. ಇವೊತ್ತು ಮುಖ್ಯಮಂತ್ರಿಗಳವರ ಹೆಸರಿಗೆ ಕಳಂಕ ಬರುವುದು ಕಾರ್ಮಿಕ ವರ್ಗದಲ್ಲಿ ನಡೆಯುತ್ತಿದೆ. ಕಾರ್ಮಿಕ ವಿಚಾರದಲ್ಲಿ ಈ ಸಂಘಗಳು ಅಲ್ಲದೆ ಹೌಸಿಂಗ್ ಸೊಸೈಟಿಗಳು ಇವೆ. ಕಾರ್ಮಿಕರು ಬಹಳ ಕಷ್ಟದಿಂದ ಏನು ಸೇವಿಂಗ್ಸ್ ಎಂದು ಮಾಡುತ್ತಾರೆ ಅದನ್ನು ಹೌಸಿಂಗಿಗೆ ಎಂದು ಇಟ್ಟುಕೊಂಡು ಸೊಸೈಟಿಗೆ ಸೇರಿದರು, ಕಡೆಗೆ ಅಲ್ಲಿಯೂ ಕೂಡ ಮೋಸ. ಕೆಲವು ಸಾರಿ ಕಾರ್ಮಿಕ ಮುಖಂಡರು ಸೇರಿಕೊಂಡು ಕಾರ್ಮಿಕರಿಗೆ ವಂಚನೆ ಮಾಡಿದ್ದಾರೆ. ಇವೊತ್ತು ಮೈಕೋ ಕಾರ್ಮಿಕರು ಹಣ ಕೊಟ್ಟಿದ್ದಾರೆ ಆದರೆ ಅವರಿಗೆ ಸೈಟುಗಳು ಸಿಕ್ಕಿಲ್ಲ. ಆ ಕಾರ್ಮಿಕರಿಗೆ ಮೋಸ ಮಾಡಿದವರಿಗೆ ಎಮರ್ಜೆನ್ಸಿಯಲ್ಲಿ ಅರೆಸ್ಟ್ ಮಾಡಿದ್ದರು. ನಂತರ ಅವರನ್ನು ಬಿಟ್ಟಿದ್ದಾರೆ. ಈಗ

ಅವರು ಯಾರ ಜೊತೆಯಲ್ಲಿ ಇದ್ದಾರೋ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿಲ್ಲ. ಇನ್ನು ಬಿನ್ನಿ ಮಿಲ್ಸ್ ಎಂಪ್ಲಾಯೀಸ್ ಕೋ ಅಪರೇಟೀವ್ ಹೌಸಿಂಗ್ ಸೊಸೈಟಿಯಲ್ಲಿ ಸುಮಾರು ನಾಲ್ಕು ವರ್ಷಗಳಾಗಿದೆ, ಅಲ್ಲಿ ಅಡ್ಮಿನಿಸ್ಟ್ರೇರ್ ಅಪಾಯಿಂಟ್ ಮಾಡಿದರೂ ಏನೂ ಕೆಲಸ ಮುಂದುವರೆದಿಲ್ಲ.

ಶ್ರೀ ಆರ್. ಎಸ್. ಪಾಟೀಲ್.—ದಯವಿಟ್ಟು ಆ ವಿಚಾರಗಳನ್ನೆಲ್ಲಾ ಕೋ ಆಪರೇಟೀವ್ ಮಂತ್ರಿಗಳಿಗೆ ತಿಳಿಸಬೇಕು.

SRI MICHAEL B. FERNANDES.—I am requesting the Labour Ministe to have some liaison in these matters so that the workers are kept satisfied. They are not trying to build houses with money got from races or other methods. They are working hard. Unless the Labour Department keeps liaison with the concerned Ministeries they will not be able to live happily. ಇನ್ನು ಜಿ. ಕೆ. ಡಬ್ಲ್ಯೂ. ಹೌಸಿಂಗ್ ಸೊಸೈಟಿ ಇದೆ. There is some encouragement ಇವೊತ್ತು ಅಲ್ಲಿ 300 ಗುಡಿಸಲುಗಳು ಬಂದಿದೆ. The workers are upset. How can they will work in the factory ? ಸಂಬಂಧಪಟ್ಟ ಮಂತ್ರಿಗಳು ಕೂಡ ಬೇರೆ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಮಾತನಾಡಿ ಕಾರ್ಮಿಕರಿಗೆ ಸಹಾಯ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಈಗ ಎಷ್ಟು ಆಕ್ಸಿಡೆಂಟ್‌ಗಳು ಆಗುತ್ತಿವೆ ಎಂದರೆ The rate per thousand has gone up from 19 in 1961 to anywhere between 40 and 45 since 1966. ಈಗ ಫ್ಯಾಕ್ಟರಿಯಲ್ಲಿ ಸೇಫ್ಟಿ ಮೆಜರ್ಸ್ ಏನು ಇದೆ ? ಅದು ಸರಿಯಾಗಿಲ್ಲ. ಅದರ ಬಗ್ಗೆ ಸಂಬಂಧಪಟ್ಟ ಇಲಾಖೆ ಸರಿಯಾಗಿ ನೋಡಿಕೊಳ್ಳುತ್ತಾ ಇಲ್ಲ. Inspectors are small in number, 14 for the whole State. ಇನ್ನು imported type of safety measures ಅದು ನಿಮ್ಮ ವರ್ಕ್ ಕಂಡೀಷನ್‌ಗೆ ಸರಿಹೋಗುವುದಿಲ್ಲ. ಆದುದರಿಂದ ಇಲ್ಲಿ ರಿಸರ್ಚ್ ಮಾಡಿಕೊಂಡು ನಮ್ಮ ಜನರಿಗೆ ಸರಿಹೋಗುವಂತೆ ಸೇಫ್ಟ್ ಮೆಜರ್ ಕೊಡಬೇಕು. ಇದರ ಬಗ್ಗೆ ಚಲನಚಿತ್ರದ ಮುಖಾಂತರ ಎಜುಕೇಷನ್ ಕೊಡಬೇಕು. ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಸ್‌ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನಮಾತನ್ನು ಮುಗಿಸುತ್ತೇನೆ ಇಲ್ಲಿ ಬಹಳ ಭ್ರಷ್ಟಾಚಾರ ನಡೆಯುತ್ತಾ ಇದೆ. ಇದನ್ನು ನಾನು ಕಂಡುಹಿಡಿದ ವಿಚಾರ ಅಲ್ಲ. ಅನೇಕ ಸ್ನೇಹಿತರು ನಮ್ಮ ಹತ್ತಿರ ಕೆಲಸ ಕೊಡಿಸಿ ಎಂದು ಬರುತ್ತಾರೆ, ಎಂಪ್ಲಾಯ್‌ಮೆಂಟ್ ಮುಖಾಂತರ ಹೋದರೆ ಸಾಧ್ಯ ಎಂದು ಹೇಳುತ್ತಾರೆ. ನಾವು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಇಷ್ಟು ಹಣ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ, ಈಗ ಒಬ್ಬರಿಗೆ ಕೆಲಸಕ್ಕೆ ತೆಗೆದುಕೊಳ್ಳುವುದು ಇದ್ದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಹತ್ತು ಜನರ ಹೆಸರನ್ನು ಕಳುಹಿಸಿಕೊಡುತ್ತಾರೆ. ಅಷ್ಟು ಜನರು ಹಣ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಇದು ಸಾಮಾನ್ಯ ಜನರು ಹೇಳತಕ್ಕ ವಿಚಾರ. ಇದರ ಬಗ್ಗೆ ಯಾವ ಒಂದು ಕ್ರಮ ತೆಗೆದುಕೊಳ್ಳಬೇಕು ಎನ್ನುವುದು ನನಗೆ ಗೊತ್ತಾಗುವುದಿಲ್ಲ. ಆದ್ದರಿಂದ ಇಲ್ಲಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಅದರ ಬಗ್ಗೆ ಯೋಚನೆ ಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಪ್ಲೇಸ್‌ಮೆಂಟ್ ಏನು ಇದೆ 2 percent of the strength on the live register is placed in a year. ಒಂದು ವರ್ಷದಲ್ಲಿ ಹೊಸ ಅಪ್ಲಿಕೇಷನ್ ಎಷ್ಟು ಬರುತ್ತದೆ ? 6 per cent new people register their names in a year. But the total strength works out to 2 per cent, growth of unemployment ಇದರಲ್ಲಿ ಕುಡುಬರುತ್ತದೆ.

ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ರಿಜಿಸ್ಟರುಗಳನು ಎಲ್ಲಾ ಕೆಲಸಗಳಿಗೂ ಸಹಾಯಕವಾಗುವ ರೀತಿಯಲ್ಲಿರುವಂತೆ ಇಡಬೇಕು, ೪ನೇ ದರ್ಜೆ ನೌಕರರೂ ಕಂಪಲ್‌ಸರಿ ನೋಟಿಫಿಕೇಷನ್ ಮಾಡುವ ಹಾಗೆ ವ್ಯವಸ್ಥೆ ಮಾಡಬೇಕು. ಈ ರೀತಿ ಇದ್ದರೆ ಭ್ರಷ್ಟಾಚಾರ ಬಹಳ ಕಡಿಮೆಯಾಗಬಹುದು, ಈ ರೀತಿ ಮಾಡುವುದರಿಂದ ಜಾಸ್ತಿ ಸಂಪಾದನೆ ಮಾಡಬೇಕೂಂತ ಅರ್ಥವಲ್ಲ. ಶಾರೀರಕವಾಗಿ ಅಂಗವಿಕಲರಾದವರಿಗೆ ಅಂದರೆ ಕುರುಡರಿಗೆ, ಮೂಕರಿಗೆ, ಮತ್ತು ಕಿವುಡರಿಗೆ ಕೆಲವು ಹುದ್ದೆಗಳನ್ನು ಮೀಸಲಾಗಿಡುವಂತೆ

ವ್ಯವಸ್ಥೆ ಮಾಡಬೇಕು. ಇಂಥ ಒಂದು ಮೀಸಲಾತಿಯನ್ನು ಇಡತಕ್ಕ ಕಾರ್ಖಾನೆಗಳಿಗೆ ಮತ್ತು ಸಂಸ್ಥೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಇವತ್ತು ತರಬೇತಿ ಕೇಂದ್ರಗಳಲ್ಲಿ ಸೀಟುಗಳೇ ಸಿಗುತ್ತಿಲ್ಲ ಶಾಲೆಗಳಲ್ಲಿಯೇ ತರಬೇತಿ ಕೊಡುವಂತ ವ್ಯವಸ್ಥೆಯನ್ನು ಮಾಡಿದರೆ ಬಹುಶ: ಈ ತರಬೇತಿ ಕೇಂದ್ರಗಳಲ್ಲಿ ಆಗತಕ್ಕ ಒತ್ತಡವನ್ನು ಕಡಿಮೆಮಾಡಬಹುದು ಎಂದು ಹೇಳುತ್ತೇನೆ.

೪_೩೦ ಪಿ. ಎಂ.

ಇನ್ನು ಎಕ್ಸೈಜ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ, ಒಬ್ಬರೇ ಮಂತ್ರಿಗಳಿಗೆ ಒಂದು ಕಡೆ ಲೇಬರ್ ಮತ್ತು ಒಂದು ಕಡೆ ಎಕ್ಸೈಜ್ ಖಾತೆಗಳನ್ನು ಕೊಟ್ಟಿದ್ದಾರೆ. ಇದರ ಅರ್ಥ ಕಾರ್ಮಿಕರು ದುಡಿದ ಹಣವನ್ನು ಎಕ್ಸೈಜ್ ನವರಿಗೆ ಕೊಡುವುದು. ಒಂದು ಕಡೆ ಬಾಂಡೆಡ್ ಲೇಬರ್‌ಗಳನ್ನು ತೆಗೆದಿದ್ದೀರಿ, ಇನ್ನೊಂದು ಕಡೆ ಹೊಸದಾಗಿ ಬಾಂಡೆಡ್ ಲೇಬರುಗಳನ್ನು ಸೃಷ್ಟಿ ಮಾಡುವುದಕ್ಕೆ ಅವಕಾಶ ಮಾಡಿದ್ದೀರಿ. ಶೇಷಾದ್ರಿಪುರಂ ಒಂದರಲ್ಲಿ ಸುಮಾರು ೪–೫ ಅರಾಕ್ ಷಾಪುಗಳು ಇವೆ. ದೇವಸ್ಥಾನಗಳ ಹತ್ತಿರ, ಮಸೀದಿಗಳ ಹತ್ತಿರ ಚರ್ಚೆಗಳ ಹತ್ತಿರ ಮತ್ತು ಶಾಲೆಗಳ ಹತ್ತಿರ ಹೆಂಡ ಮತ್ತು ಸಾರಾಯಿ ಅಂಗಡಿಗಳು ಇರಬಾರದೆಂದುಸರ್ಕಾರದಿಂದ ಸರ್ಕುಲರ್ ಇದ್ದರೂ ಕೂಡ ಇಂಥ ಸ್ಥಳಗಳಲ್ಲಿಯೇ ಇವುಗಳು ಜಾಸ್ತಿ ಸಂಖ್ಯೆಯಲ್ಲಿವೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಕನಿಕರ ಇಲ್ಲವೆ ? ಭೂತಲಿಂಗಂ ರಿಪೋರ್ಟುನವರು ಎಕ್ಸೈಸ್ ಬಗ್ಗೆ ಏನು ಸಲಹೆ ಮಾಡಿದ್ದಾರೆ, ಅವುಗಳನ್ನಾದರೂ ಪರಿಶೀಲನೆ ಮಾಡಿ ಹೋಟೆಲ್ ರೀತಿಯಲ್ಲಾದರೂ ಇರುವಂತೆ ವ್ಯವಸ್ಥೆ ಮಾಡಿ. ತುರ್ತುಪರಿಸ್ಥಿತಿಯಲ್ಲಿ ಕುಡಿಯುವವರ ಸಂಖ್ಯೆ ಬಹಳ ಕಡಿಮೆ ಇತ್ತು ಎಂದು ಕಾಣುತ್ತೆ. Quantity consumed in the State in the year 1974, i. e.. before emergency, whisky, brandy, rum etc., was 13 lakhs bulklitres. 1975ರಲ್ಲಿ ಇದು 14 ಲಕ್ಷ ಆಯಿತು, 1977ರಲ್ಲಿ 30 ಲಕ್ಷ ಆಯಿತು, ಬಹುಶ: ಕುಡಿಯುವವರ ಸಂಖ್ಯೆ ಜಾಸ್ತಿಯಾಗಿದೆ ಎಂದು ಕಾಣುತ್ತೆ. ಅರ್‍ಯಾಕ್ ಕೂಡ ಜಾಸ್ತಿ ಹೋಗುತ್ತಿದೆ, ಆದರೆ ರೆವಿನ್ಯೂ ಮಾತ್ರ ಕಡಿಮೆಯಾಗುತ್ತಿದೆ.

Arrack also went up but the revenue did not go up. Revenue went down and drinking went up,

ಮತ್ತೆ, ಅಫೀಮಂ ಬಗ್ಗೆ ಒಂದು ಮಾತು ಹೇಳುತ್ತೇನೆ, ಅಫೀಮು ಕುಡಿದು ಸಿಕ್ಕಿಕೊಂಡವರ ಸಂಖ್ಯೆ 19ಕ್ಕೆ ಇಳಿದಿದೆ, ಇದು ಸಂತೋಷಪಡಬೇಕಾದ ವಿಚಾರ. ಇದು ಒಂದು ಸಂದರ್ಭದಲ್ಲಿ 200 ಕ್ಕಿಂತ ಜಾಸ್ತಿ ಇತ್ತು. ಇದು ಬಹಳ ಇಲ್ಲಿಗಲ್ ರೀತಿಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಸ್ಕೂಲುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹುಡುಗ ಹುಡುಗಿಯರು ಬಹಳ ದೊಡ್ಡ ಪ್ರಮಾಣದಲ್ಲಿ ಇದನ್ನು ತೆಗೆದುಕೊಳ್ಳುತ್ತಾರೆ, ಸರ್ಕಾರ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ನಿಲ್ಲಿಸದಿದ್ದರೆ, ಮುಂದಿನ ಯುವಕರು ಅಸಾಧ್ಯವಾದ ನಾಗರೀಕರಾಗುತ್ತಾರೆಂದು ಹೇಳಿ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ದಾಮೋದರ್ ಮುಲ್ಕಿ (ಮೂಡಬಿದರೆ).—ಮಾನ್ಯ ಅಧ್ಯಕ್ಷರೇ, ಅಬ್ಕಾರಿ ಮತ್ತು ಲೇಬರ್ ಇಲಾಖೆಯ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈಗ ೧೯೬೮ರಲನೇ ಇಸವಿಯಿಂದ ಪ್ರಾಹಿಬಿಷನ್ ರಿಮೂವ್ ಮಾಡಿದಮೇಲೆ ನಮ್ಮ ಇಲಾಖೆಯ ಆಯುವ್ಯಯ ಏರುತ್ತಿದೆ. ಇದು ಬಹಳ ಸಂತೋಷದ ವಿಷಯ ಆದರೆ ಈ ಅಬ್ಕಾರಿ ಇಲಾಖೆಯು ಇನ್ನೂ ತನ್ನ ಕಾರ್ಯನಿರ್ವಹಣೆಯನ್ನು ಉತ್ತಮರೀತಿಯಲ್ಲಿ ಮಾಡಿದರೆ ೪೦ ಕೋಟಿ ಆದಾಯ ಎಂದು ಏನು ಹೇಳಿದ್ದಾರೆ. ಇದನ್ನೂ ಇನ್ನೂ ಹೆಚ್ಚು ಮಾಡಲಿಕ್ಕೆ ಸಾಧ್ಯತೆ ಇದೆ. ಈ ಅಬ್ಕಾರಿ ಇಲಾಖೆಯಲ್ಲಿ ಪ್ರತಿ ವರ್ಷವೂ ಹೋಬಳಿಮಟ್ಟದಲ್ಲಿ ಒಂದೊಂದು ಅಬ್ಕಾರಿ ಪೋಲೀಸ್ ಸ್ಟೇಷನ್‌ಗಳು ಇವೆ. ಅಲ್ಲಿ ಇರತಕ್ಕ ಸಿಬ್ಬಂದಿ ಬಹಳ ವಿರಳ. ಮೂರು ಮಂದಿ ಗಾರ್ಡುಗಳು ಮತ್ತು ಒಬ್ಬರು ಸಬ್ ಇನ್ಸ್‌ಪೆಕ್ಟರ್ ಅಲ್ಲಿ ಹಾಕಿರುತ್ತಾರೆ. ಇವರು ಇವರ ವ್ಯಾಪ್ತಿಗೆ ಬರುವ ೨೦–೩೦ ಗ್ರಾಮಗಳ ಕಾರ್ಯನಿರ್ವಹಣೆ ಮಾಡುವುದು ಕಷ್ಟ ಇದೆ. ಇವರುಗಳು ಸ್ವತಂತ್ರ್ಯವಾಗಿ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ. ಕಂಟ್ರಾಕ್ಟರು ಸಹಾಯ ಪಡೆದು ಅವನ ವಾಹನದಲ್ಲಿ ಒಮ್ಮೆ ಭೇಟಿಕೊಟ್ಟರೆ ಬಹಳ ಶೋಚನೀಯ ಪರಿಸ್ಥಿತಿ ಎಂದು ನಾನು ಹೇಳಬೇಕಾಗಿದೆ. ಈ ಇಲಾಖೆಗೆ ಬೇಕಾದ ವಾಹನಗಳು ಇಲ್ಲ. ಕಂಟ್ರಾಕ್ಟರ್ ಅಧೀನದಲ್ಲಿ ಈ ಇಲಾಖೆಯವರು ಕಂಟ್ರಾಕ್ಟರ ಜನ ಅನ್ಯಾಯಮಾಡಿದರೂ ಕೆಲಸ ಮಾಡಬೇಕ

ಗುತ್ತದೆ. ಈ ಇಲಾಖೆಯ ಸಿಬ್ಬಂದಿಯವರು ಮಕರಾಗಿರಬೇಕಾಗುತ್ತದೆ. ಕಂಟ್ರಾಕ್ಟರ್ ಇಲ್ಲದೆ ಇವರು ಕೆಲಸ ಮಾಡುವುದಕ್ಕೆ ಹೊರಟರೆ ಕಂಟ್ರಾಕ್ಟರುಗಳು ಇವರನ್ನು ಕೆಟ್ಟರೀತಿಯಿಂದ ನಡೆಸಿಕೊಳ್ಳುತ್ತಾರೆ. ನಾನು, ಮಾನ್ಯ ಮಂತ್ರಿಗಳಲ್ಲಿ ವಿಜ್ಞಾಪನೆ ಮಾಡಿಕೊಳ್ಳುವುದೇನೆಂದರೆ ಈ ಇಲಾಖೆಯ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಿ ಈ ಇಲಾಖೆಯ ಅಧಿಕಾರಿಗಳು ಸ್ಥಳಗಳಿಗೆ ಹೋಗುವಾಗ ಕಂಟ್ರಾಕ್ಟರುಗಳನ್ನು ಕರೆದುಕೊಂಡು ಹೋಗಬಾರದೆಂದು ಕಡ್ಡಾಯವಾಗಿ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಕ್ಸೈಸ್ ಡಿಪಾರ್ಟ್‌ಮೆಂಟಿನಲ್ಲಿ ಮುಖ್ಯವಾಗಿ ಡಿಸ್ಟ್ರಿಕ್ಟ್‌ನಲ್ಲಿರುವ ಆಫೀಸರಿಗೆ ಒಂದು ತಿಂಗಳಿಗೆ ಕಡಿಮೆ ಇಲ್ಲ ಅಂದರೆ ೨-೩ ಲಕ್ಷ ರೂಪಾಯಿ ಆದಾಯ ಬರುತ್ತದೆ. ಇದು ಹೇಗೆ ಬರುತ್ತದೆಂಬುದನ್ನು ಕೂಲಂಕಷವಾಗಿ ತಾವು ವಿಚಾರ ಮಾಡಬೇಕು. ಇವತ್ತು ನಾವುಗಳು ಈ ಸದನದ ಒಳಗೆ ಮತ್ತು ಹೊರಗೆ ಅನೇಕ ಸದಸ್ಯರುಗಳು ಇಂಡಿವಿಜೀಯಲ್ ಆಕ್ಷನ್ ಹಾಕಬೇಕೆಂದು ಅನೇಕ ಸಾರಿ ಹೇಳಿದ್ದೇವೆ ಆದರೆ ಸರ್ಕಾರದವರು ಈವತ್ತಿನದಿವಸ ಸಮಾಜವಾದವೆಂದು ಹೇಳುತ್ತಿದ್ದಾರೆ, ಜನರನ್ನು ಮುಂದೆ ತರಬೇಕೆಂದು ಹೇಳುತ್ತಿದ್ದಾರೆ, ಮಧ್ಯವರ್ತಿಗಳನ್ನು ಬಿಡಬಾರದು ಎಂದು ಹೇಳುತ್ತಿದ್ದಾರೆ, ಆದರೆ ಈ ಒಂದು ಇಲಾಖೆಯಲ್ಲಿಸಿಗುವಂಥ ಉನ್ನತ ಮಟ್ಟದ ಮಧ್ಯವರ್ತಿಗಳನ್ನು ತೆಗೆದುಹಾಕಲು ಏಕೆ ಸಾಧ್ಯವಾಗುತ್ತಿಲ್ಲ. ತಾಲ್ಲೂಕು ಮಟ್ಟದಲ್ಲಿ ಅಥವಾ ಡಿಸ್ಟ್ರಿಕ್ಟ್ ಮಟ್ಟದಲ್ಲಿ ಹರಾಜು ಹಾಕತಕ್ಕಂಥ ಸಂದರ್ಭದಲ್ಲಿ ಸಣ್ಣ ಕಂಟ್ರಾಕ್ಟರ್‌ದಾರರು ಯಾರು ಇರುತ್ತಾರೆ, ಸಾಮಾನ್ಯ ಜನರು ಯಾರು ಇರುತ್ತಾರೆ ಅವರಿಗೆ ಕೆಲಸ ಇಲ್ಲದರೀತಿಯಲ್ಲಿ ಒಂದು ಪರಿಸ್ಥಿತಿಯನ್ನು ಉಂಟುಮಾಡಿದ್ದಾರೆ. ಒಂದು ನಿದರ್ಶನವನ್ನು ಹೇಳುವುದಾದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವಾರು ವರ್ಷಗಳಿಂದ ಮಂತ್ರಿಗಳಿಗೆ ಹೇಳುತ್ತಲೇ ಇದ್ದೇವೆ ಇಲ್ಲಿ ಒಂದು ಆಕ್ಷನ್ ಏನು ಹಾಕುತ್ತಿದ್ದಾರೆ ಇದನ್ನು ಇಂಡಿವಿಜಿಯಲ್ ಶಾಪ್ ಆಕ್ಷನ್ ಮಾಡಿ ಎಂದು ಈ ವರ್ಷ ಆಕ್ಷನ್ ನಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದುಸಾವಿರದ ಎರಡನೂರುಮಂದಿ ಸಣ್ಣ ಕಂಟ್ರಾಕ್ಟ್‌ದಾರರಿಗೆ ಈ ಒಂದು ಆಕ್ಷನ್‌ನಿಂದ ಕೆಲಸ ಇಲ್ಲದಂತೆ ಮಾಡಿರುತ್ತಾರೆ. ಸರ್ಕಾರದ ಆದಾಯ ದೃಷ್ಟಿಯಿಂದ ಹೇಳುವುದಾದರೆ ತಾಲ್ಲೂಕ್ಕುಮಟ್ಟದಲ್ಲಿ ಡಿಸ್ಟ್ರಿಕ್ಟ್ ಮಟ್ಟದಲ್ಲಿ ಹರಾಜು ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ, ಇದನ್ನು ಇಂಡಿವಿಷಿಯಲ ಆಗಿ ಮಾಡಿದರೆ ಸರ್ಕಾರಕ್ಕೆ ಬಹಳ ಆದಾಯ ಬರುತ್ತದೆ. ತಮ್ಮ ಇಲಾಖೆಯ ಕೆಲವೊಂದು ಉನ್ನತ ಅಧಿಕಾರಿಗಳಿಗೆ ಈ ರೀತಿಯಾದ ಇಂಡಿವಿಷಿಯಲ್ ಆಕ್ಷನ್ ಮಾಡಿದರೆ ಬಹಳ ಕಷ್ಟವಾಗುತ್ತದೆ. ಅವರಿಗೆ ಬರತಕ್ಕಂಥ ವರಮಾನ ಕಡಿಮೆಯಾಗುತ್ತದೆಂದು ಇಂಡಿವಿಷಿಯಲ್ ಆಕ್ಷನ್‌ಗೆ ಅವಕಾಶ ಕೊಡುತ್ತಿಲ್ಲ. ಆರೀತಿ ಮಾಡಿದರು ಕೆಳಗಿನ ಆಫೀಸರಿಗೆ ಇನ್ನೂರು ಮುನೂರುರೂಪಾಯಿಗಳು ಸಿಕ್ಕಬಹುದು ಆದ್ದರಿಂದ ತಾಲ್ಲೂಕುಮಟ್ಟದಲ್ಲಿ ಗ್ರೂಫ್ ಸಿಸ್ಟಮ್‌ನಲ್ಲಿ ಮಾಡಿದರೆ ಮೇಲಿನ ಆಫೀಸರ್ರರಿಗೆ ಲಕ್ಷಗಟ್ಟಲೇ ಸಿಕ್ಕುತ್ತದೆ. ಆ ಒಂದು ದೃಷ್ಟಿಯಿಂದ ಗ್ರೂಫ್ ಸಿಸ್ಟಮ್ ತಾಲ್ಲೂಕುಮಟ್ಟದಲ್ಲಿಯೇ ಮಾಡಬೇಕೆಂದು ಕೇಳುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕೆಂದು ಸರ್ಕಾರದ ಒಂದು ರೆವಿನ್ಯೂ ದೃಷ್ಟಿಯಿಂದ ಇಂಡಿವಿಷಿಯಲ್ ಆಕ್ಷನ್ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ನಿಮ್ಮ ಇಲಾಖೆಯಲ್ಲಿ ಪ್ರತಿಯೊಂದು ಷಾಪಿಗೂ ಒಂದೊಂದು ಬ್ರಾಂಚ್ ಮಾಡಲಿಕ್ಕೆ ಸಾಧ್ಯವಿದೆ ಆದರೆ ಬ್ರಾಂಚ್ ಮಾಡುವಾಗ ಹಣ ಕೊಡಬೇಕಾಗಿದೆ. ಈವತ್ತು ನಮ್ಮ ಜಿಲ್ಲೆಯ ಇಡಿ ರಾಜ್ಯದಲ್ಲಿ ಎಲ್ಲಿಹೋದರೂ ಪ್ರತಿಯೊಂದು ಷಾಪಿನವರು ಅನಧಿಕೃತವಾಗಿ ಒಂದೊಂದು ಬ್ರಾಂಚ್ ಮಾಡಿಕೊಂಡಿರುತ್ತಾರೆ ಆ ಬ್ರಾಂಚ್‌ಗೆ ಬೋರ್ಡ್ ಇರುವುದಿಲ್ಲ. ಇದಕ್ಕೆ ಇಲಾಖೆಯವರೇ ಸಹಕಾರ ನೀಡುತ್ತಿರುತ್ತಾರೆ, ಸರಕಾರಕ್ಕೆ ಹಣ ಕಟ್ಟುತ್ತಿಲ್ಲ. ಆದ್ದರಿಂದ ಇದನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿದರೆ ಇನ್ನೂ ಹೆಚ್ಚು ಹಣ ಈ ಬಾಬಿನಿಂದ ಬರಲಿಕ್ಕೆ ಸಾಧ್ಯಉಂಟು ಎಂದು ಹೇಳಬಯಸುತೇನೆ.

ಇನ್ನು ಐ.ಡಿ.ಲಿಕ್ಕರ್‌ಬಗ್ಗೆ ಒಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ ಈವತ್ತಿನದಿವಸ ಐ.ಡಿ.ಲಿಕ್ಕರ್ ಮಾಡುವವರು ದಿನೇದಿನೇ ಬಹಳ ಕಡಿಮೆಯಾಗುತ್ತಾ ಇದ್ದಾರೆ. ಆದರೆ ದೊಡ್ಡ ದೊಡ್ಡ ಡಿಸ್ಟಿಲರ್ಸ್‌ನಿಂದ ಅನದಿಕೃತವಾಗಿ ಡೂಟಿ ಕೊಡದೆ ಎಷ್ಟೋ ಲಿಕ್ಕರ್ ಈಚೇಗೆ ಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈವತ್ತು ತಾವು ಏನು ಒಂದು ಲೀಟರ್ ಲಿಕ್ಕರಿಗೆ ೪ ರೂಪಾಯಿ ಡ್ಯೂಟಿಯನ್ನು ಹಾಕುತ್ತಿರುತ್ತೀರಿ, ಆಡ್ಯೂಟಿಯನ್ನು ಕೊಡದೆ ಅನಧಿಕೃತವಾಗಿ ಹೇರಳವಾಗಿ ಕಂಟ್ರಾಕ್ಟ್‌ದಾರರಿಗೆ ಹಣ ಸಿಗುತ್ತಾ ಇದೆ ಅವರು ಎರಡುತರಹದ ಲಾಭವನ್ನು ಪಡೆಯುತ್ತಿದ್ದಾರೆ. ಒಂದು ಡ್ಯೂಟಿಯನ್ನು ಕೊಡದಿರುವುದು, ಮತ್ತೊಂದು ಇನ್‌ಕಂಟ್ಯಾಕ್ಸ್ ಕೊಡದೆ ತಪ್ಪಿಸಿಕೊಳ್ಳುತ್ತಿರುವುದು ಇದನ್ನು ಯಾವರೀತಿ ಹತ್ತಿಕ್ಕಬೇಕು ಎನ್ನುವುದರಬಗ್ಗೆ ಕೂಲಂಕುಶವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಸುಮಾರು ೧೬ಲಕ್ಷ ಬಲ್ಕ್ ಲೀಟರ್ಸ್ ಖರ್ಚಾಗುತ್ತಿದೆ ಎಂದು ಹೇಳಿದ್ದಾರೆ ಆದರೆ ಒಂದು ಕೋಟಿ ಗೂ ಮಿಕ್ಕಿ ಲಿಕ್ಕರ್ ನಮ್ಮ ರಾಜ್ಯದಿಂದ ಡ್ಯೂಟಿ ಫ್ರೀಯಾಗಿ ಹೊರಗೆ ಹೋಗಿ ಮತ್ತೆ ನಮ್ಮರಾಜ್ಯಕ್ಕೆ ಬಂದು ಮಾರಾಟವಾಗುತ್ತಿರುವುದನ್ನು ನಾವುನೋಡುತ್ತಿದ್ದೇವೆ, ಇದನ್ನು ಕೂಲಂಕುಶವಾಗಿ ಪರಿಶೀಲನೆಮಾಡಿ ಇದನ್ನು ತಡೆಗಟ್ಟಿದರೆ ನಮ್ಮ ಆದಾಯವು ಬಹಳಮಟ್ಟಿಗೆ ಹೆಚ್ಚಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ ಈ ಒಂದು ಸೇಂದಿ ವಿಷಯವನ್ನು ತಾವು ಹೇಳುತ್ತಾ ಬಹುಶಃ ಸುಮಾರು ೧೦ ಕೋಟಿ ರೂಪಾಯಿಗಳು ನಮ್ಮ ಸರ್ಕಾರಕ್ಕೆ ಇದರಿಂದ ಲಾಭವಾಗುತ್ತಿದೆ ಎಂದು ಹೇಳಿರುತ್ತೀರಿ. ತಮ್ಮಲ್ಲಿ ಒಂದು ಸಣ್ಣ ಪ್ರಶ್ನೆಯನ್ನು ಅಧ್ಯಕ್ಷರ ಮೂಲಕ ಕೇಳಬಯಸುತ್ತೇನೆ ಸುಮಾರು ಈ ಇಲಾಖೆಯಲ್ಲಿ ಒಂದು ಲಕ್ಷ ಕಾರ್ಮಿಕರು ನಮ್ಮ ರಾಜ್ಯದಲ್ಲಿ ಕೆಲಸಮಾಡುತ್ತಿದ್ದಾರೆ. ಅವರಿಂದ ಈವತ್ತಿನದಿವಸ ನಮ್ಮ ಸರ್ಕಾರಕ್ಕೆ ೧೦ ಕೋಟಿರೂಪಾಯಿಗಳ ಆದಾಯ ಸಿಕ್ಕುತ್ತಿದೆ. ಇಂಥ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರದವರು ಏನು ಮಾಡುತ್ತಿದ್ದಾರೆಂದು ಕೇಳಬಯಸುತ್ತೇನೆ. ಕಳೆದು ೧೯೬೮ನೇ ಇಸವಿಯಿಂದ ಈ ಕಾರ್ಮಿಕರು ಅನೇಕ ಸಲ ಸ್ಟ್ರೈಕ್ ಮಾಡಿರುತ್ತಾರೆ. ಒಬ್ಬ ಕಾರ್ಮಿಕ ೧೦ ರಿಂದ ೩೦ ಮರಗಳಲ್ಲಿ ೬೦ ಸಲವಾದರೂ ಹತ್ತಿ ಇಳಿಯಬೇಕಾಗಿರುತ್ತದೆ. ಅವನಿಗೆ ಸಿಕ್ಕುವ ಹಣ ಬಹಳ ಕಡಿಮೆ ಕಂಟ್ರಾಕ್ಟರ್ ಕೊಟ್ಟಷ್ಟು ಹಣವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಒಂದು ಪರಿಸ್ಥಿತಿಯಲ್ಲಿ ಆತನು ಕೆಲಸ ಮಾಡುತ್ತಿರುತ್ತಾನೆ ಸರ್ಕಾರ ಇವರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈ ಕಾರ್ಮಿಕರು ಮರಹತ್ತಿ ಕೆಲಸ ಮಾಡುತ್ತಿರಬೇಕಾದರೆ ಅನೇಕಸಲ ಅಪಘಾತಕ್ಕೆ ಒಳಗಾಗಿ ಆಸ್ಪತ್ರೆಯಲ್ಲಿ ಮಲಗಿರುವುದನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೋಡಬಹುದು. ಅವರಿಗೆ ಒಂದು ನಯಾಪೈಸೆಯಷ್ಟು ಯಾರಿಂದಲೂ ಸಹಾಯ ಸಿಕ್ಕುತ್ತಿಲ್ಲ ಅವರು ಕೇಳದೆ ಇದ್ದರೂ ಕೂಡ ಒಂದು ಅನುಕೂಲತೆಯನ್ನು ನಮ್ಮ ಸರ್ಕಾರದವರು ಕೊಟ್ಟಿರುತ್ತಾರೆ ಅದೇನೆಂದರೆ ಅವರು ಕೆಲಸ ಮಾಡಲಿಕ್ಕೆ ಅರ್ಹರಾಗಿರುತ್ತಾರೆಂದು ೬ ತಿಂಗಳಿಗೊಮ್ಮೆ ಮೆಡಿಕಲ್ ಸರ್ಟಿಫಿಕೇಟನ್ನು ಕೊಡಬೇಕಾಗಿರುತ್ತದೆ ಆ ಒಂದು ಅನುಕೂಲ ಕೊಟ್ಟಿರುತ್ತಾರೆ ಈ ಒಂದು ಸರ್ಟಿಫಿಕೇಟ್ ತರಲು ಆತನು ಕೊನೆಪಕ್ಷ ೧೦ ರೂಪಾಯಿಗಳನ್ನಾದರೂ ಕೊಡಬೇಕಾಗಿರುತ್ತದೆ- ಇದನ್ನು ದಯವಿಟ್ಟು ಪರಿಶೀಲನೆ ಮಾಡಬೇಕೆಂದು ಅವರೇನಾದರೂ ಅಫಘಾತಕ್ಕೆ ಒಳಗಾದರೆ ಅವನಿಗೆ ಹಣವನ್ನು ಕೊಡುವಂತೆ ಒಂದು ಪ್ರಾವಿಡೆಂಟ್ ಫಂಡ್ ಬೆನಿಫಿಟ್ ಕೊಡಬೇಕು. ಅದರ ಬಗ್ಗೆ ಹಿಂದೆ ಇದ್ದಂಥ ಲೇಬರ್ ಮಿನಿಸ್ಟರ್ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದರೂ ಅವರಿಗೆ ಸಮಯ ದೊರಕಲಿಲ್ಲ. ಈಗಲಾದರೂ ತಾವಾದರೂ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ಮುಖ್ಯವಾದಂಥ ವಿಷಯವೆಂದರೆ ತಾವು ಪ್ರಾಹಿಬಿಷನ್ ಜಾರಿಗೆ ತರಬೇಕೆಂದು ಹೇಳುತ್ತಿದ್ದೀರಿ, ಇದನ್ನು ಜಾರಿಗೆ ತರಬೇಕೆಂದು ಹೇಳುವವರಲ್ಲಿ ನಾನೂ ಒಬ್ಬನಾಗಿರುತ್ತೇನೆ. ನಮ್ಮಲ್ಲಿ ಒಂದು ಪ್ರತೀತಿ ಇದೆ, ಅದೇನೆಂದರೆ ಸೇಂದಿ ಇಳಿಸುವವರು ಸೇಂದಿಯನ್ನು ಕುಡಿಯಬಾರದೆಂದು ಅವರ ವಂಶ ಪಾರಂಪರ್ಯವಾಗಿ ಬಂದ ಪದ್ಧತಿಯಾಗಿರುತ್ತದೆ ಈವತ್ತು ಪ್ರತಿಯೊಂದು ರಾಜ್ಯದಲ್ಲೂ ಸೇಂದಿ ಇರುವುದಿಲ್ಲ ತಮಿಳುನಾಡಿನಲ್ಲಿ ಸೇಂದಿಗೆ ಬದಲಾಗಿ ನೀರಾ ಮಾರಾಟ ಮಾಡುತ್ತಿದ್ದಾರೆ. ಅದೇರೀತಿಯಲ್ಲಿ ಆಂಧ್ರದಲ್ಲಿಯೂ ನೀರಾ ಮಾರಾಟ ಮಾಡುತ್ತಿದ್ದಾರೆ. ಮಹಾರಾಷ್ಟ್ರದಲ್ಲಿಯೂ ಇರುತ್ತದೆ. ನಮ್ಮ ಕರ್ನಾಟಕದಲ್ಲಿ ೧೯೬೮ ವರೆಗೂ ಜಾರಿಯಲ್ಲಿದ್ದು ೧೯೬೮ ರಲ್ಲಿ ಇದನ್ನು ತೆಗೆದುಹಾಕಿದರು, ನೀರಾ ಒಂದು ಉತ್ತಮವಾದ ಪಾನೀಯ ಎಂದು ಸೆಂಟ್ರಲ್ ರಿಸರ್ಚ್ ಸ್ಟೇಷನ್‌ನವರು ರಿಪೋರ್ಟ್ ಕೊಟ್ಟಿರುತ್ತಾರೆ ಎಂಟು ಔನ್ಸ್ ನಿರಾದಲ್ಲಿ ೧೧೩ ಕ್ಯಾಲೊರಿಯ ಶಕ್ತಿ ಇರುತ್ತದೆ ೩೨.೪ ಮಿಲಿಗ್ರಾಂ ಫಾಸ್ಫರಸ್, ೩೫.೪ ಮಿಲಿಗ್ರಾಂ ಕ್ಯಾಲ್ಸಿಯಂ ಹಾಗೂ ಇತರ ಮುಖ್ಯವಾದಂಥ ವಿಟಮಿನ್‌ಗಳು ಇದರಲ್ಲಿ ಇವೆ ಎಂದು ತಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ ಪ್ರಾಹಿಬಿಷನ್ ಮಾಡಿದರೆ ಒಂದು ಲಕ್ಷ ಜನರು ನಿರ್ಗತಿಕರಾಗುತ್ತಾರೆ. ಹಿಂದೆ ಮದ್ರಾಸಿನಲ್ಲಿ ದಿವಂಗತ ರಾಜಗೋಪಾಲಚಾರ್‌ರವರು ಮುಖ್ಯಮಂತ್ರಿ ಆಗಿದ್ದಾಗ ನೀರಾ ಉತ್ಪತ್ತಿಮಾಡತಕ್ಕಂಥ ೬೦ ಕೋಆಪರೇಟಿವ್ ಸೊಸೈಟಿಗಳನ್ನು ತೆಗೆದಿದ್ದು ಈ ಒಂದು ಉದ್ಯಮಕ್ಕೆ ಪ್ರೋತ್ಸಾಹ ನೀಡಿದ್ದರು. ಆದ್ದರಿಂದ ನಮ್ಮ ಸರ್ಕಾರದವರೂ ಕೂಡ ಈ ಒಂದು ಉದ್ಯಮದ ಬಗ್ಗೆ ನಿಕರವಾದ ಆಲೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಇನ್ನೊಂದು ವಿಷಯ ಏನೇದರೆ ಬೆಲ್ಲದ ಉದ್ಯಮ, ಬಹುಶಃ ಅನೇಕ ಸದಸ್ಯರಿಗೆ ತಿಳಿದಿಲ್ಲ. ಈ ಬೆಲ್ಲದ ಉದ್ದಿಮೆ ಸೇಂದಿಯಿಂದ ಬೆಲ್ಲವನ್ನು ತೆಗೆಸುವಂಥಾ ಒಂದು ಉದ್ದಿಮೆ. ಆದುದರಿಂದ ಈ ಒಂದು ಉದ್ಯಮಕ್ಕೆ ಪ್ರೋತ್ಸಾಹ ಕೊಡಬೇಕು ಎಂದು ಕೇಳುತ್ತೇನೆ. ಈ ಬಗ್ಗೆ ಲೈಸನ್ಸ್ ಅನ್ನು ೧೯೬೮ರಲ್ಲಿ ಕ್ಯಾನ್ಸಲ್ ಮಾಡಿದ್ದರು ಮತ್ತೆ ಅದಕ್ಕೆ ಅವಕಾಶ ಕೊಟ್ಟಿದ್ದಾರೆ. ಆದರೆ ಈಗ ಅದಕ್ಕೆ

ಟ್ಯಾಕ್ಸ್ ಕೊಡಬೇಕು. ಈಗ ಈ ಲೈಸನ್ಸ್ ತೆಗೆದುಕೊಳ್ಳುವುದಕ್ಕೆ ಏನೊಂದು ನಿಯಮ ಇದೆ ಅದು ಬಹಳ ತೊಂದರೆಯಿಂದ ಕೂಡಿದೆ. ಈ ಬಗ್ಗೆ ಲೈಸನ್ಸ್ ತೆಗೆದುಕೊಳ್ಳಬೇಕಾದರೆ ವಿಲೇಜ್ ಅಕೌಂಟೆಂಟ್ ಹತ್ತಿರ ಹೋಗಬೇಕು, ರೆವಿನ್ಯೂ ಇನ್‌ಸ್ಪೆಕ್ಟರ ಹತ್ತಿರ ಹೋಗಬೇಕು, ಪೋಲೀಸ್ ಇನ್‌ಸ್ಪೆಕ್ಟರ ಹತ್ತಿರ ಹೋಗಬೇಕು, ಡಿಸ್ಟ್ರಿಕ್ಟ್ ಆಫೀಸ್‌ಗೆ ಹೋಗ ಬೇಕು ಕೊನೆಗೆ ಲೈಸನ್ಸ್ ಅನ್ನು ಡೆಪ್ಯೂಟಿ ಕಮೀಷನ್ ರಿಂದ ಪಡೆದುಕೊಳ್ಳಬೇಕು. ಬೇಕಾದಷ್ಟು ಸುತ್ತಿಕೊಂಡು ಲೈಸನ್ಸ್ ಪಡೆಯಬೇಕಾಗಿದೆ. ಆದುದರಿಂದ ಇದನ್ನು ಸಡಿಲಗೊಳಿಸಬೇಕು ಎಂದು ಕೇಳುತ್ತೇನೆ. ಇದನ್ನು ಡೀಸೆಂಟ್ರಲೈಸ್ ಮಾಡಿ ಆಯಾಯ ತಾಲ್ಲೂಕಿನಲ್ಲಿರತಕ್ಕಂಥಾ ತಾಲ್ಲೂಕು ಆಫೀಸ್‌ನಲ್ಲೋ ಅಥವಾ ಕೋ-ಆಪರೇಟಿವ್ ಮುಖಾಂತರವಾಗಿ ತಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಒಳ್ಳೆಯದು. ಸುಮಾರು ೫ ಸಾವಿರ ಜನರು ಈ ಉದ್ದಿಮೆಯಲ್ಲಿ ನಿರತರಾಗಿದ್ದಾರೆ. ಇದರಿಂದ ಒಳ್ಳೆಯ ಬೆಲ್ಲವನ್ನು ತಯಾರಿಸಲಿಕ್ಕೆ ಸಾಧ್ಯ. ಅದಕ್ಕೋಸ್ಕರ ತಾವು ಇದಕ್ಕೆ ಲೈಸನ್ಸ್ ಕೊಡುವುದನ್ನು ಸ್ವಲ್ಪ ಸಡಿಲಗೊಳಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ೀಳಿಕೊಳ್ಳುತ್ತೇನೆ. ತಾವು ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಈ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿದರೆ ಆ ಬಗ್ಗೆ ರ್ಡರ್ ಕೊಟ್ಟಿಲ್ಲ. ಈಗಲಾದರೂ ಕೂಡ ಆದಷ್ಟು ಬೇಗ ಆ ಆರ್ಡರ್‌ನ್ನು ಹೊರಡಿಸಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಇನ್ನು ಲೇಬರ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಬೀಡಿ ಕಾರ್ಮಿಕರು ಒಂದು ಲಕ್ಷಕ್ಕೂ ಮೀರಿ ಇದ್ದಾರೆ. ಸುಮಾರು ೭೦ ಸಾವಿರ ಕುಟುಂಬ ಗಳು ಇದರಿಂದ ಕೂಲಿ ಮಾಡಿ ಜೀವನ ಮಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರು ಅವರಿಗೆ ಒಂದು ಸಾವಿರ ಬೀಡಿ ಕಟ್ಟಿದರೆ ೫-೨೦ ಪೈಸೇ ಕೊಡಬೇಕು ಅಂತಲೂ ಮತ್ತು ೮ ಪರ್ಸೆಂಟ್ ಬೋನಸ್ ಮತ್ತು ೫ ಪರ್ಸೆಂಟ್ ಲೀವ್ ಬೋನಸ್ ಕೊಡಬೇಕು ಎಂದು ಕಾನೂನು ಮಾಡಿದ್ದರೂ ಸಹಿತ ಅವರಿಗೆ ಇದನ್ನು ಕೊಡುತ್ತಾ ಇಲ್ಲ. ಈ ಮಾತನ್ನು ಹೇಳಬೇಕಾದರೆ ಬೇಸರವಾಗುತ್ತದೆ. ಈ ಕಂಟ್ರಾಕ್ಟರ್ಸ್, ಈ ಬೀಡಿ ಕಟ್ಟುವವರಿಗೆ ಕಾನೂನು ರೀತ್ಯಾ ಅವರಿಗೆ ಏನು ಬೆನಿಫಿಟ್ ಕೊಡಬೇಕೋ ಅದನ್ನು ಕೊಡುತ್ತಾ ಇಲ್ಲ. ಈ ಬಗ್ಗೆ ಕಾನೂನು ಚಲಾಯಿಸುವುದಕ್ಕೆ ಅವರಲ್ಲಿ ಒಂದು ಯೂನಿಟಿ ಇಲ್ಲಾ ಅಲ್ಲದೇ ಅವರು ಈ ಕಂಟ್ರಾಕ್ಟ್‌ದಾರರ ಹತ್ತಿರ ಫೈಟ್‌ಮಾಡುವುದಕ್ಕೆ ಶಕ್ತಿಯೂ ಇಲ್ಲ. ಹೀಗಿರುವುದರಿಂದ ಆ ಕಾರ್ಮಿಕರು ಬಹಳ ತೊಂದರೆಗೊಳಗಾಗಿ, ಶೋಷಣೆ ಸ್ಥಿತಿಗೆ ಒಳಗಾಗಿದ್ದಾರೆ. ಅವರಿಗೆ ಸಿಗುವಂಥಾ ಬೋನ್‌ಸ್ ಅನ್ನೂ ಅವರು ಕೊಡುವುದಿಲ್ಲ. ಆ ಬೀಡಿ ಕಾರ್ಮಿಕರು ಏನಾದರೂ ಆ ಕಂಟ್ರಾಕ್ಟರ್ ಅನ್ನು ಕೇಳಿದರೆ, ಬೀಡಿ ಸರಿಯಾಗಿ ಕಟ್ಟಿಲ್ಲ, ನೂರಕ್ಕಿಂತಲೂ ಹೆಚ್ಚು ಬೀಡಿ ಕಟ್ಟಬೇಕು, ಸಂಬಳ ರಹಿತ ಎನ್ನುತ್ತಾರೆ. ಬೀಡಿಯೆಲ್ಲಾ ಹಾಳು ಮಾಡುತ್ತಾರೆ. ಇಲ್ಲವೇ ತಂಬಾಕು ಕೊಡದೇ ಇರುವುದು ಸರಿಯಾಗಿ ಎಂದು ಈ ರೀತಿಯಾಗಿ ಹೇಳಿ ಅವರಿಗೆ ೫-೨೦ ಪೈಸೇ ಏನು ಕೂಲಿ ಕೊಡಬೇಕೋ ಅದನ್ನು ಕೊಡುತಾ ಇಲ್ಲ. ಈ ಬಗ್ಗೆ ಲೇಬರ್ ಡಿಪಾರ್ಟ್‌ಮೆಂಟಿನವರೂ ಕೂಡ ಏನೂ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ನಾನು ಕಳಕಳಿಯಿಂದ ಹೇಳುತ್ತೇನೆ. ನಾನು ಎರಡು ವರ್ಷದಿಂದ ಈ ಒಂದು ಯೂನಿಯನ್ ಕಟ್ಟಿಕೊಂಡು ಒದ್ದಾಡುತ್ತಾ ಇರುವುದರಿಂದ ನನಗೆ ಇವರ ನಡವಳಿಕೆಗಳ ಬಗ್ಗೆ ಚೆನ್ನಾಗಿ ತಿಳಿದಿರುವುದ ರಿಂದ ನಾನು ಹೇಳುತ್ತಿದ್ದೇನೆ. ನಮ್ಮ ಲೇಬರ್ ಇನ್‌ಸ್ಪೆಕ್ಟರ್ ಆಗಲಿ ಅಥವಾ ಲೇಬರ್ ಕಮೀಷನರ್ ಆಗಲಿ ಅವರ ಹತ್ತಿರ ಹೋಗಿ ಈ ವಿಷಯವನ್ನು ಹೇಳಿದರೆ ಮೊದಲು ಅವರು ಕಂಟ್ರಾಕ್ಟರಿಗೆ ತಿಳಿಸಿಬಿಟ್ಟು ಆನಂತರ ಅದನ್ನು ಪರಿಶೀಲಿಸುವುದಕ್ಕೆ ಬರುತ್ತಾರೆ. ಈಗಾಗಲೇ ಈ ವಿಷಯ ತಮ್ಮ ಗಮನಕ್ಕೆ ಬಂದಿವೆ. ನಾನು ಲೇಬರ್ ಕಮೀಷನರ್‌ರವರಿಗೆ ಒಂದು ಪತ್ರ ಬರೆದ ಆದರೂ ಸಹ ಇಷ್ಟರವರೆಗೆ ಏನು ಕೆಲಸವೂ ಆಗಿಲ್ಲ. ಆದುದರಿಂದ ತಾವು ಒಂದು ನಿರ್ದೇಶನ ಕೊಡಬೇಕು. ತಾಲ್ಲೂಕುಗಳಲ್ಲಿ ಲೇಬರ್ ಇನ್‌ಸ್ಪೆಕ್ಟರ್ ಇದ್ದಾರೆ, ಅವರು ಪ್ರತಿಯೊಬ್ಬ ಬೀಡಿ ಕಂಟ್ರಾಕ್ಟರ್ ಹತ್ತಿರ ಹೋಗಿ ಆ ಕಾರ್ಮಿಕರಿಗೆ ಏನೇನು ಸೌಲಭ್ಯಗಳನ್ನು ಕೊಟ್ಟಿದ್ದಾರೆ ಮತ್ತು ಅವರು ಕೂಲಿ ವಗೈರೆ ಸರಿಯಾಗಿ ಕೊಡುತ್ತಿದ್ದಾರೆಯೋ ಈ ವಿಚಾರದ ಬಗ್ಗೆ ಅದನ್ನು ಪರಿಶೀಲಿಸುವುದಕ್ಕೆ ತಕ್ಕ ಕಾರ್ಯಕ್ರಮ ಕೈಗೊಳ್ಳುವಂತೆ ತಾವು ಒಂದು ಸುತ್ತೋಲೆಯನ್ನು ಕಳುಹಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಕೆಲವು ಅನಾನುಕೂಲಗಳು ಆಗಿವೆ ಎಂದು ಮಾನ್ಯ ವಿರೋದಪಕ್ಷದ ನಾಯಕರು ಏನು ಒಂದು ಮಾತು ಹೇಳಿದರೋ ಅದನ್ನೇ ನಾನು ಸಮರ್ಥಿಸುತ್ತೇನೆ. ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ ಈ ಬಗ್ಗೆ ಒಂದು ನಾನ್‌ಅಫಿಷಿಯಲ್ ಕಮಿಟಿ ಮಾಡಿ. ಅವರು ಯಾವ ರೀತಿ ಕೆಲಸ ಮಾಡುತ್ತಾರೆ ಅನ್ನುವುದನ್ನು ಪ್ರತಿ

ತಿಂಗಗಳಿಗೊಮ್ಮೆ ಪರಿಶೀಲಿಸುತ್ತಾ ಹೋದರೆ ಆವಾಗ ಅವರನ್ನು ಸರ್ಕಾರದಕೈಯ್ಯಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ಕೆಲಸವನ್ನು ಸಹ ಉತ್ತಮಗೊಳಿಸಬಹುದು ? ಇದನ್ನು ತಾವು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ. ಪ್ರತಿ ತಾಲ್ಲೂಕ್ ಲೆವಲ್‌ನಲ್ಲಿ ಒಂದೊಂದು ನಾನುಅಫಿಷಿಯಲ್ ಕಮಿಟಿ ಮಾಡಿ ಅಲ್ಲಿ ಏನೇನಾಗುತ್ತದೆ ಅನ್ನುವುದನ್ನು ಪರಿಶೀಲಿಸುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಮತ್ತೊಮ್ಮೆ ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸಿಪುರ)—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಈ ಬಗ್ಗೆ ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವು ವಿವರಣೆಗಳನ್ನು ಕೇಳುವುದಕ್ಕೆ ಅಪೇಕ್ಷೆಪಡುತ್ತೇನೆ, ಮಾನ್ಯ ಮಂತ್ರಿಗಳು ಉತ್ತರ ಹೇಳತಕ್ಕಂಥಾ ಕಾಲದಲ್ಲಿ ಅಧಿಕಾರಿಗಳಿಗೆ ಇದನ್ನು ಕಳುಹಿಸಿ ಇದಕ್ಕೆ ಉತ್ತರವನ್ನು ತರಿಸಿಕೊಂಡು ಈ ಸಭೆಗೆ ಹೇಳಬೇಕು ಎಂದು ಕೇಳುತ್ತೇನೆ.

೧. ನಮ್ಮ ರಾಜ್ಯದಲ್ಲಿ ಸೇಂದಿ ಎಷ್ಟು ಉತ್ಪಾದನೆಯಾಗುತ್ತದೆ ?

೨. ನಮ್ಮ ರಾಜ್ಯದಲ್ಲಿ ಅದರ ಕನ್‌ಸಂಪ್‌ಷನ್ ಎಷ್ಟು ?

೩. ಟೋಟಲ್ ಕನ್‌ಸಂಷನ್ ೩೦ ಪರ್ಸೆಂಟ್‌ನಲ್ಲಿ ಎಷ್ಟು ಮಾರುತ್ತಾ ಇದ್ದೀರಿ ?

ಇದರಲ್ಲಿ ಹೆಚ್ಚು ಪ್ರೊಡಕ್ಷನ್ ಇಲ್ಲ ಅಂತ ಕೇಳಿದ್ದೇನೆ. 30 percent of the total consumption is going to be produced in Karnataka and the balance 70 percent is additing this Chloral Hydrate. ಈ ರೀತಿ ಮಾಡಿ ಕೆಲವು ಕಂಟ್ರಾಕ್ಟರುಗಳ ಬೊಜ್ಜು ಬೆಳೆಸುತ್ತಿದ್ದೀರಿ. ನನಗೆ ಇದರ ಬಗ್ಗೆ ವಿವರಣೆ ಅಂಕಿ ಅಂಶಗಳ ಸಹಿತ ಒದಗಿಸಿಕೊಡಬೇಕು ಎಂದು ಕೇಳುತ್ತೇನೆ.

೪. ನಮ್ಮ ರಾಜ್ಯದಲ್ಲಿ ಈ ರೆಕ್ಟಿಫೈಡ್ ಸ್ಪಿರಿಟ್ ಯಾವ ಯಾವ ಡಿಸ್ಟಿಲರಿಗಳಲ್ಲಿ ಉತ್ಪಾದನೆಯಾಗುತ್ತಿದೆ ಅನ್ನುವುದನ್ನು ಹೇಳಬೇಕು. ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ, ಹಿರಣ್ಯಕೇಶಿ ಷುಗರ್ ಕಾರ್ಖಾನೆಯಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ, ಬೀದರ್‌ನಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ, ಪಂಪಸಾಗರ್‌ನಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ ಮತ್ತು ಉಗಾರ ಷುಗರ್‌ನಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ. ಜೆಮಿನಿ ಡಿಸ್ಟಲರೀಸ್‌ನಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ ಅನ್ನುವುದನ್ನು ತಿಳಿಸಬೇಕು.

೫. ಇನ್ನು ರೆಕ್ಟಿಫೈಡ್ ಸ್ಪಿರಿಟ್ ಅನ್ನು ಅರ್ರ್ಯಾಕ್ ಆಗಿ ಕನ್‌ವರ್ಟ್ ಮಾಡುವುದಕ್ಕೆ ಯಾವ ಯಾವ ಡಿಸ್ಟಲರೀಸ್‌ಗಳಿಗೆ ಪರವಾನಗಿ ಕೊಟ್ಟಿದ್ದೀರಿ ಅನ್ನುವುದನ್ನು ತಿಳಿಸಬೇಕು, ಮಂಡ್ಯ ಡಿಸ್ಟಿಲರೀಸ್ ನವರು ಎಷ್ಟು ಜಿಲ್ಲೆಗೆ ವಿತರಣೆ ಮಾಡುತ್ತಿದ್ದಾರೆ ಅದನ್ನೂ ಸಹ ತಿಳಿಸಬೇಕು.

೬. ಇನ್ನು ಜೆಮಿನಿ ಡಿಸ್ಟಲರೀಸ್‌ನವರು ಎಷ್ಟು ಜಿಲ್ಲೆಗಳಿಗೆ ವಿತರಣೆ ಮಾಡುತ್ತಿದ್ದಾರೆ ? ವಿತರಣೆ ಮಾಡತಕ್ಕಂಥಾವರ ಅವರದೇ ಆದ ಒಂದು ವೇರ್‌ಹೌಸ್ ಅನ್ನು ಕಟ್ಟಿ ನೀವು ಕೊಡತಕ್ಕಂಥಾ ರೆಕ್ಟಿಫೈಡ್ ಸ್ಪಿರಿಟ್ ಅನ್ನು ಅರ್ರ್ಯಾಕ್ ಆಗಿ ಕನ್‌ವರ್ಟ್ ಮಾಡುವುದಕ್ಕೆ ನೀವು ಅವಕಾಶ ಕೊಟ್ಟಿದ್ದೀರಿ ಎಂದು ನಾನು ಕೇಳಿದ್ದೇನೆ. ಹಿಂದೆ ಶ್ರೀಮತಿ ಈವಾ ವಾಜ್‌ರವರು ಇದ್ದಾಗಲೂ ಈ ಪ್ರಶ್ನೆ ಕೇಳಿದ್ದೆ ಅವರು ಉತ್ತರ ಕೊಡಲಿಲ್ಲಾ. ಈಗಲಾದರೂ ನೀವು ಇದಕ್ಕೆ ಉತ್ತರ ಕೊಡಬೇಕು.

೭. ಸ್ವಾಮಿ, ಗೌರ್‍ನರ್ ಆಡಳಿತ ಕಾಲದಲ್ಲಿ ಈ ಒಂದು ವ್ಯವಸ್ಥೆಯನ್ನು ರದ್ದು ಮಾಡಿದ್ದು ನಿಜವೇ ? ಮತ್ತು ಸರ್ಕಾರದವರು ಜೆಮಿನಿ ಡಿಸ್ಟಲರೀಸ್‌ಗೆ ಅಗ್ರಿಮೆಂಟ್ ಇಲ್ಲ ಎಂದು ರದ್ದು ಮಾಡಿದ್ದು ನಿಜವೇ ? I wanted it fo certain specific purpose ಸ್ವಾಮಿ ತಾವು ಅದನ್ನು ಪುನಃ ರೆಸ್ಟೋರ್ ಮಾಡಬೇಕೆಂದು ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದು ಕೇಳಿದ್ದೇನೆ. ತಮ್ಮ ಎಕ್ಸೈಜ್ ಕಮೀಷನರ್ ಇದನ್ನು ೮೪ರವರೆಗೂ ಕೂಡ ವಿಸ್ತರಣೆ ಮಾಡಬೇಕೆಂದು ತಮಗೆ ಶಿಫಾರಸ್ಸು ಮಾಡಿದ್ದಾರೆಯೇ ? ೧೯೮೧ರವರೆಗೂ ವೇರ್‌ಹೌಸ್ ಅನ್ನು ಮಾಡಿ ರೆಕ್ಟಿಫೈಡ್ ಸ್ಪಿರಿಟ್ ಅನ್ನು ಅರ್ರ್ಯಾಕ್ ಆಗಿ ಕನ್‌ವರ್ಟ್ ಮಾಡುವುದಕ್ಕೆ ಸರ್ವಿಸ್ ಛಾರ್ಜಸ್ ೧೯೮೧ರವರೆಗೂ ಅವರಿಗೆ ೨೦ ಪೈಸೇ ಕೊಡುವುದು ಆದಾದಮೇಲೆ ೧೯೮೪ರವರೆಗೆ ೨೪ ಪೈಸೇ ಹೀಗೆ ಕೊಡುವುದು ಎಂದು

ಶಿಫಾರಸ್ಸು ಮಾಡಿದ್ದಾರೆಯೇ ? ಇದರ ಒಟ್ಟು ಮೊತ್ತ ತಿಂಗಳಿಗೆ ೧೬ ಲಕ್ಷ ರೂಪಾಯಿ ಆಗುತ್ತದೆ. ಸರ್ವಿಸ್ ಛಾರ್ಜು ಅನ್ನುವುದನ್ನು ಒಂದು ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ಗೆ ನೀರು ಹಾಕಿ ರ್‍ಯಾಕ್ ಮಾಡುವುದಕ್ಕೆ ಕೊಡುತ್ತೇವೆ.

೫–೦೦ ಪಿ.ಎಂ.

ನಾವು ಹೋಟೆಲಿಗೆ ಹೋದರೆ ಸರ್ವಿಸ್ ಚಾರ್ಜ್ ಮಾಡುತ್ತಾರೆ. ಅದೇ ರೀತಿ ಇವರಿಗೆ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಸರ್ವಿಸ್ ಚಾರ್ಜನ್ನು ಕೊಡುತ್ತಿದ್ದಾರೆಂದು ಕೇಳಿದ್ದೇನೆ. ನಾನು ಹೇಳುವ ಅಂಕಿ-ಅಂಶಗಳು ತಪ್ಪಾಗಿದ್ದರೆ, ಮಾನ್ಯ ಸಚಿವರು ಕರಾರುವಾಕ್ ಅಂಕಿ-ಅಂಶವನ್ನು ನೀಡಬೇಕು. ರೆಕ್ಟಿಫೈಡ್ ಸ್ಪಿರಿಟನ್ನು ನೀರಿಗೆ ಮಿಶ್ರ ಮಾಡುವುದಕ್ಕಾಗಿ ''ವೇಸ್ಟೇಜ್'' ಎಂದು ಹೇಳಿ ೫ ಪರ್ಸೆಂಟ್ ಕೊಡುತ್ತಿದ್ದುದನ್ನು ರಾಷ್ಟ್ರಪತಿ ಆಡಳಿತಾವಧಿಯಲ್ಲಿ ರದ್ದು ಮಾಡಲಾಗಿದ್ದಿತೆ ? ಇದರಿಂದ ರಾಜ್ಯಸರ್ಕಾರದ ಬೊಕ್ಕಸಕ್ಕೆ ಸುಮಾರು ಅರವತ್ತು ಲಕ್ಷ ರೂಪಾಯಿಗಳ ನಷ್ಟವಾಗುತ್ತಿತ್ತೆ ? ನಾವೇ ಆ ಕೆಲಸ ಮಾಡುತ್ತೇವೆ , ತನ್ಮೂಲಕ ಅದರಿಂದ ಸರ್ಕಾರಕ್ಕೆ ಆದಾಯ ತಂದುಕೊಡುತ್ತೇವೆ ಎಂದು ಪತ್ರ ಬರೆದ ಮಂಡ್ಯ ಡಿಸ್ಟಿಲರಿಯ ಅಧಿಕಾರಿಯನ್ನು ಆ ಜಾಗದಿಂದ ಮೂರು ತಿಂಗಳಿಗೇ ಓಡಿಸಿದಿರಾ? ಏಕೆಂದರೆ ಮಂಡ್ಯ ಡಿಸ್ಟಿಲರಿ ಸರ್ಕಾರದ್ದು, ಖಾಸಗಿ ಮಾಲಿಕತ್ವದಂತಲ್ಲ ಅದು. ಆದುದರಿಂದ, ಮಾನ್ಯ ಸಚಿವರು ಇದರ ಬಗ್ಗೆ ವಿವರಣೆ ಕೊಡಬೇಕೆಂದು ಹೇಳುತ್ತೇನೆ. ಈ ಮಧ್ಯೆ ಅಬ್ಕಾರಿ ಇಲಾಖೆಯ ಆಡಳಿತ ನಿರ್ವಹಣೆ ಮಾಡುತ್ತಿರುವ ಗೃಹ ಖಾತೆಯನ್ನು ತಪ್ಪಿಸಿ, ಸಮಾಜ ಕಲ್ಯಾಣ ಇಲಾಖೆಗೆ ಕೊಡಬೇಕೆಂದು ನಿರ್ಣಯವಾಗಿರುವುದು ಅಥವಾ ನಿರ್ಣಯವಾಗುವ ಹಾದಿಯಲ್ಲಿದೆ ಎಂದು ಕೇಳಿದ್ದೇನೆ. ಹೌದಾದರೆ ಹೌದೆನ್ನಿ, ಇಲ್ಲವಾದರೆ ಇಲ್ಲವೆನ್ನಿ. ನಾನು ಅಂಕಿ-ಅಂಶಗಳ ಮೂಲಕ ಸಾಬೀತುಪಡಿಸುತ್ತೇನೆ. ನನ್ನ ಮಿತ್ರರಾದ ಮಂಗಳೂರಿನ ಶ್ರೀ ದಾಮೋದರ ಮುಲ್ಕಿಯವರು ಬಹಳ ಚೆನ್ನಾಗಿ ಮಾತನಾಡಿದರು. ಅವರನ್ನು ನಾನು ಅಭಿನಂದಿಸಬೇಕಾಗಿದೆ. ಅವರು ಆಡಳಿತ ಪಕ್ಷದ ಸದಸ್ಯರಾಗಿದ್ದರೂ ಅನೇಕ ಪ್ರಮುಖ ವಿಚಾರಗಳ ಮೇಲೆ ಬೆಳಕುಚೆಲ್ಲಿದ್ದಾರೆ. ಸರ್ಕಾರದ ಬೊಕ್ಕಸಕ್ಕೆ ಆಗುವ ಅನಾಹುತವನ್ನು ತಪ್ಪಿಸಬೇಕೆಂದು ಅವರು ಹೇಳಿದ್ದಾರೆ. ಅಂತಹವರು ಈ ಸದನದಲ್ಲಿ ಅನೇಕ ಮಂದಿ ಇದ್ದಾರೆ. ಇನ್ನು ಮುಂದಾದರೂ ರಾಜ್ಯದ ಬೊಕ್ಕಸಕ್ಕೆ ಆಗುವ ಅನಾಹುತವನ್ನು ತಪ್ಪಿಸುವುದರಲ್ಲಿ ಎಲ್ಲ ಸದಸ್ಯರೂ ಪ್ರಯತ್ನಮಾಡಿದರೆ ಒಳ್ಳೆಯದು. ಯಾರೋ ಒಬ್ಬರನ್ನು ಬೆಳೆಸುವುದಕ್ಕಾಗಿ ಸರ್ಕಾರ ಇಷ್ಟು ದೂರ ಹೋಗುವುದು ಸರಿಯಲ್ಲ. ಇಲ್ಲಿ ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳ ಅವ್ಯವಹಾರವಾಗುತ್ತಿದೆ ಎಂದು ಕೇಳಿದ್ದೇನೆ. ಸುಮಾರು ಹತ್ತು ಡಿಪೋಗಳಲ್ಲಿ ವೀಕ್ ಅರಾಕ್ ತಯಾರು ಮಾಡುತ್ತಿದ್ದಾರೆ. ಅಧಿಕಾರಿಗಳೇನಾದರೂ ಇದರ ಗುಣಮಟ್ಟವನ್ನು ಪರೀಕ್ಷಿಸಿದ್ದಾರೆಯೆ? ಏನೋ ಬಡವ ಇದನ್ನು ಕುಡಿಯುತ್ತಾನೆ, ಆನಂದ ಪಡುತ್ತಾನೆ, ಆಮೇಲೆ ಆ ಮುಂಡೇಗಂಡನನ್ನು ನೋಡುವುದಕ್ಕಾಗುವುದಿಲ್ಲ. ಒಂದೊಂದು ಸಾರಿ ಇದನ್ನೆಲ್ಲಾ ನೋಡಿದಾಗ ನನ್ನ ಮನಸ್ಸಿನಲ್ಲಿ ದು:ಖವಾಗುತ್ತದೆ. ಏನೋ ದುರ್ದೈವ ಈ ದೇಶದಲ್ಲಿ ಇದು ನಡೆದುಕೊಂಡು ಹೋಗುತ್ತಿದೆ ಇದೆಲ್ಲಾ ಬಹಳ ದಿವಸ ನಡೆಯುವುದಿಲ್ಲ. ನಾವು ಜನರನ್ನು ಮೋಸ ಮಾಡುವುದರಲ್ಲಿ ಸದ್ಯಕ್ಕೆ ಯಶಸ್ವಿಯಾಗಬಹುದು ; ಆದರೆ ಆ ಯಶಸ್ಸು ಎಲ್ಲಾ ಕಾಲಕ್ಕೂ ಸಾಧ್ಯವೆ ಎನ್ನುವುದನ್ನು ಕಾದು ನೋಡಬೇಕು. This weak arrack is manufactured and supplied in almost all the centres and the whole thing being controlled and monopolised by one gentleman. ನಾನಿಲ್ಲಿ ಅವರ ಹೆಸರನ್ನು ಹೇಳಿದರೆ ಇಲ್ಲಿರುವವರ ಕೆಲವರ ಮನಸ್ಸಿಗೆ ನೋವಾಗುತ್ತದೆ ಅವರೊಬ್ಬರು ಅಗ್ರಗಣ್ಯ ವ್ಯಕ್ತಿ, ಪ್ರತಿಭಾನ್ವಿತರು—ನಮಗೆ ನಿಮಗೆ ರಾಜಕಾರಣದಲ್ಲಿ ಬಹಳ ಮೇಲಿರುವವರು. ಅವರ ಹೆಸರನ್ನು ಹೇಳಬಾರದೆಂದು ನಿಯಮವಿರುವುದರಿಂದ ಹೇಳುವುದಿಲ್ಲ. ಈ ಗ್ಯಾಂಗನ್ನು ಮಾನ್ಯ ಮಂತ್ರಿಗಳು ಭೇದ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಅದು ಸಾಧ್ಯವೇ ನಿಮ್ಮ ಕೈಯಲ್ಲಿ ? I must compliment the then Deputy Commissioner of the Bangalore District. Still there are certain officers in the Karnataka. We have to compliment all those officers. One Mr. Balasubramaniam, the them Deputy Commissioner of Bangalore wrote a D.O. Letter to the Chief Secretary about the irregularity in excise Department. I must openly compliment that officer. ಐ.ಎ.ಎಸ್. ಅಧಿಕಾರಿಗಳಿದ್ದಾರೆ—೧೨೦೦ ರೂಪಾಯಿ ಸಂಬಳ ತೆಗೆದುಕೊಳ್ಳಿವಿ, ಹೊಟ್ಟೆಪಾಡು ನಮ್ಮದೂ ನಡೆಯಲಿ—ಹೇಗೋ ತಳ್ಳಿದರಾಯಿತು ಎಂದು ಕೆಲವರು

ಇದ್ದಾರೆ. ಎಲ್ಲಾ ಐ.ಎ.ಎಸ್. ಅಧಿಕಾರಿಗಳೂ ಹೀಗಿರುವರೆಂದು ನಾನು ಹೇಳುವುದಿಲ್ಲ, ಕೆಲವರು ಇದ್ದಾರೆ. ನಾವು, ಶಾಸಕರೂ ಸಹ ದಿನಕ್ಕೆ ಮೂವತ್ತೊಂದು ರೂಪಾಯಿ ತೆಗೆದುಕೊಳ್ಳುತ್ತೇವೆ, ನಮ್ಮದೂ ನಡೆಯಲಿ, ಹೇಗೋ ಕಾರಭಾರು ನಡೆಯಲಿ ಎಂದು ಹೇಳಿದರೆ ಹೇಗೆ ? ಈ ಇಲಾಖೆಯಲ್ಲಿ ಸುಮಾರು ೨೦ ಕೋಟಿ ರೂಪಾಯಿಗಳಷ್ಟು ಹಣ ಅವ್ಯವಹಾರವಾಗುತ್ತಿದೆ. ಈ ಗ್ಯಾಂಗನ್ನು ಭೇದ ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ತಿಳಿಸಿ, ನಾನು ಕೇಳಿದ ಎಲ್ಲ ಪ್ರಶ್ನೆಗಳಿಗೂ ಅವರಿಂದ ಸಮಂಜಸ ವಾದ ಉತ್ತರವನ್ನು ನಿರೀಕ್ಷಿಸುತ್ತೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ನಾನು ಚರ್ಚೆಯಲ್ಲಿ ಭಾಗವಹಿಸುವುದಿಲ್ಲ, ಒಂದೆರಡು ಪ್ರಶ್ನೆಗಳನ್ನು ಮಾತ್ರ ಕೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಆಗುತ್ತಿರುವ ಬೀರ್ ಉತ್ಪಾದನೆ ಬಗ್ಗೆ ಅಂಕಿ-ಅಂಶಗಳನ್ನು ಸರ್ಕಾರಿ ವಲಯದಿಂದ ಪಡೆದುಕೊಂಡಿದ್ದೇನೆ. ಈ ಅಂಕಿ-ಅಂಶಗಳು ಅಧಿಕೃತವಾದವು. ಇದನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

BEER

Year	Manufactured production in the State lakhs of Bulk litres	Rate of duty as per State Excise Act	Maximum revenue State should get Rs. lakhs	Actual yield: Shown in the Budget	Actual yield: Difference
		Rs. Ps.			
1972-73	116,39,877	1.15	133.86	58.60	75.26
1973-74	113,18,448	1.15	153.16	122.16	31.00
1974-75	115,95,581	1.45	168.14	139.96	28.18
1975-76	110,67,637	1.45	160.48	112 06	48.42
					182.86
		IMFL			
1972-73	138,31,216	20.40	2821.57	247.18	2574.39
1973-74	171,53,799	20.40	3499.37	283.87	3205.50
1974-75	162,27,337	20.40	3310.38	413.13	2907.27
1975-76	120,43,280	20.30	2456.83	450.50	2006.33
					106,93.49

If excise duty is levied on the quantity produced in the State we should have got the amount I mentioned with the result that we have suffered a total loss of Rs. 182.86 lakhs in respect of beer and Rs. 106,93.49 lakhs in respect of other liquors.

The production as these liquors has gone down which is contrary to facts. It has actually increased. This shows that lot of liquor production has escaped excise duty. About 30% of the liquor produced by the distillaries is sold without excise duty being levied upon it.

My hon'ble Friend referred to a very great and powerful man who has got influence and political pull in the State. His distillary was attempted to be inspected by the officers. These officers were not permitted to enter his premises. The superior officer then went and tried to intervene. He showed the provision of law and issued notice. Even then they were not allowed to inspect the distillery. He has written a D.O. letter to the Excise Commissioner stating all the facts and no action has been taken by Government on that. I want to know what action has been taken by the Government on the report of their own officer who was not allowed to enter the distillery. I do not know how the Excise Dept. is running. The officer is of the grade of Deputy Commissioner of Excise who has got all the powers under the Act to inspect the distillery and when he went to inspect he was kicked out. He is keeping duplicate accounts, duplicate books, incriminating articles and he wanted to inspect but he was not permitted andhe has written a D.O. letter What is the action taken on that? In turn this Commercial Tax Officer who is the present Home Commissioner has written a D.O. letter to the then Chief Secretary Sri G.V.K. Rao. I do not want to comment on the ability of that officer. What action has been taken on that by the Government? I know it is not within the limits of the Excise Minister. If he lays his hands on this matter, he will be finished. If they want, I can give a copy of the D.O. letter written by the then Commissioner to the Chief Secretary and the D.O. letter written by the Deputy Commissioner of Bangalore District to the Chief Secretary.

Statement of the Minister for Transport and Tourism

re : K.S.R.T.C. Bus Accident near Sira

SRI R. GUNDU RAO(Minister for Transport and Tourism)—On 24th July 1978 at about 0700 hours a Lorry of Rekhi Road Lines Private Ltd., bearing registration No MHT 9306 loaded with cotton yarn and leather goods, driven by one Mazar of Sira Town, was going from Sira towards Hiriyur on National High way 4. At a distance of about 3 kms. from Sira towards Hiriyur a K.S.R.T.C. Bus bearing No. MYE 4486 which was coming from Bijapur and going to Bangalore, driven by one S.M. Khadhar, came at a high speed driven in a rash and negligent manner. This Bus came to the extreme right and dashed against the right side of the lorry damaging the entire right portion